ದುಡಿವ ಜನರ ಪ್ರಾಣಮಿತ್ರ

ಜನಶಕ್ತಿ

ಕನ್ನಡ ವಾರಪತ್ರಿಕೆ

ಸಂಪುಟ 2 ಸಂಚಿಕೆ 51

ಡಿಸೆಂಬರ್ 21, 2008

ರೂ. 5/-



ಕೋಮುವಾದ-ಭಯೋತ್ಪಾದನೆ ವಿರುದ್ಧ ದುಡಿಯುವ ವರ್ಗ ರಾಜ್ಯವ್ಯಾಪಿ ಸೌಹಾರ್ದ ಜಾಥಾ



ವಿಧಾನ ಸಭಾ ಚುನಾವಣೆ :

ಮತಾಂಧರ ಪ್ರಚಾರಕ್ಕೆ ಸೊಪ್ಪು ಹಾಕದ ಮತದಾರ



ಕಬ್ಬು ಬೆಳೆಗಾರರ ಪಾಲಿಗೆ ಕಹಿ



'ಕರಾವಳಿ ಅಲೆ'ಯ ಮೇಲೆ ಚೆಡ್ಡಿಗಳ ಅಲೆ ಅಲೆ ದಾಳಿ

ಜನಶಕ್ತಿ ಕನ್ನಡ ವಾರಪತ್ರಿಕೆ

ನೋಟ

1857ರ ಘಟ್ಟ ಕೋಮು ಸೌಹಾರ್ದತೆಯ ಶ್ರೀಮಂತಿಕೆ


ಇತಿಹಾಸದಲ್ಲಿ ಭಾರತೀಯ ಸಮಾಜದಲ್ಲಿ ಹಿಂದೂ-ಮುಸ್ಲಿಂ ಸಮುದಾಯಗಳ ನಡುವೆ ಎಂತಹ ಸಾಮರಸ್ಯ ಮನೆ ಮಾಡಿತ್ತು. ಸೌಹಾರ್ದತೆ ಹೇಗೆ ಅವರ ಬದುಕಿನಲ್ಲಿ ಹಾಸು ಹೊಕ್ಕಾಗಿತ್ತು ಎಂದು ತಿಳಿದುಕೊಳ್ಳುವುದೇ ಒಂದು ಚೇತೋಹಾರಿಯಾದ ಅನುಭವ.



ಡಾ. ಜಿ. ಭಾಸ್ಕರ ಮಯ್ಯ

ಮತಧರ್ಮಗಳು ಬೇರೆ ಬೇರೆಯಾಗಿದ್ದರೂ ಒಂದು ಸಮಾಜದಲ್ಲಿ ಜನ ಯಾವುದೇ ತಿಕ್ಕಾಟ, ಸಂಘರ್ಷಗಳಿಲ್ಲದೆ ನೆಮ್ಮದಿಯಿಂದ ಇರುತ್ತಾರೆ. ಜಗತ್ತಿನಲ್ಲಿ ಒಂದೇ ಜನಾಂಗವಿರುವ ದೇಶಗಳೇ ವಿರಳ. ಭಾರತವು ಶತಮಾನಗಳಿಂದ ಇಂತಹ ಸೌಹಾರ್ದಯುತವಾದ ಸಮಾಜಗಳನ್ನು ಹೊಂದಿತ್ತು. ಬಿಪಿನ್‌ಚಂದ್ರ ಪಾಲ್ ನಮ್ಮ ದೇಶದ ಸ್ವಾತಂತ್ರ್ಯ ಹೋರಾಟದ ಪ್ರಸಿದ್ಧ ಮುಖಂಡರು. ಅವರು ತಮ್ಮ ಆತ್ಮಕತೆಯಲ್ಲಿ ತಮ್ಮ ಸಿಲ್‌ಹಟ್ ಹಳ್ಳಿಯಲ್ಲಿ ಮತೀಯ ಕಾರಣಗಳಿಗಾಗಿ ಎಂದೂ ಗಲಭೆಯಾದುದನ್ನು ಕಂಡಿಲ್ಲ ಎನ್ನುತ್ತಾರೆ. ಅವರು ಹೀಗೆ ಬರೆಯುತ್ತಾರೆ -

"ನಮ್ಮ ಹಳ್ಳಿಗಳ ಸಮಾಜವು ಸಾಮರಸ್ಯದಿಂದ ಕೂಡಿತ್ತು. ಎಲ್ಲಾ ಪ್ರಮುಖ ಹಿಂದೂ ಜಾತಿಗಳೂ ಅಲ್ಲಿದ್ದವು. ಮುಸ್ಲಿಮರೂ ಸಾಕಷ್ಟು ಸಂಖ್ಯೆಯಲ್ಲಿದ್ದರು. ಅವರೆಲ್ಲರ ನಡುವೆ ಒಳ್ಳೆಯ ಹೊಂದಾಣಿಕೆಯಿತ್ತು. ಪೂಜೆಯೊಂದನ್ನು ಬಿಟ್ಟು ಮನೆಯ ಪ್ರತಿಯೊಂದು ಸಮಾರಂಭಕ್ಕೂ ಮುಸ್ಲಿಮರನ್ನು ಕರೆಯುತ್ತಿದ್ದರು. ಈದ್ ಇಲ್ಲವೆ ಮದುವೆ ಸಮಾರಂಭಗಳಲ್ಲಿ ಪರಸ್ಪರ ಕೊಡುಗೆಗಳನ್ನು ನೀಡಲಾಗುತ್ತಿತ್ತು….. "



ಸಾಮರಸ್ಯದ ಬದುಕಿನ ವಾಸ್ತವವನ್ನು ಹಿಂದುತ್ವ ಸಿದ್ಧಾಂತಿ ಸಾವರ್‌ಕರ್ ಕೂಡ ನಿರಾಕರಿಸಲು ಸಾಧ್ಯವಿಲ್ಲ

ನನಗೆ ಈಗಲೂ ನೆನಪಿದೆ. ನನ್ನ ನೆರೆಕರೆಯ ಮುಸ್ಲಿಮರು ಶ್ರಾದ್ಧ ಅಥವಾ ಸಾವಿನ ನಂತರ ನಡೆಯುವ ಯಾವುದೇ ಕರ್ಮಕಾಂಡದ ಸಂದರ್ಭದಲ್ಲಿ ಬಟ್ಟೆ ಮತ್ತು ಸ್ವಲ್ಪ ಹಣವನ್ನು ನಮಗೆ ಕೊಡುತ್ತಿದ್ದರು. ನಾವೂ ಹಾಗೆಯೇ ಮಾಡುತ್ತಿದ್ದೆವು. ಎಲ್ಲಾ ಮುಸ್ಲಿಮರ ಬಗೆಗೆ ಇದೇ ರೀತಿಯ ಬಾಂಧವ್ಯವಿತ್ತು. ಬೇರೆಬೇರೆ ಮತಾಚರಣೆಗಳು ಎರಡೂ ಸಮುದಾಯಗಳ ಸೌಹಾರ್ದ ಸಂಬಂಧಗಳಿಗೆ ಯಾವುದೇ ತಡೆಯನ್ನುಂಟು ಮಾಡುತ್ತಿರಲಿಲ್ಲ.

1930 ರ ದಶಕದಲ್ಲಿ ಪಂಜಾಬಿನ ಆರ್ಥಿಕ ಪರಿಶೀಲನಾ ಬೋರ್ಡ್ ಒಂದು ಹಳ್ಳಿಯ ಸಮೀಕ್ಷೆಯ ವರದಿಯಲ್ಲಿ ಹೀಗೆ ಬರೆದಿತ್ತು-

"ಇಟ್ಟಿಗೆಯಲ್ಲಿ ಕಟ್ಟಿದ ಎರಡು ಮಸೀದಿಗಳಿವೆ. ಎರಡೂ ಉತ್ತಮ ಸ್ಥಿತಿಯಲ್ಲಿವೆ. ವೆರಾಂಡದಲ್ಲಿ ಯಾತ್ರಿಗಳಿಗೆ ಮತ್ತು ದಿಬ್ಬಣದವರಿಗೆ ವಿಶಾಲವಾದ ಎರಡು ಹಾಲ್‌ಗಳಿದ್ದವು. ಇಲ್ಲಿ ಯಾವುದೇ ಮತಧರ್ಮದವರೂ ಉಳಿದು ಕೊಳ್ಳಬಹುದು. ಪರಿವೀಕ್ಷಣಾಧಿಕಾರಿಗಳಿಗೆ ಮಸೀದಿಯ ಆ ಹಾಲಿನಲ್ಲಿ ಹಿಂದೂ ಮದುವೆ ದಿಬ್ಬಣದವರು ತಂಗಿರುವುದು ಕಂಡು ಬಂದಿತು. ಅವರು ಧಾರ್ಮಿಕ ಹಾಡುಗಳನ್ನು ಹಾಡುತ್ತಿದ್ದರು. ನಮಾಜಿನ ಸಮಯದಲ್ಲಿ ಹಾಡುವುದನ್ನು ನಿಲ್ಲಿಸುತ್ತಿದ್ದರು. ಹಳ್ಳಿಯ ಜನರು ಅನಂತಕಾಲದಿಂದ ಹೀಗೆಯೇ ವಾಸಿಸುತ್ತಾ ಬಂದಿದ್ದಾರೆ."

ಹಾಸುಹೊಕ್ಕಾದ ಸೌಹಾರ್ದತೆ

ನಮ್ಮ ದೇಶದ ಮೊದಲ ರಾಷ್ಟ್ರಪತಿ ರಾಜೇಂದ್ರ ಪ್ರಸಾದ್ ಅವರು ತಮ್ಮ ಜೋಡಿ ಹಳ್ಳಿಗಳಾದ 'ಜಿರಾದೇಯಿ' ಮತ್ತು 'ಜಮಾಪುರ'ದ ಬಗ್ಗೆ ತಮ್ಮ ಆತ್ಮಕತೆಯಲ್ಲಿ ಹೀಗೆ ಬರೆದುಕೊಂಡಿದ್ದಾರೆ:

'ಗ್ರಾಮೀಣ ಜೀವನದಲ್ಲಿ ಧರ್ಮಕ್ಕೆ ಬಹಳ ಮಹತ್ವವಿದೆ ಮತ್ತು ಹಿಂದೂ ಮುಸ್ಲಿಮರ ನಡುವೆ ಉತ್ತಮ ಸಾಮರಸ್ಯವಿದೆ ಎಂಬುದು ಸ್ಪಷ್ಟವಾಗಿ ಕಂಡುಬರುವ ಸತ್ಯ. ಮುಸ್ಲಿಮರು ಹಿಂದೂಗಳೊಡನೆ ಹೋಳಿ ಹಬ್ಬದ ಆಚರಣೆಯಲ್ಲಿ ಭಾಗವಹಿಸುತ್ತಿದ್ದರು. ದಸರಾ, ದೀಪಾವಳಿ ಮತ್ತು ಹೋಳಿ ಹಬ್ಬದ ಸಂದರ್ಭಗಳಲ್ಲಿ ಮೌಲವಿಗಳು ವಿಶೇಷ ಪದ್ಯಗಳನ್ನು ರಚಿಸಿ ಹಾಡುತ್ತಿದ್ದರು' ಹಿಂದೂಗಳು ಮುಹರಮ್ಮಿನ ದಿನ ತಾಜಿಯಾ (ಹಸನ, ಹುಸೈನರ ಗೋರಿಗಳ ಸಾಂಕೇತಿಕವಾದ ಒಂದು ರಚನೆ) ತ'ಗ'ದ'ಂಕ'ಊಂಡ'ಂ ಹ'ೂೀಗ'ಂತ್ತಿದ್'ದ್ರ'ಂ. ಶ್ರೀಮಂತರಾದ ಹಿಂದೂಗಳ 'ತಾಜಿಯಾ' ಬಡ ಮುಸ್ಲಿಮರ 'ತಾಜಿಯಾ'ಕ್ಕಿಂತ ದೊಡ್ಡದೂ, ಆಕರ್ಷಕವೂ ಆಗಿರುತ್ತಿತ್ತು. ತಾಜಿಯಾಗಳ ಮೆರವಣಿಗೆಯ ವಾತಾವರಣ ಅತ್ಯಂತ ಉತ್ಸಾಹದಿಂದ ಕೂಡಿರುತ್ತಿತ್ತು. ಅಲ್ಲಿ ಹಿಂದೂ, ಮುಸ್ಲಿಂ ಎಂಬ ಭೇದವೇ ಕಾಣಿಸುತ್ತಿರಲಿಲ್ಲ.'

(ಮೇಲಿನ ಉಲ್ಲೇಖಗಳನ್ನು ನಾನು ಇತಿಹಾಸಕಾರ ಬಿಪಿನ್‌ಚಂದ್ರ ಅವರು ಬರೆದ Communalisum: A Study ಪುಸ್ತಕದಿಂದ ಆಯ್ದುಕೊಂಡಿದ್ದೇನೆ)

ಇಂದಿಗೂ ಭಾರತದ ನೂರಾರು ಹಳ್ಳಿಗಳಲ್ಲಿ ಹಿಂದೂ ಮುಸ್ಲಿಂ ಸಾಮರಸ್ಯದ ಅನೇಕ ಉದಾಹರಣೆಗಳಿವೆ. ಹಿಂದೂ ಮುಸ್ಲಿಮರು ಒಟ್ಟಾಗಿ ಪೂಜಿಸುವ ದೇವಮಂದಿರಗಳಿವೆ, ಪೂಜಾ ಸ್ಥಾನಗಳಿವೆ.

ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ (1587) ಒಂದು ದೊಡ್ಡ ಹೋರಾಟಗಾಥೆ. ಆ ಸಂಗ್ರಾಮದಲ್ಲಿ ಹಿಂದೂ ಮತ್ತು ಮುಸ್ಲಿಮರು ಯಾವ ರೀತಿಯಲ್ಲಿ ಒಂದಾಗಿ ಬ್ರಿಟಿಷರ ವಿರುದ್ಧ ಹೋರಾಡಿದರೆಂದರೆ ಬ್ರಿಟಿಷ್ ಸಾಮ್ರಾಜ್ಯ ನಡುಗಿ ಹೋಯಿತು. ದಿಲ್ಲಿಯ ಯುದ್ಧದಲ್ಲಿ ಇಂಗ್ಲೀಷ್‌ರಿಗೆ ಉಂಟಾದ ಅಪಾರ ಹಾನಿಯು ಅವರಿಗೆ ರಷ್ಯಾದೊಂದಿಗೆ ನಡೆಸಿದ 'ಸೆವಾಸ್ತಪೋಲ್' ಯುದ್ಧದಲ್ಲಿಯೂ ಉಂಟಾಗಿರಲಿಲ್ಲ. ಈ ಸಂದರ್ಭದಲ್ಲಿ ಭಾರತೀಯರು ಎಷ್ಟೊಂದು ಸಾಮರಸ್ಯದಿಂದ ಹೋರಾಡಿದರು ಎಂಬುದಕ್ಕೆ ಮೂಲಾಧಾರವೇ ಮೇಲೆ ಉದಾಹರಿಸಿದ ಭಾರತದ ಸಾಮರಸ್ಯದ ಜೀವನ. ಈ ಕುರಿತು ಕೆಲವು ವಿವರಗಳು:

ಈ ಮಣ್ಣಿನ ಮಕ್ಕಳು

ಸಾವರ್‌ಕರ್ ಹಿಂದೂ ಮೂಲಭೂತವಾದದ ಕೋಮುವಾದದ ಪಿತಾಮಹ. ಮಹಾತ್ಮ ಗಾಂಧೀಜಿಯವರ ಹತ್ಯೆಯ ಸಂಚಿನ ರೂವಾರಿ. ಆದರೆ ಅದೇ ಸಾರ್ವಕರ್ 1907 ರಲ್ಲಿ '1857: ಭಾರತದ ಸ್ವಾತಂತ್ರ್ಯ ಸಂಗ್ರಾಮ' ಎಂಬ ತಮ್ಮ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:

'ಹಿಂದೂ ಮುಸ್ಲಿಮರು ಹಿಂದೂಸ್ಥಾನದ ಈ ಮಣ್ಣಿನ ಮಕ್ಕಳು. ಅವರ ಹೆಸರುಗಳು ಬೇರೆ ಬೇರೆ ಇರಬಹುದು. ಅವರೆಲ್ಲರೂ ಒಂದೇ ತಾಯಿಯ ಮಕ್ಕಳು. ಅವರು ರಕ್ತ ಸಂಬಂಧೀ ಸಹೋದರರು. ನಾನಾ ಸಾಹೇಬ್, ಖಾನ್ ಬಹಾದೂರ್ ಖಾನ್, ಮೌಲವೀ ಅಹಮದ್ ಶಾಹ್ - ತಮ್ಮ ನಡುವಿನ ಭಿನ್ನಾಭಿಪ್ರಾಯಗಳು ಏನೇ ಇದ್ದರೂ, ಅವುಗಳನ್ನು ತ್ಯಜಿಸಿ, ಸ್ವದೇಶದ ಬಾವುಟದ ಕೆಳಗೆ ಒಂದುಗೂಡಿದರು'.

ಸಾವರ್‌ಕರ್ 1857ರ ಮೌಲವಿಗಳ ರಾಷ್ಟ್ರಭಕ್ತಿಯನ್ನು ಮುಕ್ತಕಂಠದಿಂದ ಶ್ಲಾಘಿಸುತ್ತಾರೆ. 'ಮಹಾನ್ ಸಂತ ವ್ಯಕ್ತಿತ್ವದ ಅಹಮದ್ ಶಾಹ್‌ರವರು ಲಖ್ನೋ ಮತ್ತು ಆಗ್ರಾದ ಮೂಲೆ ಮೂಲೆಗಳಲ್ಲಿ ಸ್ವಾತಂತ್ರ್ಯ ಹೋರಾಟದ ಜಿಹಾದ್ ಜಾಲವನ್ನು ಅತ್ಯಂತ ಚೊಕ್ಕಟವಾಗಿ, ಬುದ್ಧಿವಂತಿಕೆಯಿಂದ ಹರಡಿದರು. ಜಿಹಾದಿನ ಬೀಜ ಪಾಟ್ನಾ ಪಟ್ಟಣದಲ್ಲಿ ಎಷ್ಟೊಂದು ಬೇರು ಬಿಟ್ಟಿತ್ತೆಂದರೆ ಇಡೀ ಪಟ್ಟಣವೇ ಕ್ರಾಂತಿಕಾರಿ ದಳವಾಗಿ ಪರಿಣಮಿಸಿತ್ತು. ಮೌಲವಿಗಳು, ಪಂಡಿತರು, ಜಮೀಂದಾರರು, ವ್ಯಾಪಾರಿಗಳು, ವಕೀಲರು, ವಿದ್ಯಾರ್ಥಿಗಳು ಮತ್ತು ಎಲ್ಲಾ ಜಾತಿಧರ್ಮಗಳ ಜನರು ಸ್ವದೇಶಕ್ಕಾಗಿ ಜೀವ ಕೊಡಲು ತಯಾರಾಗಿದ್ದರು'.

ತಮ್ಮ ಪುಸ್ತಕದಲ್ಲಿ ಅವರು ಮೇ 11, 1857 ರಂದು 'ಬಹಾದೂರ್ ಶಾಹ್ ಜಫರ್'ನನ್ನು ದಿಲ್ಲಿಯ ಸುಲ್ತಾನನ್ನಾಗಿ ಘೋಷಿಸಿದ್ದಕ್ಕೆ ಸಂತಸ ವ್ಯಕ್ತಪಡಿಸಿದ್ದರು. ಸಾವರ್‌ಕರ್ ಪ್ರಕಾರ

ಬಹದೂರ್ ಷಾ



ಸ್ವಾತಂತ್ರ್ಯವೆಂದರೆ ಹಿಂದೂ ಮುಸ್ಲಿಮರ ಒಕ್ಕೂಟದ ಆಡಳಿತ. ಅವರು ಹೀಗೆ ಬರೆಯುತ್ತಾರೆ. 'ಅವರೆಲ್ಲರೂ ಸಹೋದರರು. ಆ ವೈಭವದ ದಿನಗಳನ್ನು ಹಿಂದೂಸ್ತಾನದ ಇತಿಹಾಸ ಸದಾ ಸ್ಮರಿಸುವುದು'.

ಯಾವ ಕ್ರಾಂತಿಕಾರಿ ಸೇನೆ ಬಹಾದೂರ್ ಶಾಹ್ ಜಫರ್‌ನನ್ನು ಭಾರತದ ಶಾಸಕನೆಂದು ಘೋಷಿಸಿತ್ತೋ ಅದರಲ್ಲಿ ಶೇ. 70 ಕ್ಕಿಂತ ಹೆಚ್ಚು ಹಿಂದೂ ಸೈನಿಕರೇ ಇದ್ದರು. ಆತನಿಗಾಗಿ ಹೋರಾಡಿದವರಲ್ಲಿ ಮಹಾನ್ ರಾಷ್ಟ್ರಭಕ್ತ ಯೋಧರಾದ ತಾಂತ್ಯಾ ಟೋಪಿ, ನಾನಾ ಸಾಹೇಬ್ ಮತ್ತು ಲಕ್ಷ್ಮೀಬಾಯಿ ಇದ್ದರು. ಹಿಂದೂ ಸೈನಿಕರಲ್ಲಿ ಶೇ. 75 ರಷ್ಟು ಯೋಧರು ಉಚ್ಚ ಜಾತಿಯವರಾಗಿದ್ದರು. ಅಂದರೆ ಇದರ ಅರ್ಥ 'ಕೋಮು ದ್ವೇಷ' ಎಂಬ ಪದವೇ ಆಗ ಅಸ್ತಿತ್ವದಲ್ಲಿರಲಿಲ್ಲ. ಎಲ್ಲರೂ ಒಂದಾಗಿ ದೇಶಕ್ಕಾಗಿ ಪ್ರಾಣ ತೆತ್ತರು.

ಬ್ರಿಟಿಷರ ಸೇನೆಯಲ್ಲಿ:

ಜನರಲ್ ಠಖ್ತ್ ಖಾನ್ ಇದ್ದರೆ ಬ್ರಿಗೇಡಿಯರ್ - ಭಗೀರಥ ಮಿಶ್ರ್, ಮೇಜರ್ ಶೇಖ್ ಗೌಸ್ ಮಹಮ್ಮದ್, ಸುಬೇದಾರ್ ಮೇಜರ್ ಧನೀರಾಮ್, ಸೇವಾರಾಮ್ ಮಿಶ್ರ್, ಕರ್ನಲ್ ನತ್ತುಸಿಂಹ್, ಕರ್ನಲ್ ಉಮರ್ ಖಾನ್, ಕರ್ನಲ್ ಶಮಶೇರ್ ಸಿಂಹ್. ಕಲ್ಕತ್ತಾದಿಂದ ಪೇಶಾವರದ ತನಕ ಎಲ್ಲಾ ಬ್ರಿಟಿಷ್ ತುಕಡಿಗಳಲ್ಲಿ ಹಿಂದೂ ಮುಸ್ಲಿಮ್ ಸೈನಿಕರು ಒಗ್ಗಟ್ಟಾಗಿ ಹೋರಾಟ ನಡೆಸಿದರು. ಇನ್ನೊಂದೆಡೆ ಬ್ರಿಟಿಷರು ಕೋಮು ಗಲಭೆ ಹಬ್ಬಿಸಲು ಪ್ರಯತ್ನಿಸುತ್ತಿದ್ದರು. ಮುಸ್ಲಿಮರನ್ನು ದಿಕ್ಕು ತಪ್ಪಿಸಲು 'ಯುದ್ಧ ಹರಾಮ್', ಹಿಂದೂಗಳ ಸೇನೆ ಮುಸ್ಲಿಮರನ್ನು ವಂಚಿಸುತ್ತಿದೆ. ಶರಿಯತ್ತಿನ ಪ್ರಕಾರ ಇಂಗ್ಲೀಷರ ಜೊತೆಗೂಡಿ ಹಿಂದೂಗಳನ್ನು ನಾಶ ಮಾಡಿರಿ ಎಂದು ಪ್ರಚಾರ ಮಾಡುತ್ತಿದ್ದರು. ಮುಸ್ಲಿಂ ಲೇಖಕರು ಇದನ್ನು ವಿರೋಧಿಸಿ ಪತ್ರಿಕೆಗಳನ್ನು ಪ್ರಕಟಿಸಿದರು. ಕರಪತ್ರಗಳನ್ನು ಹಂಚಿದರು. 'ರದ್ದೇ ಇಶ್ತಿಹಾರೇ ನಸಾರಾ' (ಇಂಗ್ಲೀಷರ ದುರ್ಭೋದನೆಯ ಖಂಡನೆ) ಕಿರುಪುಸ್ತಕ ಬರೆದು ಹಂಚಿದರು.

ಅಯೋಧ್ಯೆ : ನೇಣುಗಂಬ ಏರುವಲ್ಲೂ ಹಿಂದೂ ಮುಸ್ಲಿಂ ಐಕ್ಯತೆ

1992ರಲ್ಲಿ ಅಯೋಧ್ಯೆ ಹಿಂದೂ ಮುಸ್ಲಿಮರ ನಡುವೆ ದ್ವೇಷದ ಜ್ವಾಲಾಮುಖಿಯನ್ನೇ ಸೃಷ್ಟಿಸಿತು. ಆದರೆ ಅದೇ ಅಯೋಧ್ಯೆಯಲ್ಲಿ 1857ರ ಮೌಲವಿಗಳು, ಮಹಂತರು ಹಾಗೂ ಹಿಂದೂ ಮುಸ್ಲಿಂ ಜನಸಾಮಾನ್ಯರು ಬ್ರಿಟಿಷರ ವಿರುದ್ಧ ಹೋರಾಡಿ ನೇಣುಗಂಬವನ್ನೇರಿದರು. ಅಯೋಧ್ಯೆಯ ಸುಪ್ರಸಿದ್ಧ ಮೌಲವಿ ಮೌಲಾನಾ ಅಮೀರ್ ಅಲಿ, ಹನುಮಾನ್ ಗದ್ದಿಯ ಅರ್ಚಕ ಬಾಬಾ ರಾಮ್‌ಚರಣ್ ದಾಸ್ ಒಟ್ಟಾಗಿ ಬ್ರಿಟಿಷರ ವಿರುದ್ಧ ಸಶಸ್ತ್ರ ಹೋರಾಟ ನಡೆಸಿದರು. ಇಬ್ಬರನ್ನು ಬಂಧಿಸಿದ ಇಂಗ್ಲೀಷರು ಅವರನ್ನು ಅಯೋಧ್ಯೆಯ ಕುಬೇರ ಬೆಟ್ಟದ ಹುಣಸೇ ಮರಕ್ಕೆ ನೇತು ಹಾಕಿದರು. ಅವರು ಜತೆಜತೆಯಾಗಿ ಸತ್ತರು. 1857ರ ಇನ್ನಿಬ್ಬರು ನಾಯಕರು ಫೈಜಾಬಾದ್ (ಅಯೋಧ್ಯೆಯ ಜಿ… ಅಚ್ಚನ್ ಖಾನ್ ಮತ್ತು ಶಂಭು ಪ್ರಸಾದ್ ಶುಕ… ಇವರನ್ನು ಕ್ರೂರ ಹಿಂಸೆ ಕೊಟ್ಟು, ಹಗ್ಗ ಕ…

ಪುಟ 1…

ಸಂಪಾದಕೀಯ

ಉಪ ಚುನಾವಣೆ : ಕೋಮುವಾದಿಗಳನ್ನು ತಿರಸ್ಕರಿಸಿ ಮೂರನೇ ಪರ್ಯಾಯ ಪುರಸ್ಕರಿಸಿ

ಕರ್ನಾಟಕದ ವಿಧಾನಸಭೆಯ ಎಂಟು ಸ್ಥಾನಗಳ ಉಪಚುನಾವಣಾ ಪ್ರಕ್ರಿಯೆಗಳು ಬಿರುಸುಗೊಂಡಿವೆ. ಡಿ-27 ರಂದು ಮತದಾನ ನಡೆಯಲಿದೆ.


ಇದರಲ್ಲಿ ಮದ್ದೂರು ಕ್ಷೇತ್ರದ ಜೆಡಿ(ಎಸ್) ಅಭ್ಯರ್ಥಿಯ ಅಕಾಲಿಕ ಸಾವು ಬಿಟ್ಟರೆ ಉಳಿದ ಏಳು ಕ್ಷೇತ್ರಗಳ ಚುನಾವಣೆಗಳು ಬಿಜೆಪಿಯೇ ಸೃಷ್ಟಿಸಿದ ಪಾತಕದ ಫಲ. ಹೇಗಾದರೂ ತನ್ನ ಬಲ ಹೆಚ್ಚಿಸಿಕೊಳ್ಳಬೇಕೆಂಬ ದುಷ್ಟ ರಾಜಕೀಯ ತಂತ್ರವಾದ 'ಆಪರೇಷನ್ ಕಮಲ'ದ ಹೆಸರಿನಲ್ಲಿ ವಿರೋಧ ಪಕ್ಷಗಳ ಚುನಾಯಿತ ಶಾಸಕರನ್ನೇ ಖರೀದಿಸಿದ್ದು, ಇಂತಹ ಮತ್ತೊಂದು ಚುನಾವಣೆಯನ್ನು ಹೇರಿದ್ದು ಪ್ರಜಾಪ್ರಭುತ್ವಕ್ಕೆ ಧಕ್ಕೆ ತಂದಿರುವ ಸಂಗತಿಯಾಗಿದೆ. ಬಹುಮತ ಗಳಿಕೆಯ ಹಾತೊರೆಕೆಯಲ್ಲಿ ಹಣ, ಅಧಿಕಾರದಂತಹ ಅಕ್ರಮ ವಿಧಾನಗಳನ್ನು ಅನುಸರಿಸಿರುವುದು ಖಂಡನೀಯ.

ಬಿಜೆಪಿ ಈಗಲೂ ಈ ಚುನಾವಣೆಗಳಲ್ಲಿ ಅಂತಹದ್ದೇ ಅಕ್ರಮ ವಿಧಾನಗಳಿಗೆ ಮೊರೆ ಹೋಗುತ್ತಿದೆ. ಗೆದ್ದೇ ಗೆಲ್ಲಬೇಕೆಂಬ ಅತ್ಯುತ್ಸಾಹದಲ್ಲಿರುವ ಬಿಜೆಪಿಗೆ ಈ ಬಾರಿಯೂ ಭೂ ಹಾಗೂ ಗಣಿ ಮಾಫಿಯಾಗಳೇ ಚುನಾವಣೆಯ ಸಾರಥ್ಯವನ್ನು ವಹಿಸಿವೆ. ಆದಕ್ಕಾಗಿಯೇ ಯಡಿಯೂರಪ್ಪನವರ ಮೇಲೆ ಧಮಕಿ ಹಾಕುತ್ತಿದ್ದ ಗಣಿ ಧಣಿಗಳಿಗೆ ಮಣೆ ಹಾಕಿದ ಹೊಸ ಗಣಿ ನೀತಿಯನ್ನು ಪ್ರಕಟಿಸಿ ಸಂತೃಪ್ತಗೊಳಿಸಿದ್ದಕ್ಕೂ - ಈ ಚುನಾವಣೆಯ ವಾಸನೆಯಿದೆ. ಸಂಕುಚಿತ ರಾಜಕೀಯ ಹಿತಾಸಕ್ತಿಗಳಾಗಿ ರಾಜ್ಯದ ಹಿತವನ್ನೇ ಬಲಿಗೊಡಲು ಬಿಜೆಪಿ ಹಿಂದೆ ಮುಂದೆ ನೋಡುತ್ತಿಲ್ಲ. ಚುನಾವಣಾ ಹೋರಾಟ ಪ್ರಮುಖವಾಗಿ ಬಿಜೆಪಿ, ಜೆಡಿ(ಎಸ್) ಕಾಂಗ್ರೆಸ್ ಪಕ್ಷಗಳ ನಡುವೆಯೇ ತ್ರಿಕೋನ ಸ್ಪರ್ಧೆ ಇರುವಂತೆ ಕಾಣುತ್ತಿದೆ. ಬಹುತೇಕ ಅಭ್ಯರ್ಥಿಗಳ ಆಯ್ಕೆಯಲ್ಲಿ ಹಾಗೂ ಚುನಾವಣೆಯನ್ನು ಎದುರಿಸುವಲ್ಲಿ ಯಾವುದೇ ನೀತಿ-ನಿಲುವುಗಳು ಅಷ್ಟೊಂದಾಗಿ ಪ್ರಮುಖವಾಗದಿರುವ ಮಾನದಂಡಗಳೇ ಇಲ್ಲೂ ಮುಂದುವರೆದಿವೆ. ಬಿಜೆಪಿ ಹಣ, ಸರ್ಕಾರದ ಅಧಿಕಾರವನ್ನು ಎಗ್ಗಿಲ್ಲದೆ ದುರ್ಬಳಕೆ ಮಾಡುತ್ತಿದೆ. ಚುನಾವಣಾ ಪೂರ್ವದಲ್ಲೇ ಸರ್ಕಾರದ ಹಣವನ್ನು ವಿಶೇಷವಾಗಿ ಈ ಕ್ಷೇತ್ರಗಳಿಗೆ ಅಧಿಕ ಪ್ರಮಾಣದಲ್ಲಿ ಸುರಿಯಲಾಗಿದೆ. ಅದು ಈಗಲೂ ಮುಂದುವರೆಯುತ್ತಿದೆ.

ಬಿಜೆಪಿಯು ತನ್ನ ಬಹುಮತಕ್ಕೆ ಕಡಿಮೆ ಇರುವ ಮೂರು ಸ್ಥಾನಗಳಲ್ಲದೇ ಇನ್ನೂ ಹೆಚ್ಚಿನ ಸ್ಥಾನ ಪಡೆದು ಭದ್ರವಾಗಲು ಯೋಜನೆ ರೂಪಿಸಿದೆ. ಬಿಜೆಪಿ ಅಧಿಕಾರದ ಈ ಆರು ತಿಂಗಳಲ್ಲಿ ಜನರ ಹೆಗಲ ಮೇಲೆ ಸಂಕಷ್ಟಗಳ ಮೂಟೆ ಹೇರುತ್ತಲೇ ಹೋಗಲಾಗಿದೆಯೇ ಹೊರತು ಪರಿಹಾರವಲ್ಲ. ಅದು ರೇಷನ್, ವಿದ್ಯುತ್, ಬೆಲೆ ನಿಯಂತ್ರಣ, ಯಾವುದರಲ್ಲಿಯೂ ಬಿಜೆಪಿ ಪರಿಹಾರವಲ್ಲ ಎಂಬುದು ಸಾಬೀತಾಗಿದೆ. ಅಲ್ಲದೆ ರಾಜ್ಯದಲ್ಲಿ ಕೋಮುಸಾಮರಸ್ಯಕ್ಕೆ ಧಕ್ಕೆ ತರುವ ಕೋಮುವಾದಿ ಧಾಳಿಗಳು ರಾಜ್ಯದ ಸೌಹಾರ್ದತೆಯ ವಾತಾವರಣವನ್ನೇ ನಾಶಗೊಳಿಸುತ್ತಿದೆ. ಪ್ರಜಾಪ್ರಭುತ್ವ ಜಾತ್ಯಾತೀತತೆಯ ಕಡುವೈರಿಯಾಗಿರುವ ಫ್ಯಾಸಿಸ್ಟ್ ಆರ್.ಎಸ್.ಎಸ್‌ನ ಆಟಾಟೋಪಗಳಿಗೆ ತಡೆಯಿಲ್ಲದ ಮುಕ್ತ ಅವಕಾಶ, ಸಹಾಯ ನೀಡಲಾಗುತ್ತಿದೆ. ಒಂದು ವೇಳೆ ಬಿಜೆಪಿಗೆ ಈ ಚುನಾವಣೆಯಲ್ಲಿ ಗೆಲುವುಂಟಾದರೆ ಅದು ಇಡೀ ಕರ್ನಾಟಕದ ಹಾಗೂ ದೇಶದ ಜನತೆಗೂ ಹಾನಿಕಾರಕವಾಗಿ ಪರಿಣಮಿಸಲಿದೆ. ಸರ್ಕಾರ-ಸಂಘ ಪರಿವಾರದ ಕೃತ್ಯಗಳು ಇನ್ನಷ್ಟು ಭಯೋತ್ಪಾದಕ ಶಕ್ತಿಗಳ ಬೆಳವಣಿಗೆಗೆ ಕುಮ್ಮಕ್ಕು ನೀಡುವಂತಹವಾಗಿವೆ. ಆದ್ದರಿಂದ ಈ ಉಪಚುನಾವಣೆಯಲ್ಲಿ ಜನದ್ರೋಹಿಗಳೂ ಪಕ್ಷಾಂತರಿಗಳೂ ಆಗಿರುವ ಕೋಮುವಾದಿ ಬಿಜೆಪಿ ಅಭ್ಯರ್ಥಿಗಳನ್ನು ಜನತೆ ಸೋಲಿಸಲೇಬೇಕು.

ಈ ಅವಧಿಯಲ್ಲಿ ರಾಷ್ಟ್ರಮಟ್ಟದಲ್ಲಿಯೂ ರಾಜ್ಯದಲ್ಲಿಯೂ ಕಾಂಗ್ರೆಸ್ ಪಕ್ಷವು ಜನತೆಯ ಹಿತ ಕಾಯುತ್ತಿಲ್ಲ. ಬದಲಾಗಿ ಜನವಿರೋಧಿ ನೀತಿಗಳಿಂದ, ಸಾಮ್ರಾಜ್ಯಶಾಹಿ ಅಮೇರಿಕಾಕ್ಕೆ ಶರಣಾಗುವ ನೀತಿಗೆ ಜೋತುಬಿದ್ದಿದೆ. ಹಾಗೂ ಕೋಮುವಾದ, ಭಯೋತ್ಪಾದನೆಯನ್ನೂ ಪರಿಣಾಮಕಾರಿಯಾಗಿ ಎದುರಿಸುವಲ್ಲಿ ಕಾಂಗ್ರೆಸ್ ವಿಫಲವಾಗಿದೆ. ದೇಶದಲ್ಲಿ ಬಿಜೆಪಿ ಕಾಂಗ್ರೆಸ್ ಹೊರತುಪಡಿಸಿದ ಎಡಪಕ್ಷಗಳ ನೇತೃತ್ವದ ಮೂರನೆಯ ಜಾತ್ಯಾತೀತ ಪರ್ಯಾಯ ಅತ್ಯಗತ್ಯ. ಈ ಹಿನ್ನೆಲೆಯಲ್ಲಿ ಮೂರನೆಯ ಪರ್ಯಾಯ ಬಲಗೊಳಿಸುವ ದಿಕ್ಕಿನಲ್ಲಿ ಭಾಗವಾಗಿರುವ ಜೆಡಿ(ಎಸ್)ಗೆ ಮತನೀಡಿ ಗೆಲ್ಲಿಸುವುದು ಅತ್ಯಗತ್ಯ.

ಬಾಬಾಬುಡನ್‌ಗಿರಿಯಲ್ಲಿ 'ಆತಂಕವಾದ'



ಯಡಿಯೂರಪ್ಪನವರು 'ಘನವೆತ್ತ' ಸಾಮಾಜಿಕ ಸೇವೆಗಾಗಿ ಅದ್ಯಾವುದೋ ಅಮೇರಿಕಾ ವಿಶ್ವವಿದ್ಯಾಲಯ ಕೊಡಲಿರುವ (ಇಂತಹ ವ್ಯವಸ್ಥೆ ಮಾಡಿದವರ್ಯಾರು?) ಡಾಕ್ಟರೇಟನ್ನು ಪಡೆಯಲು ಅಮೇರಿಕಾಕ್ಕೆ ತೆರಳಿದ್ದಾರೆ. ಕರ್ನಾಟಕದಲ್ಲಿ ಧಾರ್ಮಿಕ ಅಲ್ಪಸಂಖ್ಯಾತರು ವಿಶೇಷವಾಗಿ ಇತ್ತೀಚಿಗೆ ಕ್ರೈಸ್ತರ ಮೇಲೆ ನಡೆದ ಧಾಳಿಗಳ ಕಳಂಕ ಹೊತ್ತಿರುವ ಮುಖ್ಯಮಂತ್ರಿ ಯಡಿಯೂರಪ್ಪ ನವರಿಗೆ ಈ ಪದವಿ ನೀಡಕೂಡದೆಂದು ಅಮೇರಿಕಾದಲ್ಲಿರುವ ಅನಿವಾಸಿ ಭಾರತೀಯರ ಒಂದು ಪ್ರಬಲ ವಿಭಾಗ ಪ್ರತಿಭಟನೆ ನಡೆಸುತ್ತಿದೆ. 'ಯಡ್ಡಿ'ಯವರ ಇಂತಹ ಘನಂದಾರಿ ಕೆಲಸಗಳಿಂದ ಎಲ್ಲೆಡೆಗಳಲ್ಲಿ ಮುಖಕ್ಕೆ ಮಂಗಳಾರತಿ ಎತ್ತಿಸಿಕೊಳ್ಳುತ್ತಿದ್ದರೂ ಸೌಹಾರ್ದತೆಯ ಕರ್ನಾಟಕವನ್ನು ಜನಾಂಗದ್ವೇಷದ 'ಗುಜರಾತ್' ಆಗಿ ಪರಿವರ್ತಿಸಿ, ಆ ಮೂಲಕ ರಾಜ್ಯವು ಭಯೋತ್ಪಾದಕರ ತಾಣವಾಗುವಂತೆ ಮಾಡುತ್ತಿರುವ ಯತ್ನಗಳು ನಿಂತೇ ಇಲ್ಲ. ರಾಜ್ಯದ ಬಿಜೆಪಿಯು ಸರ್ಕಾರಕ್ಕೆ ನಾಡಿನ ಪರಂಪರೆ, ಸಂಸ್ಕೃತಿಯಾಗಲೀ, ನೆಲದ ಕಾನೂನು, ನ್ಯಾಯಾಲಯದ ತೀರ್ಪನ್ನು ಗೌರವಿಸುವ, ರಕ್ಷಿಸುವ ಯಾವ ಇರಾದೆಯೂ ಇಲ್ಲವೆಂಬುದನ್ನು ಹೆಜ್ಜೆ ಹೆಜ್ಜೆಗಳಲ್ಲಿ ಸಾಬೀತಾಗುತ್ತಿದೆ. ಇತ್ತೀಚಿಗೆ ಡಿಸೆಂಬರ್ 10 ರಿಂದ 12ರವರೆಗೆ ದತ್ತ ಜಯಂತಿ ಹೆಸರಿನಲ್ಲಿ ಬಾಬಾಬುಡನ್‌ಗಿರಿ, ಚಿಕ್ಕಮಗಳೂರು ನಗರದಲ್ಲಿ ನಡೆದ ಘಟನೆಗಳೇ ಮತ್ತೊಂದು ಸಾಕ್ಷಿಯಾದವು. ಸಂಘ ಪರಿವಾರದ ಈ ಎಲ್ಲಾ ಪುಂಡಾಟಿಕೆಗಳಿಗೆ ಎಲ್ಲಾ ರೀತಿಯ ನೆರವನ್ನು ನೀಡಿ ಸಾಥಿಯಾಗಿ ನಿಂತದ್ದು ಸಂವಿಧಾನ-ಕಾನೂನು ಪಾಲಿಸಬೇಕಾದ ಆಡಳಿತ-ರಾಜ್ಯ ಹಾಗೂ ಜಿಲ್ಲಾ ಆಡಳಿತ! ಒಂದು ಸರ್ಕಾರದ ಘನತೆ, ಗೌರವ ಹಾಗೂ ಸಂವಿಧಾನಾತ್ಮಕ ಹೊಣೆಗಾರಿಕೆಯನ್ನು ನಿರ್ಲಜ್ಜವಾಗಿ ಗಾಳಿಗೆ ತೂರಿ ಬಜರಂಗದಳದ 'ಬಿ' ಟೀಂ ನಂತೆ ಕಾರ್ಯವೆಸಗಿದ್ದು ಗಂಭೀರ ವಿಚಾರ. ಪರಿಣಾಮಗಳೂ ಘೋರ.



ಬಾಬಾಬುಡನ್‌ಗಿರಿಯ ದರ್ಗಾ ಪೀಠದಲ್ಲಿನ ಪರಂಪರಾಗತ ಆಚರಣೆಯಲ್ಲಾಗಲಿ, ಇದಕ್ಕೆ ಹೊಂದಿಕೊಂಡಂತಹ ಇತರೆ ಯಾವುದೇ ಸಂದರ್ಭಗಳಲ್ಲಾಗಲೀ, 'ದತ್ತಜಯಂತಿ' ಎಂಬುದು ಇಲ್ಲವೇ ಇಲ್ಲ. ಈ ಸತ್ಯ ಗೊತ್ತಿರುವುದರಿಂದಲೇ ಬಾಬಾಬುಡನ್ ಗಿರಿಯನ್ನು 'ದಕ್ಷಿಣದ ಆಯೋಧ್ಯೆ'ಯನ್ನಾಗಿಸುವ (ಸೌಹಾರ್ದ-ಅಯೋಧ್ಯೆ ಯಲ್ಲಿ ಸಂಘ ಪರಿವಾರ ಬಾಬ್ರಿ ಮಸೀದಿ ಧ್ವಂಸಿಸಿದಂತೆ) ಘೋಷಣೆಯೊಂದಿಗೆ ಗಿರಿಯಲ್ಲಿ 1996 ರಿಂದ ಹೊಸದಾಗಿ ದತ್ತ ಜಯಂತಿಯನ್ನು ಹುಟ್ಟುಹಾಕಿತ್ತು. ಕರ್ನಾಟಕ ಮಹಾರಾಷ್ಟ್ರ ಗಡಿ ಭಾಗದಲ್ಲಿರುವ 'ದತ್ತ ಮೂರ್ತಿ'ಗೂ ಇದಕ್ಕೂ ಸಂಬಂಧವೇ ಇಲ್ಲದಿರುವಾಗ (ಸೂಫಿಗಳ ದತ್ತ ಪರಂಪರೆ) ಮೂರು ಮುಖದ, ನಾಲ್ಕು ನಾಯಿಗಳುಳ್ಳ ದತ್ತನನ್ನು ಹಿಡಿದು ತಂದು ದತ್ತ ಜಯಂತಿ ಹೆಸರಿನಲ್ಲಿ ದಾಂಧಲೆ ಎಬ್ಬಿಸುತ್ತಾ ಬಂದಿದ್ದು ಎಲ್ಲರಿಗೂ ತಿಳಿದ ವಿಷಯವೇ. 'ದರ್ಗ ಪೀಠ'ದಲ್ಲಿ ಇದ್ದ ಆಚರಣೆಗಳನ್ನು -' ಅಂದರೆ 1975ರ ಹಿಂದಿದ್ದ ಆಚರಣೆಗಳನ್ನು ಪಟ್ಟಿ ಮಾಡಿರುವಂತೆ ರಾಜ್ಯದ ಧಾರ್ಮಿಕ ದತ್ತಿ ಆಯುಕ್ತರು ನ್ಯಾಯಾಲಯಕ್ಕೆ ಸಲ್ಲಿಸಿರುವ ಅಫಿಡೆವಿಟ್‌ನಲ್ಲಿ ದತ್ತ ಜಯಂತಿ ಇಲ್ಲ. ಮುಂದೆ ಒಂದು ಫೋಟೋ, ವಿಗ್ರಹ ಪೂಜೆ ಎಂಬುದು ಹವನ-ಹೋಮವಾಗಿ, ಭಜನೆ-ಸಂಕೀರ್ತನೆ, ದತ್ತಮಾಲೆ, ಪಡಿ ನೀಡಿಕೆ ಇವುಗಳ ಜೊತೆ ಅನುಸೂಯ ಜಯಂತಿಯೆಂಬುದು ಸೇರಿಕೊಂಡು ಪ್ರತಿ ವರುಷವೂ ಬೆಳೆಯುತ್ತಾ ಹೋಯಿತು. ಕಾಂಗ್ರೆಸ್‌ನ ಮೃದು ಹಿಂದುತ್ವದ ಪರಿಣಾಮವಾಗಿ ನ್ಯಾಯಾಲಯದ ತೀರ್ಪಿಗೆ ವ್ಯತಿರಿಕ್ತವಾಗಿ ಹಲವು ವಿಕೃತಿಗಳು ಸಂಭವಿಸಿದ್ದವು. ನಂತರ ಪ್ರಗತಿಪರರ ಒತ್ತಡದಿಂದ ತಿದ್ದುವ ಯತ್ನವೂ ನಡೆಯಿತು. ಜೆಡಿ(ಎಸ್) ಜೊತೆಗೆ ಬಿಜೆಪಿಯು ಅಧಿಕಾರ ಹಂಚಿಕೊಂಡು ಧಾರ್ಮಿಕ, ದತ್ತಿಯ ಮುಜರಾಯಿ ಇಲಾಖೆಯ ಸಚಿವ ಖಾತೆಯನ್ನು ಹೊಡೆದುಕೊಂಡಿದ್ದ ಆರ್.ಎಸ್.ಎಸ್. ಈ ಅವಧಿಯಲ್ಲಿ ಹಲವಾರು ನಿರ್ಬಂಧಗಳ ನಡುವೆಯೂ ಕರಾಮತ್ತು ತೋರಿತು. ಗಿರಿಯಲ್ಲಿ ಹುಟ್ಟುಹಾಕಲಾದ ವಿವಾದದಲ್ಲಿ ಹಲವಾರು ಷಡ್ಯಂತ್ರಗಳು ಹಾಗೂ ದಾಖಲೆಗಳಲ್ಲಿ ವ್ಯತ್ಯಾಸವಾಗಿರುವ ಆರೋಪಗಳ ನಡುವೆ ಇಂತಹ ಯತ್ನಗಳು ನಡೆದವು.

ಇನ್ನು ಬಿಜೆಪಿಯೇ ಏಕೈಕವಾಗಿ ಅಧಿಕಾರಕ್ಕೆ ಬಂದಿರುವಾಗ ಹಿಂದಿನ ನ್ಯಾಯಾಲಯದ ತೀರ್ಪನ್ನು ನಿರ್ಲಕ್ಷಿಸಿ, ಕೇಂದ್ರದ ಕಾನೂನು ಕಡೆಗಣಿಸಿ ಹೈದರಾಲಿ ಕಾಲದ ಹಿಂದಿನವರೆಗೂ ಆಚರಣೆಗಳ ಪಟ್ಟಿ ಸಲ್ಲಿಸಲು ಹೈಕೋರ್ಟ್ ಹೇಳಿದ್ದು ವಿಶೇಷ ಬೆಳವಣಿಗೆಯೇ. ಈ ಆದೇಶಕ್ಕೆ ಸುಪ್ರಿಂ ಕೋರ್ಟ್ ಇದೇ 2008 ರ ಡಿಸೆಂಬರ್ 1 ರಂದು ತಡೆಯಾಜ್ಞೆ ನೀಡಿ ಹಿಂದಿನ ತೀರ್ಪನ್ನು ಅನುಸರಿಸಲು ನಿರ್ದೇಶಿಸಿತ್ತು. ಅಂದರೆ 1975ರ ಹಿಂದಿನ ಆಚರಣೆಗಳಿಗಷ್ಟೇ ಸೀಮಿತವಾಗಿರಬೇಕು ಎಂಬುದು ದತ್ತಮಾಲೆ, ದತ್ತ ಜಯಂತಿ ಇತ್ಯಾದಿಗಳಿಗೆ ಗಿರಿಯ ಮೇಲಾಗಲೀ, ಪರಿಸರದಲ್ಲಾಗಲೀ ಅವಕಾಶ ಇಲ್ಲವೇ ಇಲ್ಲ ಎಂಬುದು ಇದರ ಸಾರ.

ಆದರೆ ಈಗ ಉಲ್ಲಂಘಿಸಲಾಗಿರುವುದು ಇಂತಹ ನಿರ್ದೇಶನವನ್ನೆ. ಡಿಸೆಂಬರ್ 10 ರಂದು ಬಹುತೇಕ ಬಿಜೆಪಿ ಯುವ ಮೋರ್ಚಾದ ಮಹಿಳೆಯರೇ (ಮಾತೆಯರೇ) ಇದ್ದ 'ಅನಸೂಯ ಜಯಂತಿ' ಎಂಬುದನ್ನು ಗಿರಿಯ ಮೇಲಿನ-ಗುಹೆಯ ಪಕ್ಕದಲ್ಲೇ ನಡೆಸಲು ಅವಕಾಶ ನೀಡಲಾಗಿದೆ. ಅಲ್ಲಿ ಪೂಜೆಯಲ್ಲದೆ ಹೋಮ ಇತ್ಯಾದಿ ನಡೆದಿವೆ. 11 ರ ಶೋಭಾಯಾತ್ರ ಸಂಕೀರ್ತನೆಗಳೂ, ಅಡೆತಡೆ ಇಲ್ಲದೇ ಸಾಗಿವೆ. ಮುಖ್ಯವಾಗಿ ಈ ಹಿಂದೆ ಇಂತಹುದೇ ಮೆರವಣಿಗೆ ಚಿಕ್ಕಮಂಗಳೂರಿನ ಎಂ.ಜಿ ರಸ್ತೆಯಲ್ಲಿ ಸಾಗುತ್ತಿರುವಾಗ ಗಲಭೆಗಳು ನಡೆದಿದ್ದವು. ಅಲ್ಪಸಂಖ್ಯಾತರ ವಿರುದ್ಧ ಅವಾಚ್ಯವಾಗಿ ಘೋಷಣೆ ಕೂಗಲಾಗಿತ್ತು. ಹಾಗೆಯೇ ಶೋಭಾಯಾತ್ರೆಯ ಸಭೆಯಲ್ಲಿಯೂ ಎಗ್ಗಿಲ್ಲದೆ ಕೋಮುದ್ವೇಷ ಹುಟ್ಟಿಸುವ ಮಾತುಗಳನ್ನು ಮನಬಂದಂತೆ ಬಜರಂಗದಳ, ವಿಶ್ವ ಹಿಂದು ಪರಿಷತ್ ಇತ್ಯಾದಿ ನಾಯಕರು ಮಾತನಾಡಿದ್ದರು. ಹೀಗೆ ಸೌಹಾರ್ದತೆ ಕದಡುವ ಯತ್ನಗಳನ್ನು ತಡೆಯಲು ಈ ಶೋಭಾಯಾತ್ರೆಗೆ ಅವಕಾಶ ನೀಡದೇ ನಿರ್ಬಂಧಿಸಲಾಗುತ್ತಿತ್ತು. ಇದು ಪುನರಾರಂಭವಾದದ್ದು ಕಳೆದ ವರ್ಷದಿಂದಲೇ- ಈ ಬಾರಿ ನಿರ್ಬಂಧಿತ ರಸ್ತೆಗಳಲ್ಲಿಯೂ ಮುಕ್ತವಾಗಿ ಅವಕಾಶವನ್ನು ಜಿಲ್ಲಾಡಳಿತ ನೀಡಿತ್ತು. ಇದರಂತೆ ದತ್ತಜಯಂತಿ- ದತ್ತವಿಗ್ರಹಪೂಜೆ, ಹವನ ಹೋಮ ಇತ್ಯಾದಿಗಳು 13 ರಂದು ಗುಹೆಯ ಪಕ್ಕದಲ್ಲೇ ನಡೆದಿವೆ. ಜಿಲ್ಲಾಡಳಿತವೇ ಸಕಲ ಏರ್ಪಾಡು ಮಾಡಿಕೊಟ್ಟಿದೆ. ಊಟ, ಪ್ರಸಾದವೂ ಹಂಚಲಾಗಿದೆ.

ಪುಟ 6 ಕ್ಕೆ

"ಮಠ ಮಾನ್ಯಗಳಿಗೆ ಪ್ರೋತ್ಸಾಹ ನಿಲ್ಲಿಸುವುದಿಲ್ಲ".... ಸರ್ಕಾರಿ ಆಸ್ಪತ್ರೆಗಳಿಗೆ ಹಣ ಕೊಡುವುದಿಲ್ಲ

"ಟೀಕೆಗೆ ಅಂಜುವುದಿಲ್ಲ. ಮಠ ಮಾನ್ಯಗಳಿಗೆ ಸರ್ಕಾರ ನೀಡುತ್ತಿರುವ ಪ್ರೋತ್ಸಾಹವನ್ನು ನಿಲ್ಲಿಸುವುದಿಲ್ಲ".

ಹೌದು ಕರ್ನಾಟಕ ರಾಜ್ಯ ಮುಖ್ಯಮಂತ್ರಿ ಸನ್ಮಾನ್ಯ ಶ್ರೀ ಯಡಿಯೂರಪ್ಪನವರೇ ಈ ಮಾತು ಹೇಳಿರುವುದು. ಪೇಜಾರವರ ಶ್ರೀಗಳ ಪೀಠಾರೋಹಣದ 70 ವರ್ಷಾಚರಣೆ ಸಂದರ್ಭದಲ್ಲಿ ಅವರು ಈ ಮಾತನ್ನು ಹೇಳಿದರು.

ಇವರು ತಾನೊಬ್ಬ 'ದಾನಶೂರ ಕರ್ಣ' ಎಂದುಕೊಂಡುಬಿಟ್ಟಿದ್ದಾರೆ. ಇವರು ಯಾವ ಜಾತಿಯ ಮಠ, ಗುರುಗಳನ್ನು ಕಂಡರು. ಎಲ್ಲಿಗೆ ಹೋದರೂ ಅವರಿಗೆ ಸರ್ಕಾರದ (ಜನರ) ಖಜಾನೆ ಯಿಂದ ಕೋಟಿ ಕೋಟಿ ದಾನ ಘೋಷಿಸುತ್ತಾರೆ.

ಇದೆಲ್ಲಾ ಇಲ್ಲಿ ನಡೆಯುತ್ತಿರುವಾಗಲೇ ಬೆಂಗಳೂರಿನ ವಿಕ್ಟೋರಿಯಾ, ಬೌರಿಂಗ್, ಕೆ.ಸಿ.ಜನರಲ್ ಮುಂತಾದ ಸರ್ಕಾರಿ ಆಸ್ಪತ್ರೆಗಳನ್ನು ಅವಲಂಬಿಸಿರುವ ಲಕ್ಷಾಂತರ ಬಡ ರೋಗಿಗಳಿಗೆ ಒಂದು ಆಘಾತ ಕಾದಿತ್ತು.



ಪೇಜಾವರ ಶ್ರೀಗಳ ಪೀಠಾರೋಹಣದ 70 ವರ್ಷಾಚರಣೆಯಲ್ಲಿ ಮುಖ್ಯಮಂತ್ರಿ

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯ ಆಕ್ಷೇಪದ ಮೇರೆಗೆ ಹೈಕೋರ್ಟ್‌ನ ಕಾನೂನು ಸೇವಾ ಪ್ರಾಧಿಕಾರವು ಬೆಂಗಳೂರಿನ ಒಟ್ಟು 14 ಸರ್ಕಾರಿ ಆಸ್ಪತ್ರೆಗಳನ್ನು ಮುಚ್ಚುವಂತೆ ಆದೇಶ ಹೊರಡಿಸಿತ್ತು.

ತ್ಯಾಜ್ಯ ಸಂಸ್ಕರಣ ಘಟಕಕ್ಕೆ ಹಣವಿಲ್ಲ

ಸರ್ಕಾರದ ಈ ಆಸ್ಪತ್ರೆಗಳಿಗೆ ನಿತ್ಯ ನೂರೆಂಟು ರೋಗಿಗಳು, ನೂರೆಂಟು ಕಾರಣಗಳಿಗೆ ಚಿಕಿತ್ಸೆ ಪಡೆಯುತ್ತಾರೆ. ಶಸ್ತ್ರ ಚಿಕಿತ್ಸೆಗಳೂ ನಡೆಯುತ್ತವೆ. ಇದಕ್ಕೆ ಸಂಬಂಧಿಸಿದ ತ್ಯಾಜ್ಯಗಳನ್ನು ಅಂದರೆ ವ್ಯರ್ಥ ಪದಾರ್ಥ, ಬಳಸಿದ ವಸ್ತುಗಳನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡಬೇಕು.

ರೋಗಗಳನ್ನು ಹರಡಬಹುದಾದ, ಸಾರ್ವಜನಿಕ ಆರೋಗ್ಯಕ್ಕೆ ಮಾರಕವಾಗಬಹುದಾದ ಹಲವು ಅಪಾಯಕಾರಿ ರೋಗಾಣುಗಳು, ವೈರಸ್ ಈ ತ್ಯಾಜ್ಯಗಳಲ್ಲಿರುವ ಸಂಭವ ಇರುತ್ತದೆ. ಇವುಗಳನ್ನು ಸರಿಯಾಗಿ ಸಂಸ್ಕರಣ ಮಾಡಬೇಕು. ಅಂದರೆ ಸರಿಯಾದ ರೀತಿಯಲ್ಲಿ ಸುಡಬೇಕು.

ವೈಜ್ಞಾನಿಕವಾಗಿ ಸಂಸ್ಕರಣ ಮಾಡಬೇಕು ಎಂದರೆ ಅದಕ್ಕೆ ಸಂಸ್ಕರಣ ಘಟಕ ಬೇಕು. ಸಂಸ್ಕರಣ ಘಟಕ ನಿರ್ಮಿಸಬೇಕು ಎಂದರೆ ಅದಕ್ಕೆ ಹಣ ಬೇಕು.

ಇಲ್ಲ. ಆಸ್ಪತ್ರೆ ಗಳ ಬಳಿ ಹಣ ಇಲ್ಲ. ರೋಗಿಗಳ ಚಿಕಿತ್ಸೆಗೆ ಅತ್ಯಂತ ಅಗತ್ಯವಾದ ಎಷ್ಟೋ ಸಾಧನ, ಸಲಕರಣೆಗಳ ಖರೀದಿಗೆ ಸರ್ಕಾರ ಹಣ ಕೊಟ್ಟಿಲ್ಲ. ಇರುವ ಕೆಲವೇ ಸಾಧನಗಳಲ್ಲಿ ಪರೀಕ್ಷೆ ಮಾಡಿಸಿಕೊಳ್ಳಲು ರೋಗಿಗಳು ದಿನಗಟ್ಟಲೆ ಇಲ್ಲಿ ಸಾಲಿನಲ್ಲಿ ನಿಲ್ಲುವುದು ಮಾಮೂಲಿ. ಇನ್ನು 'ಕಸ' ವಿಲೇವಾರಿಗೆ ಸರ್ಕಾರ ಹಣ ಕೊಡುವುದೇ?

ಹೀಗಾಗಿ ಆಸ್ಪತ್ರೆಯ ಕಸ ಎನ್ನುವುದು ಸಮೀಪದ ಕಸದ ತೊಟ್ಟಿಗೆ, ಆ ನಂತರ ಅಲ್ಲಿಂದ ಬೆಂಗಳೂರಿನ ಯಾವುದ್ಯಾವುದೋ ಕೆರೆ ಬಯಲಿಗೆ ಹೋಗಿ ಸೇರುತ್ತಾ ಬೆಂಗಳೂರಿನ ನೀರು, ನೆಲವನ್ನು ಕಲುಷಿತ ಗೊಳಿಸುತ್ತಾ ಅಪಾಯಕಾರಿಯಾಗಿ ಹರಡುತ್ತಿದೆ.

ಇದು ಪತ್ತೆಯಾಗಿ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ನೀಡಿ ಗಡುವು ಕೊಟ್ಟರೂ ಕೂಡ ಜಯದೇವ, ಕಿದ್ವಾಯ್ ಹಾಗೂ ನಿಮ್ಹಾನ್ಸ್ ಬಿಟ್ಟರೆ ಬೇರೆ ಆಸ್ಪತ್ರೆಗಳಲ್ಲಿ ಸಂಸ್ಕರಣ ಘಟಕ ಸ್ಥಾಪನೆ ಸಾಧ್ಯವಾಗಲಿಲ್ಲ. ಕಾನೂನು ಪ್ರಾಧಿಕಾರ ಹಲವು ಗಡುವು ನೀಡಿತು. ಉಹುಂ ಪ್ರಯೋಜನವಾಗಲಿಲ್ಲ.



ಕೆ.ಸಿ.ಜಿ ಆಸ್ಪತ್ರೆಯ ಮುಂದೆ ಸಿಪಿಐ(ಎಂ) ಪ್ರತಿಭಟನೆ

ಕೊನೆಗೆ ಇದೀಗ ಹೈಕೋರ್ಟ್‌ನ ಕಾನೂನು ಪ್ರಾಧಿಕಾರ ಡಿಸೆಂಬರ್ 17 ರ ಒಳಗೆ ಘಟಕದ ವ್ಯವಸ್ಥೆಯಾಗ ದಿದ್ದರೆ ಆಸ್ಪತ್ರೆಯನ್ನು ಮುಚ್ಚುವಂತೆ ಆದೇಶ ನೀಡಿದೆ.

ಸರ್ಕಾರ ಆಸ್ಪತ್ರೆಗಳನ್ನು ಮುಚ್ಚುವುದಕ್ಕೂ ತಯಾರಿದೆಯೋ ಏನೋ? (ಹೇಗೂ ಖಾಸಗಿ ಆಸ್ಪತ್ರೆಗಳು ಅಂಗಡಿ, ಮಳಿಗೆ ತೆರೆದುಕೊಂಡು ಕಾದು ಕೂತಿದ್ದಾವಲ್ಲ)

'ಆದರೆ ಬಡವರ ಗತಿ ಏನು?


ಇದನ್ನು ಯೋಚಿಸಿದ್ದು ಯಡಿಯೂರಪ್ಪ ಅಲ್ಲ. ಆರೋಗ್ಯ ಸಚಿವ ಶ್ರೀರಾಮುಲು ಅಲ್ಲ. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಗಳು ಮತ್ತು ಸಿಪಿಐ(ಎಂ) ಪಕ್ಷಗಳು.

ಸಿಪಿಐ(ಎಂ) ಪಕ್ಷದ ರಾಜಾಜಿನಗರ ವಲಯ ಸಮಿತಿ ನೇತೃತ್ವದಲ್ಲಿ ಡಿಸೆಂಬರ್ 11 ರಂದು ಮಲ್ಲೇಶ್ವರಂನ ಜನರಲ್ ಆಸ್ಪತ್ರೆಯ ಮುಂದೆ ಪ್ರತಿಭಟನೆ ನಡೆಸಲಾಯಿತು. ಪ್ರತಿಭಟನೆ ಬೆಂಬಲ ಸೂಚಿಸಿ ಜನವಾದಿ ಮಹಿಳಾ ಸಂಘಟನೆ ಕಟ್ಟಡ ಕಾರ್ಮಿಕರ ಸಂಘಟನೆ, ಆಟೋರಿಕ್ಷಾ ಚಾಲಕರ ಸಂಘ ಮುಂತಾದವುಗಳು ಪಾಲ್ಗೊಂಡಿದ್ದವು.

ಗೋಪಾಲಕೃಷ್ಣ ಅರಳಹಳ್ಳಿ, ಶಾರದಾ ಕೆ.ಎಸ್. ಅನಂತಯ್ಯ, ಶ್ರೀನಿವಾಸ್, ಸಿ.ಎನ್, ಶಿವರುದ್ರಯ್ಯ, ಪಾರ್ಥಿಬನ್ ಮುಂತಾದವರು ಪ್ರತಿಭಟನಾಕಾರರನ್ನುದ್ದೇಶಿಸಿ ಮಾತನಾಡಿದರು. ಸಂಸ್ಕರಣ ಘಟಕ ಸ್ಥಾಪನೆಗೆ ಹಾಗೂ ರೋಗಿಗಳಿಗೆ ಉತ್ತಮ ಸೌಲಭ್ಯಕ್ಕಾಗಿ ಸರ್ಕಾರವನ್ನು ಆಗ್ರಹಿಸಿದರು.

ಡಿಸೆಂಬರ್ 12, 2008 ರಂದು ವಿಕ್ಟೋರಿಯಾ ಆಸ್ಪತ್ರೆಯ ಮುಂಭಾಗದಲ್ಲಿ ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್ಐ) ಮತ್ತು ಜನವಾದಿ ಮಹಿಳಾ ಸಂಘಟನೆಗಳ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಕಾನೂನು ಪ್ರಾಧಿಕಾರವಾದರೂ ಆಸ್ಪತ್ರೆ ಮುಚ್ಚುವ ಆದೇಶ ನೀಡುವ ಬದಲಿಗೆ ನ್ಯಾಯಾಂಗ ನಿರ್ದೇಶನ... ನಿರ್ಲಕ್ಷದ ಆಧಾರದಲ್ಲಿ ಆಸ್ಪತ್ರೆಗಳ ಮತ್ತು ಅದಕ್ಕಿಂತ ಮುಖ್ಯವಾಗಿ ಆರೋಗ್ಯ ಇಲಾಖೆ ಅಧಿಕಾರಿಗಳ ಹಾಗೂ ಸಚಿವರ ವಿರುದ್ಧ ಕ್ರಮ ವಹಿಸುವ ಮೂಲ... ಸರ್ಕಾರಕ್ಕೆ ಚುರುಕು ಮುಟ್ಟಿಸಬಹುದಿತ್ತು. ಪ್ರತಿಭಟನಾಕಾರಾದರೂ ಅದನ್ನೇ ಮಾಡಲು ಒತ್ತಾಯಿಸಿದ್ದಾರೆ. ಕಾದು ನೋಡೋಣ ಏನಾಗುತ್ತದೋ?

ವಿಕ್ಟೋರಿಯಾ ಆಸ್ಪತ್ರೆಯ ಮುಂದೆ ಡಿವೈಎಫ್ಐ ಮತ್ತು ಜೆ.ಎಂ.ಎಸ್ ಪ್ರತಿಭಟನೆ



ಆಪರೇಷನ್ ಮಾಡಿಸಿಕೊಂಡವರಿಗೆ ರೆಸ್ಟ್ ಕೊಡಿ ಪಾಪ !

ನಮ್ಮ ಸನ್ಮಾನ್ಯ ಶ್ರೀ ಮುಖ್ಯಮಂತ್ರಿಯವರಿಗೆ ಅಮೆರಿಕದ ಅದ್ಯಾವುದೋ ಒಂದು ವಿಶ್ವವಿದ್ಯಾನಿಲಯವೊಂದು ಡಾಕ್ಟರೇಟ್ ನೀಡಿದೆಯಂತೆ. ಆ ವಿಶ್ವವಿದ್ಯಾನಿಲಯಕ್ಕೆ ಭೇಷ್ ಎನ್ನಲೇಬೇಕು. ಅಮೆರಿಕದ ಆ ಮೂಲೆಯಲ್ಲಿದ್ದುಕೊಂಡು, ಭಾರತ ಅನ್ನೋ ದೇಶವಿದೆ, ಅದರಲ್ಲಿ ಕರ್ನಾಟಕ ಅನ್ನೋ ಒಂದು ರಾಜ್ಯವಿದೆ, ಅದಕ್ಕೆ ಯಡಿಯೂರಪ್ಪ ಅಥವಾ ಯಡ್ಯೂರಪ್ಪ ಎನ್ನುವ ಒಬ್ಬ ಮುಖ್ಯಮಂತ್ರಿ ಇದ್ದಾರೆ. ಅವರು ತುಂಬಾ ಆಪರೇಷನ್ ಮಾಡಿದ್ದಾರೆ(?) ಅದಕ್ಕೆ ಅವರಿಗೆ 'ಡಾಕ್ಟರ್' ಪ್ರಶಸ್ತಿ ಕೊಡಬೇಕು ಅಂತ ಕಂಡುಹಿಡಿದದ್ದಕ್ಕೆ. ಇಲ್ಲಿ ಎಂತೆಂಥ ಅದ್ವಾನಿಗಳಿದ್ದಾರೆ; ಎಂತೆಂಥ ಮೋದಿಗಳಿದ್ದಾರೆ, ಅವರನ್ನು ಕಾಣದೆ, ಈ ಯಡ್ಯೂರಪ್ಪನವರನ್ನು ಕಂಡು ಹಿಡಿದು ಪ್ರಶಸ್ತಿ ಕೊಟ್ಟ ಘನ ಸಂಶೋಧನೆಗಾಗಿ ನಮ್ಮ ಮುಖ್ಯ ಮಂತ್ರಿಗಳು ಅವರ ಹೆಸರನ್ನು ನೋಬೆಲ್ ಪ್ರಶಸ್ತಿಗೆ ಶಿಫಾರಸ್ಸು ಮಾಡಬಹುದು!

ಆ ಘನಂದಾರೀ ವಿಶ್ವವಿದ್ಯಾನಿಲಯವೇ ಇಷ್ಟೆಲ್ಲ ಕಂಡುಹಿಡಿದು ಡಾಕ್ಟರೇಟ್ ಪ್ರಶಸ್ತಿ ಕೊಟ್ಟಿತೋ, ಅಥವಾ ಸರಕಾರೀ ನಿಯಮಗಳ ಪ್ರಕಾರ ಗ್ಲೋಬಲ್ ಟೆಂಡರ್ ಕರೆದು ಅದರಲ್ಲಿ ಲೋಯೆಸ್ಟ್ ರೇಟ್ ಕೋಟ್ ಆದ ವಿ.ವಿಗೆ ಆರ್ಡರ್ ನೀಡಲಾಯಿತೋ ತಿಳಿದು ಬಂದಿಲ್ಲ. ಏನೇ ಆಗಲಿ ಆಪರೇಷನ್ ಮಾಡಿದವರು ಅಷ್ಟೊಂದು ಮಂದಿ ಇರಬೇಕಾದರೆ, ಇವರೊಬ್ಬರೇ 'ಡಾಕ್ಟರ್' ಆಗಿದ್ದು ಯಾಕೋ ಅಷ್ಟು ಸರಿ ಕಾಣ್ತಿಲ್ಲ. ಸದಾ ಜೊತೆಯಲ್ಲಿರುವ ಸದಾನಂದ ಗೌಡ್ರಿಗೆ ಎಷ್ಟು ರೇಟ್ ಆದ್ರೂ ಪರವಾಗಿಲ್ಲ 'ಹಲ್ಲಿನ ಡಾಕ್ಟರೇಟ್' ಆದ್ರೂ ಕೊಡಿಸಬಹುದಾಗಿತ್ತು. ಇನ್ನು ಆಕೆ, ಅದೇ ಸದಾ ಜೊತೆಯಲ್ಲಿರುವ ಆಕೆಗೂ ಒಂದು 'ಲೇಡಿ ಡಾಕ್ಟರ್' ಅಂತ ಯಾವುದಾದ್ರೂ ಮಿಡ್ಲಿಸ್ಕೂಲಿಂದಲಾದ್ರೂ ಪ್ರಶಸ್ತಿ ಕೊಡ್ಸಬಹುದಾಗಿತ್ತು. ಸನ್ಮಾನ್ಯ ಡಾಕ್ಟರ್ ಮುಖ್ಯ ಮಂತ್ರಿಯವರು ಆಕೆಯನ್ನು 'ಸಿಸ್ಟರ್' ಎಂದು ಕರೆಯಲಾದೀತೆ? ಆದ್ದರಿಂದ ಆಕೆಯೂ ಲೇಡಿ ಡಾಕ್ಟರ್ ಆದರೆ 'ಇವರಿಗೂ ಒಂದು ಶೋಭೆ!

ಶ್ರೀ

ಇನ್ನು ನಿಜವಾಗಿ ಆಪರೇಷನ್ ಮಾಡಿದ ಗಣಿ ಡಾಕ್ಟರ್ಗಳು ಯಾಕೋ ಸುಮ್ಮನಿದ್ದಾರೆ. ಗಣಿಯಾಳದಲ್ಲಿ ಏನಿದೆಯೋ ಬಲ್ಲವರಾರು? ಇರಲಿ, ಇವರಿಂದ ಆಪರೇಷನ್ ಮಾಡಿಸಿಕೊಂಡವರು, ಮೂರೂ ಬಿಟ್ಟು ಬಂದು ಜನರ ಮುಂದೆ ನಿಂತಿದ್ದಾರೆ. ನಮ್ಮ ಹಳ್ಳಿ ಭಾಷೆಯಲ್ಲಿ ಹೇಳಬೇಕೆಂದರೆ, ಕುಯ್ಸಿಕೊಂಡ ಮೇಲೆ (ಆಪ್ರೇಸನ್ ಮಾಡಿಸಿಕೊಂಡ ಮೇಲೆ) ಮಕ್ಕಳಾಗಬಾರದು. ಹಾಗೂ ಏನಾರು ಆದ್ರೆ, ಏನೋ ಎಡವಟ್ಟಾಗಿದೆ ಅಂತ ಅರ್ಥ. ಹಂಗೇ, ಈ ಕಮ್ಲ ಆಪ್ರೇಸನ್ ಮಾಡಿಸಿಕೊಂಡೋರಿಗೆ ಓಟ್ ಬೀಳಬಾರದು. ಹಂಗೇನಾದ್ರೂ ಬಿತ್ತು ಅಂದ್ರೆ, ಏನೋ ಎಡವಟ್ಟಾಗಿದೆ ಅಂತ ಅರ್ಥ. ಆಪ್ರೇಸನ್ ಆದವರು ಆ ತತ್‌ಕ್ಷಣ ಭಾರ ಎತ್ತಬಾರದು.

ಹಂಗೇ ನೀವೂ 'ಅಧಿಕಾರದ' ಭಾರ ಎತ್ತಿ ಆಯಾಸ ಮಾಡ್ಕೋಬೇಡಿ, ಉಸಾರಾಗೋ ತನಕ ರೆಸ್ಟ್ ತಗಳಿ ಅಂತ ಅವರಿಗೆ ರೆಸ್ಟ್ ಕೊಟ್ಟು ಮನೆಯಲ್ಲಿ ಕೂಡಿಸಬೇಕಾದ ಜವಾಬ್ದಾರಿ ನಮ್ಮ ಜನಗಳ ಮೇಲಿದೆ.

ರಾಜ್ಯದಲ್ಲಿ ಇಷ್ಟೊಂದು ಪವರ್ ಕಟ್ ಮಾಡಿದೋರಿಗೆ ಒಂದು ಎಂಟು ಸೀಟ್ ಪವರ್ ಕಟ್ ಮಾಡಿ ತೋರಿಸ್ರೀ.

ಇತ್ತೀಚಿನ ಪದ್ಮಪ್ರಿಯಾ ಪ್ರಕರಣ, ಚರ್ಚುಗಳ ಮೇಲಿನ ದಾಳಿ ಪ್ರಕರಣ, ಮಹೇಂದ್ರ ಕುಮಾರ್ ಜೈಲುವಾಸದ ಪುರಾಣದ ಬಗ್ಗೆ 'ಕರಾವಳಿ ಅಲೆ' ಪ್ರಕಟಿಸಿದ ಬರಹಗಳ ನಂತರವಂತೂ, ಇನ್ನು 'ಕರಾವಳಿ ಅಲೆ' ಹಾಗೂ ಬಿ.ವಿ.ಸಿ.ಯವರನ್ನು ಹೀಗೆ ಬಿಟ್ಟರೆ ತಮ್ಮ ಏಕಸ್ವಾಮ್ಯ ಮುಗಿದಂತೆ ಎಂದು ತೀರ್ಮಾನಿಸಿದ ಸಂಘ ಪರಿವಾರ ಈಗ ಸಂಪೂರ್ಣ ಸಿದ್ಧತೆಯೊಂದಿಗೆ ಕಾರ್ಯಾಚರಣೆಗೆ ಇಳಿದಿದೆ.

'ಕರಾವಳಿ ಅಲೆ' ಮೇಲೆ ನಿಲ್ಲದ ಚಡ್ಡಿಗಳ ದಾಳಿ

ಪ್ರಜ್ಞಾವಂತರ ಆತಂಕಗಳು ವಾಗತೊಡಗಿದೆ. ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ದ ನಂತರ ಚಡ್ಡಿಪಡೆ ಕರಾವಳಿಯಲ್ಲಿ ತನ್ನ ಸಿಸ್ಟ್ ಮಾದರಿ ಆಡಳಿತವನ್ನು ರಭಸದಲ್ಲಿ ಗೊಳಿಸತೊಡಗಿದೆ.

ಪ್ರತಿಭಟನೆಗಳನ್ನು ಹತ್ತಿಕ್ಕುವ ತನ್ನ ವಿರುದ್ಧ ಧ್ವನಿ ವ ಎಲ್ಲಾ ವಿಭಾಗಗಳ ಬಾಯಿ ಮುಚ್ಚಿಸುವ ಸವನ್ನು ನಿರ್ಲಜ್ಜವಾಗಿ ಯಾವುದೇ ಲಾಜಿಲ್ಲದೇ ಆಡಳಿತದ ಎಲ್ಲಾ ವಿಭಾಗಗಳನ್ನು ಯೋಗಿಸಿ ಭಜರಂಗಿಗಳ ತೋಳ್ಬಲದ ಲಕ ಜಾರಿಗೊಳಿಸತೊಡಗಿದೆ. ನೀರಿನ ಗೀಕರಣ ವಿರೋಧಿ ಹೋರಾಟಗಾರರ ಮೇಲೆ ಲೀಸ್ ದಬ್ಬಾಳಿಕೆ ಎಸ್‌ಇಜೆಡ್ ವಿರೋಧಿ ೋಲನವನ್ನು ಹತ್ತಿಕ್ಕುವ ಯತ್ನ, ಚರ್ಚುಗಳ ಲಿನ ದಾಳಿ, ಜೈಲಿನೊಳಗಡೆಯೂ ಮತೀಯ ಡಾಗಳ ಕಾರುಬಾರು. ಈಗ ನಿರಂತರವಾಗಿ ಘ ಪರಿವಾರದ ಭ್ರಷ್ಟ ತೋಲ್ಬಲದ ಕಾರಣವನ್ನು ಬಯಲಿಗೆಳೆಯುತ್ತಾ ಜನಪರ ರಾಟಗಳಿಗೆ ಬೆಂಬಲವಾಗಿ ನಿಲ್ಲುವ ಕರಾವಳಿ ಪತ್ರಿಕೆಯ ಮೇಲೆ ದಾಳಿ ನಡೆಸಿದೆ. ಕರಾವಳಿಯ ಎಂದು ಹೇಳಿಕೊಳ್ಳುವ ಪತ್ರಿಕೆಗಳು ಉಳ್ಳವರ ಯ ಮಾಫಿಯಾಗಳ ತುತ್ತೂರಿಗಳಾಗಿರುವ ಸ್ಥಿತಿಯಲ್ಲಿಯೂ ಎಲ್ಲಾ ವಿಧದ ಒತ್ತಡದ ಮಧ್ಯೆ, ಾ ಧರ್ಮವನ್ನು ಎತ್ತಿ ಹಿಡಿದ ಕರಾವಳಿ ಯನ್ನು ಬಾಯಿ ಮುಚ್ಚಿಸುವ ಕೆಲಸವನ್ನು ಎಲ್ಲಾ , ನಿಯಮಗಳನ್ನು ಗಾಳಿಗೆ ತೂರಿ ಮಾನ ್ಯದೆ ಬಿಟ್ಟು ಸಂಘ ಪರಿವಾರ ಮಂಗಳೂರಿನಲ್ಲಿ ಸುತ್ತಿದೆ. ಸಂಘಿಗಳ ಈ ನಿರ್ಲಜ್ಜ ಅಟ್ಟಹಾಸಕ್ಕೆ ವಳಿಯ ಸಾಮಾನ್ಯ ಜನತೆ ದಂಗುಬಡಿದು ಗಿದ್ದಾರೆ.

ಇದು ಮೊದಲಲ್ಲ


ಕರಾವಳಿ ಅಲೆ'ಯ ಮೇಲೆ ದಾಳಿಗಳು ಯುತ್ತಿರುವುದು ಇದೇ ಮೊದಲಲ್ಲ. ಅಧಿಕಾರಸ್ಥರ ದ್ಧ ಸದಾ ಧ್ವನಿ ಎತ್ತುತ್ತ ಸ್ವತಃ ತಾನೆ ವಿರೋಧ ವಾಗಿ, ಕಾರ್ಯ ನಿರ್ವಹಿಸುವ, ಜನಪರವಾಗಿ ರಾಟ ನಡೆಸುವ ಸಂಘಟನೆಗಳಿಗೆ ಕೆಯಾಗಿ ಕಾರ್ಯ ನಿರ್ವಹಿಸುತ್ತಾ ಬಂದ ಹೆಗ್ಗಳಿಕೆ ದಿನಿಂದಲೂ 'ಕರಾವಳಿ ಅಲೆ'ಗೆ ಇದೆ. ಾರದಲ್ಲಿರುವವರು, ಜೊತೆಗೆ ಭ್ರಷ್ಟ ಸರಕಾರಿ ಕಾರಿಗಳ, ನಿರಂಕುಶ ಪೊಲೀಸರ, ಮಾಫಿಯಾಗಳ, ಫ್ಯೂಡಲ್ ವ್ಯವಸ್ಥೆಯ ನಿಧಿಗಳಾದ ಧಾರ್ಮಿಕ ಮುಖಂಡರನ್ನು ಲಿಗೆಳೆಯುವ, ಆ ಮುಖಾಂತರ ಅವರಿಗೆ ರಿ ಉಂಟುಮಾಡುವ, ಅವರ ವೇಗಕ್ಕೆ ವಾಣ ಹಾಕುವ ಕೆಲಸವನ್ನು .ಸೀತಾರಾಮರವರು ಸಮರ್ಥವಾಗಿ ಡುತ್ತಾ ಬಂದಿದ್ದಾರೆ. ಇಂದು ಕರಾವಳಿ ಗಳಲ್ಲಿ ಬಿಜೆಪಿ ಈ ಮಟ್ಟಿಗೆ ಬೆಳೆಯುವುದರಲ್ಲಿ ವಳಿ ಅಲೆಯ ಬಿ.ವಿ.ಸೀತಾರಾಮರ ತಗೆಯೂ ಇದೆ. ಭ್ರಷ್ಟ ಕಾಂಗ್ರೆಸ್ಸಿಗರು ಾರದಲ್ಲಿದ್ದಾಗ ನಡೆಸುತ್ತಿದ್ದ ಅಂಧ ದರ್ಬಾರನ್ನು ೇಧಿಸಿ ಕಾಂಗ್ರೆಸ್ ಮಂತ್ರಿಗಳ, ಜನಪ್ರತಿನಿಧಿಗಳ ರೋಧಿ ನೀತಿಗಳನ್ನು, ಪರಮ ಭ್ರಷ್ಟತೆಯನ್ನು ಪತ್ರಿಕೆಯಲ್ಲಿ ನಿತ್ಯ ಪ್ರಕಟಿಸುತ್ತ ಅವಿಭಜಿತ ಜಿಲ್ಲೆಯಲ್ಲಿ ಕಾಂಗ್ರೆಸ್ ವಿರೋಧಿ ಅಲೆ ಸುವಲ್ಲಿ ಕರಾವಳಿ ಅಲೆ, ಬಿ.ವಿ.ಸೀತಾರಾಮರ ದೊಡ್ಡದು. ಆಗೆಲ್ಲಾ ಬಿ.ವಿ. ಸೀತಾರಾಮರನ್ನು ಅವರ ಪತ್ರಿಕೆ ಕರಾವಳಿ ಅಲೆಯನ್ನು ಇಂದ್ರ, ಚಂದ್ರ ಎಂದು ಹೊಗಳುತ್ತಿದ್ದ ಬಿಜೆಪಿ ಪರಿವಾರದ ವಟುಗಳು ಕೆಲವೊಮ್ಮೆ ಸೀತಾರಾಮರನ್ನು ದಾರಿ ತಪ್ಪಿಸಿ ತಮ್ಮ ಮತೀಯ ಅಜೆಂಡಾಗಳಿಗೂ 'ಕರಾವಳಿ ಅಲೆ'ಯನ್ನು ಬಳಸಿಕೊಂಡದ್ದೂ ಇದೆ.

ಅಧಿಕಾರಕ್ಕೆ ಏರಿದ ಮೇಲೆ

ಆದರೆ ಬಿಜೆಪಿ, ರಾಜ್ಯದಲ್ಲಿ ಕುಮಾರಸ್ವಾಮಿಯ ಜೊತೆಗೂಡಿ ಅಧಿಕಾರಕ್ಕೆ ಬಂದಾಕ್ಷಣ ಕರಾವಳಿ ಜಿಲ್ಲೆಗಳು ಸಹಜವಾಗಿ ಸಂಘ ಪರಿವಾರದ ಆಡಳಿತಕ್ಕೆ ಒಳಪಟ್ಟಿತ್ತು. ಬಿಜೆಪಿಯ ಜನವಿರೋಧಿ ಆಡಳಿತ, ಕಾಂಗ್ರೆಸ್ಸಿಗರನ್ನು ಮೀರಿಸುವ ಪರಮ ಭ್ರಷ್ಟತೆ, ಆಡಳಿತ ಯಂತ್ರವನ್ನು ಕೋಮುವಾದೀಕರಿಸುವ ನಿರ್ಲಜ್ಜತನವನ್ನು ಕಂಡು 'ಕರಾವಳಿ ಅಲೆ' ತನ್ನ ಎಂದಿನ ವಿರೋಧಿ ಪಕ್ಷದ ಶೈಲಿಯಲ್ಲಿ ಬಿಜೆಪಿ ಆಡಳಿತದ, ಆಗಿನ ಉಸ್ತುವಾರಿ, ಕರ್ನಾಟಕದ ಮೋದಿ ನಾಗರಾಜಶೆಟ್ಟರ ವಿರುದ್ಧ ತೀಕ್ಷ್ಣ ಬರಹಗಳನ್ನು ಪ್ರಕಟಿಸತೊಡಗಿತು. ಬಿಜೆಪಿಯ ಭ್ರಷ್ಟ ಆಡಳಿತವನ್ನು ವಿರೋಧಿಸುವ ಜೊತೆಗೆ ಚಡ್ಡಿಪಡೆಗಳ ಮತೀಯ ಹಿಂಸಾಚಾರ, ಭಜರಂಗಿಗಳ ಪುಂಡಾಟ, ಕಲ್ಲಡ್ಕ ಭಟ್ಟನ ಕಿತಾಪತಿ, ಮಂಗಳೂರು ಗಲಭೆಯಲ್ಲಿ ಚಡ್ಡಿಗಳ ಪಾತ್ರ, ಸಾಂಸತಿಕ ದಬ್ಬಾಳಿಕೆಗಳ ಬಗ್ಗೆ ವ್ಯಾಪಕ ಬರಹಗಳನ್ನು ಪ್ರಕಟಿಸತೊಡಗಿತು.

ಸೀತಾರಾಮ ದಂಪತಿಗಳ ಬಂಧನ

ಸೀತಾರಾಮರ ಈ ನಿಷ್ಪಕ್ಷಪಾತಿ ನಿಲುವಿನಿಂದ ಕಂಗೆಟ್ಟ ಆರ್‌ಎಸ್‌ಎಸ್ ಆಗಲೇ 'ಕರಾವಳಿ ಅಲೆ'ಯ ಬಾಯಿ ಮುಚ್ಚಿಸುವ, ಪಳಗಿಸುವ ತೀರ್ಮಾನ ಕೈಗೊಂಡಿತ್ತು. ಪ್ರಜಾಪ್ರಭುತ್ವದ ಬಗ್ಗೆ ಎಳ್ಳಷ್ಟು ಗೌರವವಿಲ್ಲದ ಫ್ಯಾಸಿಸ್ಟ್ ಚಡ್ಡಿಗಳು ಜೈನ ಮುನಿಗಳ ನಗ್ನತೆಯ ಬಗ್ಗೆ ಕರಾವಳಿ ಅಲೆಯಲ್ಲಿ ಸೀತಾರಾಮರು ಬರೆದದ್ದನ್ನೇ ನೆಪವಾಗಿಸಿ 'ಕರಾವಳಿ ಅಲೆ' ಕಛೇರಿ ಧ್ವಂಸ ಮಾಡಿ, ಸೀತಾರಾಮ ದಂಪತಿಗಳನ್ನು ಬಂಧಿಸಿ ಜೈಲಿಗೆ ತಳ್ಳುವ ಮುಖಾಂತರ 'ಕರಾವಳಿ ಅಲೆ' ಮೇಲೆ ನಿರ್ಲಜ್ಜ ದಾಳಿ ನಡೆಸಿ ಬಾಯಿ ಮುಚ್ಚಿಸಲು ಪ್ರಯತ್ನಿಸಿತು. ಆ ನಂತರವೂ 'ಕರಾವಳಿ ಅಲೆ' ತನ್ನ ಎಂದಿನ ಶೈಲಿಯಲ್ಲಿ ಆಡಳಿತದ ಹುಳುಕುಗಳನ್ನು, ಚಡ್ಡಿಗಳ ನಿರ್ಲಜ್ಜ ಭ್ರಷ್ಟತೆಯನ್ನು ಬಯಲಿಗೆಳೆಯುವ ಕೆಲಸವನ್ನು ಮುಂದುವರೆಸಿತು. ಆದರಲ್ಲೂ ಇತ್ತೀಚಿನ ಪದ್ಮಪ್ರಿಯಾ ಪ್ರಕರಣ, ಚರ್ಚುಗಳ ಮೇಲಿನ ದಾಳಿ ಪ್ರಕರಣ, ಮಹೇಂದ್ರ ಕುಮಾರ್ ಜೈಲುವಾಸದ ಪುರಾಣದ ಬಗ್ಗೆ 'ಕರಾವಳಿ ಅಲೆ' ಪ್ರಕಟಿಸಿದ ಬರಹಗಳ ನಂತರವಂತೂ, ಇನ್ನು 'ಕರಾವಳಿ ಅಲೆ' ಹಾಗೂ ಬಿ.ವಿ.ಸಿ.ಯವರನ್ನು ಹೀಗೆ ಬಿಟ್ಟರೆ ತಮ್ಮ ಏಕಸ್ವಾಮ್ಯ ಮುಗಿದಂತೆ ಎಂದು ತೀರ್ಮಾನಿಸಿದ



ಸ್ವಲ್ಪ ದಿನಗಳ ಹಿಂದೆ ದಾಳಿಗೊಳಗಾಗಿದ್ದ ಕರಾವಳಿ ಅಲೆ ಕಛೇರಿ

ಸಂಘ ಪರಿವಾರ ಈಗ ಸಂಪೂರ್ಣ ಸಿದ್ಧತೆಯೊಂದಿಗೆ ಕಾರ್ಯಾಚರಣೆಗೆ ಇಳಿದಿದೆ.

ಇತ್ತೀಚೆಗೆ ಎಸ್‌ಇಜೆಡ್ ವಿರೋಧಿ ಹೋರಾಟಗಳಿಗೆ 'ಕರಾವಳಿ ಅಲೆ' ದೊಡ್ಡ ರೀತಿಯಲ್ಲಿ ಬೆಂಬಲ ಕೊಟ್ಟಿದೆ. ರೈತರನ್ನು ಒಕ್ಕಲೆಬ್ಬಿಸುವ ಪ್ರಶ್ನೆಯಲ್ಲಿ ಎಸ್‌ಇಜೆಡ್ ಪ್ರವರ್ತಕರ ಅಕ್ರಮ ಮಾರ್ಗ, ಕಾನೂನುಗಳ ಗಾಳಿಗೆ ತೂರುವಿಕೆ, ಮಾಧ್ಯಮಗಳನ್ನೇ ಖರೀದಿಸುವ ಪ್ರಯತ್ನಗಳನ್ನು ದಿನನಿತ್ಯ ವರದಿ ಮಾಡಿದೆ. ಅದರಲ್ಲೂ ಎಸ್‌ಇಝಡ್ ಸ್ಥಾಪನೆಗೆ ಬೆಂಗಾವಲಾಗಿ ನಿಂತಿರುವ ಭೂ ಮಾಫಿಯಾಗಳ, ಸ್ಥಳೀಯ ಫ್ಯೂಡಲ್ ಶಕ್ತಿಗಳ ವಿರುದ್ಧವೂ ಬರಹಗಳನ್ನು ಪ್ರಕಟಿಸಿದೆ. ಈ ವಿವಾದವನ್ನು ಬಳಸಿದ ಬಿಜೆಪಿ ಪರಿವಾರ ಎಸ್‌ಇಜೆಡ್ ಪರ ಶಕ್ತಿಗಳ ಹೆಸರಿನಲ್ಲಿ ಕರಾವಳಿ ಕಚೇರಿಗೆ ಕಾವಲಿದ್ದ ಪೊಲೀಸರ ಎದುರೇ ದಾಳಿ ನಡೆಸಿ ದಾಂದಲೆಗೈದಿದೆ. ಈ ದಾಳಿಯ ಆರೋಪಿಗಳ ಬಗ್ಗೆ ಸ್ಪಷ್ಟತೆ ಇದ್ದರೂ ಇಷ್ಟರವರೆಗೆ ಯಾರೊಬ್ಬರನ್ನು ಕೂಡ ಕನಿಷ್ಟ ವಿಚಾರಣೆಗೂ ಒಳಪಡಿಸಿಲ್ಲ. ಆದರೆ ಉಸ್ತುವಾರಿ ಸಚಿವ ಪಾಲೆಮಾರ್ ಮಾತ್ರ ಸಭ್ಯತೆಯ ಮುಖವಾಡ ಧರಿಸಿ ಬೀವಿಸಿಯವರನ್ನು ಭೇಟಿಯಾಗಿ ಮೊಸಳೆ ಕಣ್ಣೀರು ಸುರಿಸಿದ್ದಾರೆ.

ಹಿಂದೂ ತಾಲಿಬಾನ್ ಗಿರಿ

ಪತ್ರಿಕೆ ಮಾರಾಟಕ್ಕೆ ಅಡ್ಡಿ

ಆ ನಂತರ ನಡೆದದ್ದು ಪತ್ರಿಕೆಯ ಮಾರಾಟವನ್ನು ತಡೆಯುವ ಯತ್ನ. ಮುಖ್ಯವಾಗಿ ಎಸ್‌ಇಜೆಡ್ ಪರವಾಗಿ ವಕಾಲತ್ತು ವಹಿಸುತ್ತಿರುವ ವಜ್ರದೇಹಿ ಮಠದ ಶೇಖರಾನಂದ ಎಂಬ ಭಜರಂಗಿ ಸ್ವಾಮಿಯನ್ನು 'ಕರಾವಳಿ ಅಲೆ' ಟೀಕಿಸಿದ್ದನ್ನೇ ನೆಪವಾಗಿಟ್ಟುಕೊಂಡು 'ಕರಾವಳಿ ಅಲೆ' ಹಿಂದೂ ವಿರೋಧಿ ಅದನ್ನು ಬಹಿಷ್ಕರಿಸಬೇಕೆಂಬ ಕಾರ್ಯಕ್ರಮವನ್ನು ಆರ್‌ಎಸ್‌ಎಸ್ ಮುಖಂಡ ಕಲ್ಲಡ್ಕ ಭಟ್ಟನ ನೇರ ನಿರ್ದೇಶನದಲ್ಲಿ ಆರಂಭಿಸಲಾಗಿದೆ. ಶೇಖರಾನಂದ ಸ್ವಾಮಿಯನ್ನು ಎದುರಿಗಿಟ್ಟು ಅವರ ಭಕ್ತರ ಸೋಗಿನಲ್ಲಿ ಕಾರ್ಯಾಚರಣೆಗಿಳಿದ ದಾರಿ ತಪ್ಪಿರುವ ಹಿಂದುಳಿದ ವರ್ಗದ ಯುವಕರ ಭಜರಂಗಿ ಪಡೆ, ಮಂಗಳೂರಿನಲ್ಲಿ ಹೆಚ್ಚಿನ ಪತ್ರಿಕಾ ಸ್ಟಾಲ್‌ಗಳಿಗೆ ದಾಳಿಯಿಟ್ಟು 'ಕರಾವಳಿ ಅಲೆ'ಮಾರದಂತೆ ಬೆದರಿಕೆ ಹಾಕಿದೆ. ಮೊಬೈಲ್‌ಗಳಲ್ಲಿ 'ಕರಾವಳಿ ಅಲೆ' ಹಿಂದೂ ವಿರೋಧಿ, ಅದನ್ನು ಬಹಿಷ್ಕರಿಸಿ ಎಂಬ ಎಸ್‌ಎಂಎಸ್‌ಗಳನ್ನು ಕಳುಹಿಸಲಾಗಿದೆ. ಆರ್‌ಎಸ್‌ಎಸ್‌ನ ಎಂದಿನ ಪಿಸುಮಾತಿನ ತಂತ್ರವನ್ನು ಉಪಯೋಗಿಸಿ 'ಕರಾವಳಿ ಅಲೆ' ವಿರುದ್ಧ ಸುಳ್ಳು ಅಭಿಯಾನ ನಡೆಸಲಾಗಿದೆ. ಇಷ್ಟೆಲ್ಲಾ ಆದರೂ ಜನತೆ ಕ್ಯಾರೇ ಅನ್ನದೇ 'ಕರಾವಳಿ ಅಲೆ'ಯನ್ನು ಹುಡುಕಿ ಹುಡುಕಿ ಖರೀದಿಸುತ್ತಿದ್ದಾರೆ. ಈ ವಿವಾದದಿಂದ 'ಕರಾವಳಿ ಅಲೆ' ಪ್ರಸಾರ ವ್ಯಾಪಕವಾಗಿ ಹೆಚ್ಚಳವಾಗಿದೆ. ಇದರಿಂದ ಇನ್ನಷ್ಟು ಕುಪಿತರಾಗಿರುವ ಹಿಂದೂ ತಾಲಿಬಾನ್‌ಗಳು ತಮ್ಮ ಮಾತು ಮೀರಿ ಪತ್ರಿಕೆ ಮಾರಾಟ ಮಾಡುತ್ತಿರುವ ಕೆಲ ಸ್ಟಾಲ್‌ಗಳಿಗೆ ದಾಳಿ ಇಟ್ಟು, ಸ್ಟಾಲ್‌ಗಳನ್ನು ಧ್ವಂಸಗೊಳಿಸ ತೊಡಗಿದ್ದಾರೆ. ಅದರಲ್ಲೂ ಪತ್ರಿಕಾ ಮಾರಾಟದ ಸ್ಟಾಲ್‌ಗಳ ಮೇಲೆ ದಾಳಿ ನಡೆಸುವಾಗ ಅಲ್ಪಸಂಖ್ಯಾತರ ಸ್ಟಾಲ್‌ಗಳನ್ನೇ ಆಯ್ಕೆ ಮಾಡಿ ದಾಂಧಲೆ ನಡೆಸಲಾಗುತ್ತಿದೆ. ಪ್ರಥಮವಾಗಿ ನಗರದ ಪಳ್ನೀರ್ ರಸ್ತೆಯ ಮೆಲ್ವಿನ್ ಎಂಬ ಕ್ರಿಶ್ಚಿಯನ್ನರ ಅಂಗಡಿಯನ್ನು ಪುಡಿಗುಟ್ಟಿ ಅಲ್ಲಿನ ಸಿಬ್ಬಂದಿಯಾದ ಯುವತಿಯೊಬ್ಬರ ಮೇಲೆ ಹಲ್ಲೆಗೈಯ್ಯಲಾಗಿದೆ. ದಾಳಿಯ ಸಾಧ್ಯತೆಯ ಹಿನ್ನೆಲೆಯಲ್ಲಿ ಅಂಗಡಿಗೆ ಪೊಲೀಸ್ ಕಾವಲು ಹಾಕಲಾಗಿತ್ತು. ಆದರೆ ದಾಳಿಯ ಸಂದರ್ಭದಲ್ಲಿ ಪೊಲೀಸ್ ಪೇದೆ ಸ್ಥಳದಿಂದ ತೆರಳಿರುವುದು ಈ ದಾಳಿಗಳಲ್ಲಿ ಜಿಲ್ಲಾಡಳಿತದ ನೇರ ಭಾಗಿದಾರಿಕೆಯನ್ನು ಸ್ಪಷ್ಟಪಡಿಸುತ್ತಿದೆ. ಬಲ್ಮಠದಲ್ಲಿರುವ ಬಡ ಮುಸಲ್ಮಾನನ ಗೂಡಂಗಡಿಯನ್ನು 'ಕರಾವಳಿ ಅಲೆ' ಮಾರಾಟ ಮಾಡಿದ ತಪ್ಪಿಗೆ ಸಂಪೂರ್ಣ ಧ್ವಂಸಗೊಳಿಸಲಾಗಿದೆ. ಜನನಿಬಿಡ ಪ್ರದೇಶಗಳಲ್ಲಿ ಪತ್ರಿಕೆ ಮಾರುವ ಹುಡುಗರಿಗೆ ಹಲ್ಲೆ ನಡೆಸುವುದು, ಪತ್ರಿಕೆಯ ಬಂಡಲ್‌ಗಳನ್ನು ಬಸ್ಸುಗಳಿಗೆ ಹಾಕುವ ಪತ್ರಿಕೆ ಸಿಬ್ಬಂದಿಗಳಿಗೆ ಹಲ್ಲೆ ನಡೆಸಿ ಬಂಡಲ್‌ಗಳನ್ನು ಕಿತ್ತುಕೊಳ್ಳುವುದು ನಡೆಯುತ್ತಿದೆ. ಈ ಎಲ್ಲಾ ದಾಳಿಗಳು, ಸರಕಾರದ ಶಾಮಿಲಾತಿ, ಪೊಲೀಸರ ನಿಷ್ಕ್ರಿಯತೆಯಿಂದಾಗಿ ಬೆದರಿರುವ ಪತ್ರಿಕಾ

ಪುಟ 6 ಕ್ಕೆ

ನಿಷ್ಕ್ರಿಯ ಕಾಂಗ್ರೆಸ್

ಈ ಬೆಳವಣಿಗೆಗಳ ಬಗ್ಗೆ ಸಂಘ ಪರಿವಾರದ ಫ್ಯಾಸಿಸ್ಟ್ ಮಾದರಿ ಆಡಳಿತದ ವಿರುದ್ಧ ಧ್ವನಿ ಎತ್ತಬೇಕಾಗಿದ್ದ ವಿಪಕ್ಷ ಕಾಂಗ್ರೆಸ್‌ನ ಐದಾರು ಎಂಎಲ್‌ಎಗಳು, ಕೇಂದ್ರ ಮಂತ್ರಿಗಳು, ರಾಷ್ಟ್ರೀಯ ನಾಯಕರನ್ನು ಹೊಂದಿದ್ದು ಕೈಲಾಗದವರಂತೆ ಸುಮ್ಮನಿದೆ.

ಕಾಂಗ್ರೆಸ್ಸಿನ ಈ ನಿಷ್ಕ್ರಿಯತೆ, ಸ್ಪಷ್ಟತೆಯಿಲ್ಲದ 'ಜಾತ್ಯಾತೀತತೆ' ಯಿಂದಾಗಿಯೇ ಬಿಜೆಪಿ ತನಗೆ ಕರಾವಳಿ ಜಿಲ್ಲೆಗಳಲ್ಲಿ ಎದುರಿಲ್ಲ ಎಂದು ಅಹಂಕಾರದಿಂದ ಮೆರೆದಾಡುತ್ತಿದೆ. ಬಿಜೆಪಿಯ ಚಡ್ಡಿ ನಾಯಕರ ಅರ್ಭಟದ ಭಾಷಣಗಳಿಗೆ ಬಾಲ ಮುದುರಿ ಕುಳಿತುಕೊಳ್ಳುವ ಕಾಂಗ್ರೆಸ್ಸಿನಿಂದ ಕರಾವಳಿಯ ಜನತೆಗೆ ಈಗ ಯಾವ ನಿರೀಕ್ಷೆಯೂ ಇಲ್ಲ.

ಬೆಂಕಿಗೂ ಸ್ಲಂಗೂ ಅವಿನಾಭಾವ ಸಂಬಂಧವಿರುವ ಹಾಗೆ ಕಾಣುತ್ತದೆ. ಆಗಿಂದಾಗ್ಗೆ ಬೆಂಗಳೂರಿನಲ್ಲಿ ಸ್ಲಂಗೆ ಬೆಂಕಿ ಬೀಳುವುದು ಸಾಮಾನ್ಯವಾಗಿ ಬಿಟ್ಟಿದೆ.

ಸ್ಲಂಗೆ ಬೆಂಕಿ ಬಿದ್ದು ಬಡವರ ಮನೆಗಳು ಸುಟ್ಟುಹೋಗಿವೆ. ಸುಟ್ಟಿರುವುದು ಸಂಗ್ರಹಿಸಿಟ್ಟ ಚಿಂದಿ ಮಾತ್ರ ಎಂದು ಪಾಲಿಕೆ ಅಧಿಕಾರಿಗಳು ಮೂರು ಕಾಸು ಕೈಗಿಟ್ಟು ಜಾಗ ಖಾಲಿ ಮಾಡಿದ್ದಾರೆ.

ಸ್ಲಂ ಗೆ ಬೆಂಕಿ

ಅತಂತ್ರರಾದ ಕೊಳೆಗೇರಿ ನಿವಾಸಿಗಳು

ಬೆಂಗಳೂರಿನ ಜೆ.ಸಿ.ರಸ್ತೆಯ ಮುನಿಯಪ್ಪ ಸಿಮೆಂಟ್ ಕಾಂಪೌಂಡ್ ಸ್ಲಂಗೆ ಬೆಂಕಿ ಬಿದ್ದು ಪೂರ್ತಿ ಸುಟ್ಟು ಗುಡಿಸಲು ಹಾಗೂ ಜನರು ಸಂಗ್ರಹಿಸಿಟ್ಟಿದ್ದ ಆಯ್ದು ಚಿಂದಿ ಬೂದಿಯಾದವು. ಬೆಂಕಿ ಆಕಸ್ಮಿಕವೋ? ಉದ್ದೇಶ ಪೂರ್ವಕವೋ? ತನಿಖೆಯಿಂದಲೇ ತಿಳಿಯಬೇಕಿದೆ. ಆದರೆ ಸ್ಲಂ ಜನರ ಪಾಡಂತೂ ಹೇಳತೀರದಾಗಿದೆ. ಇಲ್ಲಿದ್ದ 57 ಮನೆಗಳು ಭಸ್ಮವಾದವು. ಸದ್ಯ ಜನ ಪ್ರಾಣಾಪಾಯದಿಂದ



ಸುಟ್ಟ ಗುಡಿಸಲಿಗೆ ತಣ್ಣೀರು. ಹಸಿದ ಹೊಟ್ಟೆಗೆ?

ಪಾರಾಗಿದ್ದಾರೆ.

ದಿಕ್ಕು ತೋಚದ ಜನ ಬಿಬಿಎಂಪಿ ಕಛೇರಿ ಎದುರು ಪ್ರತಿಭಟನೆಗೆ ಸಿದ್ಧವಾಗಿದ್ದು. ಡಿವೈಎಫ್ಐ, ಜನವಾದಿ ಮಹಿಳಾ ಸಂಘಟನೆ ಪ್ರತಿಭಟನೆಗೆ ನೇತೃತ್ವ ನೀಡಿದವು. ನೂರಾರು ಸಂಖ್ಯೆಯಲ್ಲಿ ನೆರೆದಿದ್ದ ಸ್ಲಂ ಜನ ಪರಿಹಾರಕ್ಕಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಛೇರಿ ಎದುರು ಬಿಸಿಲಲ್ಲಿ ಘೋಷಣೆ ಕೂಗುತ್ತಿದ್ದರು. ನೆರದಿದ್ದವರನ್ನು ನೋಡಿದವರಿಗೆ ಅನುಮಾನವೇ ಇರಲಿಲ್ಲ ಅವರು ಸ್ಲಂ ಜನರು ಎಂದು. ಬಂದಿದ್ದ ಎಲ್ಲರ ಪಾದಗಳು ಕಪ್ಪಾಗಿದ್ದವು. ಏಕೆಂದು ಚಿಂತಿಸುತ್ತಿರುವಾಗಲೇ ತಿಳಿದದ್ದು ಅವರೆಲ್ಲರೂ ಚಿಂದಿ ಆಯುವ ಜನ. ಬೆಂಗಳೂರಿನ ಉದ್ದಗಲಕ್ಕೂ ಹೋಗಿ ಚಿಂದಿಗಳನ್ನು ಆಯ್ದು, ಅದನ್ನು ಬೇರ್ಪಡಿಸಿ (ಪೇಪರ್, ಪ್ಲಾಸ್ಟಿಕ್, ತಾಮ್ರ, ವೈರ್, ಕಾಪರ್ ಈ ರೀತಿ) ಕಂಟ್ರಾಕ್ಟರೊಬ್ಬರಿಗೆ ಮಾರಿ ಜೀವನ ಸಾಗಿಸುವುದು ಇವರ ಕಾರ್ಯ. ಇವರ ದಿನದ ಆದಾಯ ಕೇವಲ 50 ರೂ. ಈ ಆದಾಯದಿಂದಲೇ ದಿನ ದೂಡಬೇಕು. ಇಂಥ ಪರಿಸ್ಥಿತಿಯಲ್ಲಿರುವ ಜನರಿಗೆ ಆಶ್ರಯವಾಗಿದ್ದ ಮನೆಗಳು ಇದ್ದಕ್ಕಿದ್ದಂತೆ ಭಸ್ಮವಾದಾಗ ಅವರ ಪಾಡೇನು?

ಪಾಲಿಕೆ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ವರದಿ ನೀಡಿದ್ದಾರೆ. ಇಲ್ಲಿ ಸುಟ್ಟಿರುವುದು ಚಿಂದಿ ಅಂಗಡಿಗಳು ಮಾತ್ರ. ಮನೆಗಳಲ್ಲ ಎಂದು ಒಂದೂವರೆ ಸಾವಿರ ರೂಪಾಯಿ ಚೆಕ್ ನೀಡಿ ಕೈ ತೊಳೆದುಕೊಂಡಿದ್ದಾರೆ. ಆದರೆ ವಾಸ್ತವ ಪರಿಸ್ಥಿತಿ ಬೇರೆಯದನ್ನೇ ಹೇಳುತ್ತದೆ. ಪೂರ್ತಿ 57 ಮನೆಗಳು ಸುಟ್ಟು ಅಲ್ಲಿದ್ದ ವಸ್ತುಗಳು ಸಂಪೂರ್ಣ ಸುಟ್ಟು ಹೋಗಿವೆ. ಸಹಜವಾಗಿ ಚಿಂದಿ ಗುಡ್ಡೆ ಹಾಕಿದ್ದರಿಂದಾಗಿ ಚಿಂದಿಯೂ ಬೆಂಕಿಗೆ ಆಹುತಿಯಾಗಿದೆ. ವಿಚಾರ ಮಾಧ್ಯಮಗಳಲ್ಲೂ ದೊಡ್ಡ ರೀತಿಯಲ್ಲಿ ವರದಿಯಾಗಿದೆ. ರಾಜ್ಯ ಸ್ಲಂ ಬೋರ್ಡ್ ಮಾತ್ರ ಇತ್ತ ತಲೆಹಾಕಿಯೂ ನೋಡಿಲ್ಲ. ಕಾರಣ ಕ ' ೀ ಳ ದ ' ರ ' ಸ್ಲಂ ಬೋರ್ಡ್‌ನಲ್ಲಿ ದಾಖಲಾಗಿಲ್ಲ. ಹೀಗಾಗಿ ನಾವೇನು ಮಾಡಲು ಸಾಧ್ಯವಿಲ್ಲವೆಂಬ ಉತ್ತರ. ಇತ್ತ ಮಹಾನಗರ ಪಾಲಿಕೆಯಿಂದಾಗಲಿ ಅತ್ತ ಸ್ಲಂ ಬೋರ್ಡ್‌ನಿಂದಾಗಲಿ ಪರಿಹಾರ ಕಾಣದಾದಾಗ ಜೆಎಂಎಸ್-ಡಿವೈಎಫ್ಐ ಜನರ ನೆರವಿಗೆ ಧಾವಿಸಿ ಹೋರಾಟಕ ಅಣಿನೆರೆಸಿದವು. ಪ್ರತಿಭಟನೆಯ ಸ್ಥಳಕ್ಕೆ ಆಗಮಿಸಿ ಜಂಟಿ ಆಯುಕ್ತರು ತಾತ್ಕಾಲಿಕವಾಗಿ ಊಟ, ಶೆಡ ಏರ್ಪಾಡು ಮಾಡುವುದಾಗಿ ಭರವಸೆ ನೀಡಿದರು ಭರವಸೆಯಂತೆ ಊಟ ನೀಡಲಾಗಿದೆಯಾದರು ಇತರೆ ಪರಿಹಾರಗಳನ್ನು ನೀಡಿಲ್ಲ. ಸ್ಲಂಗೆ ಭೇ ನೀಡಿದ ಡಿವೈಎಫ್ಐ-ಜೆಎಂಎಸ್ ನಿಯೋಗ ಸ್ಥ ವೀಕ್ಷಿಸಿ ಜನರೊಂದಿಗೆ ಚರ್ಚಿಸಿ ಶಾಶ್ವತ ಪರಿಹಾ ಕಾಣುವ ಹಿನ್ನಲೆಯಲ್ಲಿ ಹೋರಾ ಸಮಿತಿಯೊಂದನ್ನು ರಚಿಸಲಾಗಿದೆ. ಈ ಹೋರಾಟ ಜೆಎಂಎಸ್ ರಾಜ್ಯ ಕಾರ್ಯದರ್ಶಿ ಕೆ.ಎಸ್.ಲಕ್ಷ್ಮಿ ಜೆಎಂಎಸ್ ಜಿಲ್ಲಾ ಮುಖಂಡರಾದ ಗೌರಮ್ಮ, ಶಾರದ, ಯಶೋಧಮ್ಮ ಶ್ರೀಮತಿ ಹಾಗು ಡಿವೈಎಫ್ಐ ಸಿ.ನಾಗರಾಜ್ ಇವರು ನೇತೃ ನೀಡಿದ್ದಾರೆ.

- ಲಿಂಗರಾಜ

ಜನವಾದಿ ಮಹಿಳಾ ಸಂಘಟನೆ ಮತ್ತು ಡಿವೈಎಫ್ಐ ನೇತೃತ್ವದಲ್ಲಿ ಪಾಲಿಕೆ ಕಛೇರಿ ಮುಂದೆ ಸ್ಲಂ ಜನರ ಪ್ರತಿಭಟನೆ



...............ಬಾಬಾಬುಡನ್‌ಗಿರಿ

ಪುಟ 3 ರಿಂದ

ಧ್ವನಿವರ್ಧಕ ಬಳಕೆಗೆ ಅವಕಾಶ ಕಲ್ಪಿಸಿದೆ.

'ಇಲ್ಲಿ ಬರುವ ಭಕ್ತಾದಿಗಳಿಗೆ ವ್ಯವಸ್ಥೆ ಮಾಡುವುದು ನಮ್ಮ ಕರ್ತವ್ಯ' ಎಂದೇ ಚಿಕ್ಕಮಗಳೂರಿನ ಜಿಲ್ಲಾಧಿಕಾರಿ ನಾರಾಯಣಸ್ವಾಮಿ ಹೇಳುತ್ತಾರೆ. ಬಜರಂಗದಳದವರಲ್ಲಿ ಭಕ್ತಿ ಉಕ್ಕುತ್ತಿರುವುದನ್ನು ಕಂಡು ಸ್ಫೂರ್ತಿಗೊಂಡಿರುವ ಈ ಅಧಿಕಾರಿ ಇದಕ್ಕೂ ಮುನ್ನ ಅಲ್ಲಿಗೆ ತೆರಳಿದ್ದ ಸಿಪಿಐ(ಎಂ) ನಿಯೋಗವು ಗುಹೆ ಬಳಿ ದತ್ತಮಾಲೆ ಆಚರಣೆ- ದತ್ತ ವಿಗ್ರಹ ಪೂಜೆಯ ಬಗ್ಗೆ ಮಾತನಾಡಿ ಅವು ಒಂದು ದಿನ ಒಳಗೆ ಹೋಗುವುದಿಲ್ಲ ಎಂದೆನ್ನಿಸದು. ಸಂಘ ಪರಿವಾರದವರನ್ನು ಈ ವಿಷಯದಲ್ಲಿ ನಂಬಲಾದೀತೇ'' ಎಂದರೆ 'ಹಾಗೇನಿಲ್ಲ' ನನಗೆ ಅವರು ಭರವಸೆ ನೀಡಿದ್ದಾರೆ' ಎಂದಿದ್ದ. 'ಅಯೋಧ್ಯೆಯ ಬಾಬ್ರಿ ಮಸೀದಿ ವಿಷಯದಲ್ಲಿ ಕೋರ್ಟ್‌ಗೆ ಹೀಗೆಯೇ ಮುಚ್ಚಳಿಕೆ ಬರೆದುಕೊಟ್ಟು ಧ್ವಂಸಗೊಳಿಸಲಿಲ್ಲವೇ ಅದೂ ಅದ್ವಾನಿ ಸಮ್ಮುಖದಲ್ಲೇ, ಎಂದಾಗ "ಇಲ್ಲ ಹೀಗೆ ಮಸೀದಿ ಒಡೆಯಲಾಗುವುದು ಎಂಬುದು ಅದ್ವಾನಿಗೆ ಗೊತ್ತಿರಲಿಲ್ಲ" ಎಂದು ಸಮರ್ಥಿಸಿಕೊಂಡಿದ್ದರು. ಇಂತಹ ನಿಷ್ಠತೆಯನ್ನೇ ಗುರುತಿಸಿ ಅವರಿಗೆ ಐಎಎಸ್‌ಗೆ ಬಡ್ತಿ ನೀಡಿ ಚಿಕ್ಕಮಗಳೂರು ಜಿಲ್ಲೆ ಉದ್ಧಾರ ಮಾಡಲು ಯಡಿಯೂರಪ್ಪನವರು ವರ್ಗಾಯಿಸಿದ್ದಾರೆ. ಸರ್ಕಾರದ, ಬಿಜೆಪಿ ಬಜರಂಗದಳದ ನಿರ್ದೇಶನಗಳನ್ನು ಹೀಗೆಲ್ಲಾ ಜಾರಿಗೊಳಿಸುವುದು ಕಾನೂನುಬಾಹಿರ ಮತ್ತು ಪರಿಣಾಮಗಳು ಏನು ಎಂಬುದರ ಎಚ್ಚರಿಕೆ ಇಲ್ಲದಂತಹ ಮತೋನ್ಮಾದದ ಮಂಪರು ಅಪಾಯಕಾರಿ.

ಹಾಗೆ ಗಿರಿವ್ಯಾಪ್ತಿ, 5 ಎಕರೆ ಮಾತ್ರ ಎನ್ನುವ ಶಾಸಕ ಸಿ.ಟಿ ರವಿ 12 ಎಕರೆ ಮಾತ್ರ ಎನ್ನುವ ಜಿಲ್ಲಾಧಿಕಾರಿಗಳ ಮಾತುಗಳಿಗೆ ಆಧಾರವೇ ಇಲ್ಲ. ಈ ಸಂಗತಿ ಕಡತದಲ್ಲಿವೆ ಎಂಬುದು ಕೇವಲ ಹಾರಿಕೆಯ ಮಾತಷ್ಟೇ.

ಅಂದ ಹಾಗೆ ಮೂರನೆಯ ದಿನದ ದತ್ತ ಜಯಂತಿಗೆ ಜನತೆ ಅಷ್ಟಾಗಿ ಭಾಗವಹಿಸದೇ ಪ್ರತಿಕ್ರೀಯಿಸಿದ್ದಾರೆ. ಇದಕ್ಕೆ ಜನರನ್ನು ಕರೆದುತರಲಾಗಿಲ್ಲ ಎಂಬುದು ಶಾಸಕ ರವಿ ಹೇಳಿಕೆ. ಇಲ್ಲಿಗೆ ಬರುತ್ತಿದ್ದ ಬಹುತೇಕರು ಹೊರಗಿನವರು ಎಂಬುದು ಆ ಮಾತುಗಳಲ್ಲೇ ಕಾಣುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ್ದು, ಸಂಘ ಪರಿವಾರವು ತನ್ನ ಆಕ್ರಮಣಶೀಲ ಹಿಂದುತ್ವದೊಂದಿಗೆ ಧಾರ್ಮಿಕ ಸಹಿಷ್ಣುತೆ, ಬಹುಸಂಸ್ಕೃತಿ- ಆಚರಣೆ, ಮತನಿರಪೇಕ್ಷತೆ ಪ್ರಜಾಪ್ರಭುತ್ವದ ಮೌಲ್ಯಗಳ ಮೇಲೆ ದಾಳಿಯನ್ನು ಮುಂದೆ ಒತ್ತುತ್ತಿರುವುದು. ಅದಕ್ಕಾಗಿ ಬಿಜೆಪಿಯ ಅಧಿಕಾರವನ್ನು ಬಳಸಿ ಬುಡಮೇಲುಮಾಡಲು ಯತ್ನಿಸುತ್ತಿರುವುದು. ಇಂತಹದ್ದೇ ಅಧಿಕಾರ ದುರ್ಬಳಕೆಯ ವರ್ತನೆಯನ್ನು ರಾಜ್ಯದೆಲ್ಲೆಡೆ ಯಡಿಯೂರಪ್ಪನವರ ಸರ್ಕಾರ ಎಗ್ಗಿಲ್ಲದೆ ತೋರುತ್ತಿದೆ. ಗಿರಿ ವಿಷಯದಲ್ಲಿ ಸರ್ಕಾರವೇ ನ್ಯಾಯಾಲಯದ ಆದೇಶ ಉಲ್ಲಂಘಿಸುವುದು ಗಂಭೀರ ವಿಷಯ. ಇಂತಹವಕ್ಕೆ ಸರ್ಕಾರದ ಆದೇಶವಿಲ್ಲ ಎಂದಾದರೆ ತಪ್ಪಿತಸ್ಥರ ಮೇಲೆ ಕೂಡಲೇ ಕ್ರಮ ವಹಿಸಬೇಕು. ಇಲ್ಲವಾದರೆ ಸರ್ಕಾರದ್ದೇ ಜವಾಬ್ದಾರಿ ಅದೇ. ನಿಲುವು ಎಂದಾದರೆ ನ್ಯಾಯಾಲಯ ಯಡಿಯೂರಪ್ಪನವರ ಸರ್ಕಾರದ ಮೇಲೆ ಕ್ರಮ ವಹಿಸಬೇಕು.

ಬಾಬಾಬುಡನ್‌ಗಿರಿಯ ಒಟ್ಟು ವಿದ್ಯಮಾನಗಳಿಂದ ರಾಜ್ಯದ ಜನತೆ ಎಚ್ಚೆತ್ತುಕೊಳ್ಳಬೇಕಿದೆ. ಯಾಕೆಂದರೆ ಇಂತಹದ್ದೇ ಸನ್ನಿವೇಶವನ್ನು ಹಂಪಿ ಅಂತರಗಂಗೆ, ಮುಂತಾದೆಡೆ ಸೃಷ್ಟಿಸುತ್ತಿದೆ. ಸಂಘ ಪರಿವಾರದ ಆಪರೇಷನ್ ಇಂತಹ ಇನ್ನೂ ರಾಜ್ಯದ ಅನೇಕ ಕಡೆ ಹಲವು ಅಯೋಧ್ಯೆ, ಬಾಬಾಬುಡನ್‌ಗಿರಿಗಳನ್ನು ಸೃಷ್ಟಿಸಿ ಸಾಮರಸ್ಯದ ನಾಡಿಗೆ ಕೊಳ್ಳಿ ಇಡಲಿದೆ.

......ಕರಾವಳಿ ಅಲೆ

ಪುಟ 5 ರಿಂದ

ಮಾರಾಟಗಾರರಲ್ಲಿ ಹೆಚ್ಚಿನವರು 'ಕರಾವಳಿ ಅ ಮಾರಾಟ ಮಾಡುವುದನ್ನು ತಾತ್ಕಾಲಿಕವಾ ನಿಲ್ಲಿಸಿದ್ದಾರೆ. ಇಷ್ಟೆಲ್ಲಾ ನಿರ್ಬಂಧಗಳ ಮಧ್ಯೆಯೂ 'ಕರಾವಳಿ ಅಲೆ'ಯ ಪ್ರಸಾರ ವ್ಯಾಪಕವಾ ಹೆಚ್ಚಿರುವುದು ಜನತೆಯು ಸಂಘ ಪರಿವಾರ ಸರ್ವಾಧಿಕಾರಿ ಧೋರಣೆಯನ್ನು ಪ್ರತಿಭಟಿಸುವುದ ಸಂಕೇತವಾಗಿದೆ.

ಎಂದಿನಂತೆ 'ಕರಾವಳಿ ಅಲೆ' ಹಾಗ ಸೀತಾರಾಮರ ಮೇಲಾಗುತ್ತಿರುವ ದಾಳಿಗಳ ಬ ಜನಪರ ಸಂಘಟನೆಗಳು ಧ್ವನಿ ಎತ್ತಲಾರಂಭಿಸಿ ಸಾಮೂಹಿಕ ಹೋರಾಟಗಳಿಗೆ ಸಿದ್ಧತೆಗ ನಡೆಯುತ್ತಿದೆ. ಭಜರಂಗಿ ಗೂಂಡಾಪಡೆ ಬೀದಿಯ ಒಡ್ಡಿರುವ ಸವಾಲನ್ನು ಬೀದಿಯಲ್ಲಿಯೇ ಎದುರಿಸು ನಿಟ್ಟಿನಲ್ಲಿ ಎಡ, ಜಾತ್ಯಾತೀತ ಶಕ್ತಿಗಳನ್ನು ಒಂದ ಸೇರಿಸುವ, ನೇರ ಮುಖಾಮುಖಿಯಾಗು ಪ್ರಯತ್ನಗಳಾಗುತ್ತಿವೆ. ಇಂತಹ ಪ್ರಯತ್ನಗಳ ಚಳುವಳಿಗಳು ಮಾತ್ರ ಕರಾವಳಿ ಜಿಲ್ಲೆಗಳನ್ನು, ಮುಖಾಂತರ ಕರ್ನಾಟಕವನ್ನು ಚ ಫ್ಯಾಸಿಸ್ಟ್‌ವಾದಿಗಳಿಂದ ರಕ್ಷಿಸೀತು ಎನ್ನುವ ನಿರ ಈ ಜಿಲ್ಲೆಗಳ ಪ್ರಜ್ಞಾವಂತ ಸಾಮಾನ್ಯ ಜನತೆಯದ

- ಸಂಜ

ಕಾರ್ಮಿಕ ವರ್ಗದ ಇತಿಹಾಸವೆಂದರೆ ಕಾರ್ಮಿಕರನ್ನು ಕೆಲಸ ಮಾಡುವಂತೆ ಬಲವಂತ ಮಾಡುವ ಕಾನೂನುಬಾಹಿರ ಪರಿಸ್ಥಿತಿಗಳಿಂದ ಮತ್ತು ಅವರ ಶ್ರಮದ ಫಲಗಳನ್ನು ಅವರಿಂದ ಕಿತ್ತುಕೊಳ್ಳುವ ಪರಿಸ್ಥಿತಿಗಳಿಂದ ಸ್ವಾತಂತ್ರ್ಯ ಪಡೆಯಲು ಮಾಡಿದ ನಿರಂತರ ಪ್ರಯತ್ನಗಳ ಇತಿಹಾಸ. ಇದು ಅವರು ಪ್ರಜಾಪ್ರಭುತ್ವಕ್ಕಾಗಿ ಹೋರಾಡುವಂತೆ ಮಾಡಿದೆ. ಇದು ಅವರು ಕೋಮುವಾದದ ವಿರುದ್ಧ, ಭಯೋತ್ಪಾದನೆಯ ವಿರುದ್ಧ ಮತ್ತು ಜನಗಳ ದಮನದ ಎಲ್ಲ ಸ್ವರೂಪಗಳ ವಿರುದ್ಧ ಹೋರಾಡುವಂತೆ ಮಾಡಿದೆ. ಅದ್ದರಿಂದಲೇ ಈಗಿನ ಸಂದರ್ಭದಲ್ಲಿ ಕಾರ್ಮಿಕ ವರ್ಗದ ಪಕ್ಷ ತನ್ನ ಶಕ್ತಿ ಸೀಮಿತವಾಗಿದ್ದರೂ ಭಯೋತ್ಪಾದನೆ ಮತ್ತು ಕೋಮುವಾದದ ವಿರುದ್ಧ ಪ್ರಚಾರಾಂದೋಲನಕ್ಕೆ ಇಳಿದಿದೆ. ಈ ಮೂಲಕ ಈ ನಾಲ್ಕು ರಾಜ್ಯವ್ಯಾಪಿ ಜಾಥಾಗಳನ್ನು ನಡೆಸಿ ಅದರ ಕೊನೆಯಲ್ಲಿ ಬೆಂಗಳೂರಿನಲ್ಲಿ 23 ಡಿಸೆಂಬರ್ 2008 ರಂದು ಒಂದು ರಾಜ್ಯ ಮಟ್ಟದ ರ್‍ಯಾಲಿಯನ್ನು ನಡೆಸುತ್ತಿದೆ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ರಾಜ್ಯಕಾರ್ಯದರ್ಶಿಗಳು ಮುಂಬೈ ದಾಳಿಗಳ ಹಿನ್ನೆಲೆಯಲ್ಲಿ ರಾಜಕೀಯ ಪ್ರಕ್ರಿಯೆಯನ್ನೇ ಹೀಗಳೆಯುವ ಪ್ರವೃತ್ತಿಯನ್ನೂ ವಿಶ್ಲೇಷಿಸುತ್ತಾರೆ.

ಕೋಮುವಾದ ಮತ್ತು ಭಯೋತ್ಪಾದನೆಯ ವಿರುದ್ಧ

ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಟ ಮತ್ತು ದುಡಿಮೆಗಾರ ಜನಗಳು

ವಿ.ಜೆ.ಕೆ. ನಾಯರ್

ರಾಜಕೀಯದ ಬಗೆಗೆ ತಿರಸ್ಕಾರ

ನವಂಬರ್ ತಿಂಗಳ ಕೊನೆಯ ವೇಳಗೆ ಮುಂಬೈ ಮೇಲೆ ಭಯೋತ್ಪಾದಕ ದಾಳಿಗಳು ನಡೆದವು. ಕಳೆದ ವಾರ 'ಜನಶಕ್ತಿ'ಯಲ್ಲಿ ಇದರ ಹಿಂದಿರುವ ರಾಜಕೀಯದ ವಿಶ್ಲೇಷಣೆ ನಡೆಸಿದ್ದೇವೆ. ಆದರೂ ಸಮೂಹ ಮಾಧ್ಯಮಗಳಲ್ಲಿ ಒಟ್ಟಾರೆಯಾಗಿ ರಾಜಕೀಯದ ವಿರುದ್ಧ ನಡೆಯುತ್ತಿರುವ ಪ್ರಚಾರವನ್ನು ಪರಿಶೀಲಿಸಬೇಕಾಗುತ್ತದೆ. ಈ ಅಪಪ್ರಚಾರ ಮಾಡುತ್ತಿರುವ ಕೇಡನ್ನು ತಪ್ಪಿಸಲು ಇದು ಅಗತ್ಯ. 'ಇನಫ್ ಈಸ್ ಇನಫ್' ಅಂದರೆ 'ಸಾಕಪ್ಪಾ ಸಾಕು' ಎಂಬ ಒಂದು ಘೋಷಣೆ ಜನಗಳ



ಚಿಕ್ಕಮಗಳೂರಿನಲ್ಲಿ ಬಾಬಾಬುಡನ್‌ಗಿರಿ ಜಾಥಾದ ಮೆರವಣಿಗೆ

ಮನತಟ್ಟಿದೆ. ರಾಜಕಾರಣಿಗಳ ವಿರುದ್ಧ ಎಂತಹ ವಿಷಯುಕ್ತ ಪ್ರಚಾರ ನಡೆಸಲಾಗುತ್ತಿದೆಯೆಂದರೆ ಒಂದು ಸರ್ವಾಧಿಕಾರಶಾಹಿ ವ್ಯವಸ್ಥೆ ಬರಲು ಪೂರಕವಾದಂತಹ ಸನ್ನಿವೇಶವನ್ನು ಸೃಷ್ಟಿಸಲಾಗುತ್ತಿದೆ. ಆಳುವ ವರ್ಗಗಳಿಗೆ ಪ್ರಜಾಪ್ರಭುತ್ವ ಬಹಳ ಅನಾನುಕೂಲಕಾರಿ ಎಂದನಿಸುತ್ತಿದೆ. ಚುನಾವಣಾ ಪ್ರಕ್ರಿಯೆಗಳಲ್ಲಿ ಆಗುತ್ತಿರುವ ಖರ್ಚು, ಸಂಸತ್ ಸದಸ್ಯರಿಗೆ ಮಾಡುತ್ತಿರುವ ಖರ್ಚು ಇತ್ಯಾದಿಗಳನ್ನು ಆಗಾಗ ಎತ್ತಿ ತೋರಿಸಿ ಅಪಪ್ರಚಾರ ಮಾಡಲಾಗುತ್ತಿದೆ. ಒಟ್ಟಾರೆಯಾಗಿ ರಾಜಕಾರಣಿ ಗಳನ್ನು ವಿರೋಧಿಸುವವರು ದಾಳಿಗಳನ್ನು ತಡೆಯುವುದು ಅವರಿಂದಾಗಲಿಲ್ಲ, ದಾಳಿಗಳು ನಡೆದಾಗ ಅವುಗಳ ವಿರುದ್ಧ ಹೋರಾಡಿದ್ದು ಸೇನೆ ಮತ್ತು ಕಮಾಂಡೋಗಳು ಎಂದು ಪ್ರಚಾರ ಮಾಡುತ್ತಿದ್ದಾರೆ. ಅಂದರೆ ಇದು ಸ್ಪಷ್ಟವಾಗಿ ತುರ್ತು ಪರಿಸ್ಥಿತಿ ಹಾಗೂ ಮಿಲಿಟರಿ ಆಳ್ವಿಕೆಯ ಪರವಾದ ವಾದ.

ಈ ಪ್ರಚಾರಕರು ಪಾಕಿಸ್ತಾನ ಬಹಳ ದೀರ್ಘಕಾಲ ಮಿಲಿಟರಿ ಆಳ್ವಿಕೆಯಲ್ಲಿ ಇತ್ತು ಎಂಬುದನ್ನು ಗಮನಿಸಿದ್ದಾರೋ ಇಲ್ಲವೋ! ಅವರು ರಾಜಕಾರಣಿಗಳನ್ನು ಜೈಲುಗಟ್ಟಿದರು ಅಥವಾ ವಿದೇಶಗಳಿಗೆ ಗಡೀಪಾರು ಮಾಡಿದರು. ವಾಸ್ತವವಾಗಿ ಭಾರತ ಅಥವಾ ಇನ್ನಾವುದೇ ಪ್ರಜಾಪ್ರಭುತ್ವದಲ್ಲಿ ಇರುವಂತೆ ಸೇನೆ ತನ್ನ ಬ್ಯಾರಕುಗಳಿಗೆ, ದಂಡು ಪಾಳೆಯಗಳಿಗೆ ಸೀಮಿತವಾಗಿರಬೇಕು. ಆದರೆ ಪಾಕಿಸ್ತಾನ ದಲ್ಲಿ ಹಾಗಿರಲಿಲ್ಲ. ಈ ಮಿಲಿಟರಿ ಸರ್ವಾಧಿಕಾರಶಾಹಿಯ ಅಡಿಯಲ್ಲಿಯೇ ಈಗ ನಾವು ಒಂದೊಂದಾಗಿ ಕಾಣುತ್ತಿರುವ ದುಷ್ಟ ಸಂಗತಿಗಳು ಅಲ್ಲಿ ಸೃಷ್ಟಿಯಾದದ್ದು. ಈಗಷ್ಟೇ ಪಾಕಿಸ್ತಾನ ಒಂದು ಪ್ರಜಾಸತ್ತಾತ್ಮಕ ಆಳ್ವಿಕೆಯನ್ನು ಮತ್ತೆ ತರುವಲ್ಲಿ ಯಶಸ್ವಿಯಾಗಿದೆ. ರಾಜಕೀಯ ವ್ಯವಸ್ಥೆಯಿಂದ ಸ್ವತಂತ್ರವಾಗಿ ತಮಗೆ ಇಷ್ಟ ಬಂದಂತೆ ವರ್ತಿಸುವ ಐಎಸ್ಐ ಮತ್ತಿತರ ಸಂಘಟನೆಗಳು ಇನ್ನೂ ಈ ಪ್ರಜಾಪ್ರಭುತ್ವ ಆಡಳಿತದ ಹಿಡಿತದೊಳಗೆ ಬಂದಿಲ್ಲ.

ಪಾಕಿಸ್ತಾನದಲ್ಲಿ ಇರುವ ಭಯೋತ್ಪಾದಕ ಸಂಘಟನೆಗಳಿಗೆ ಸರಿಸಾಟಿಯಾದಂತಹ ರಾಜಕೀಯೇತರ, ಸ್ವತಂತ್ರ ಸಂಸ್ಥೆಗಳನ್ನು ನಿರ್ಮಿಸಬೇಕು ಎಂಬಿತ್ಯಾದಿ ಪ್ರಚಾರಗಳು ನಮ್ಮ ದೇಶದಲ್ಲಿ ಈಗ ನಡೆಯುತ್ತಿವೆ. ಈ ಎಲ್ಲಾ ವಾದಗಳ ಮರ್ಮವೆಂದರೆ ಜನಗಳ ಯಾವುದೇ ಆಡಳಿತಕ್ಕೆ ಉತ್ತರದಾಯಿಯಲ್ಲದ ಇಂತಹ ಸಂಸ್ಥೆಗಳನ್ನು ನಮ್ಮ ದೇಶದಲ್ಲೂ ನಿರ್ಮಿಸಬೇಕು ಎಂಬುದು. ಇಂತಹ ಎಲ್ಲಾ ಪ್ರಚಾರಗಳ ಮೂಲಗಳೆಂದರೆ ಸ್ವತಂತ್ರ ದೇಶಗಳಲ್ಲಿ ಪ್ರಜಾಪ್ರಭುತ್ವ ಅರಳಬಾರದು ಎಂದು ಬಯಸುವ ಕೆಲವು ಲಾಬ್ಬಿಗಳು. ಸಂಸತ್ತಿನ ಮಾತೃಸ್ಥಾನ ಪಡೆದಿರುವ ಇಂಗ್ಲೆಂಡ್ ವಸಾಹತು ಭಾರತದಲ್ಲಿ ಪ್ರಜಾಪ್ರಭುತ್ವವನ್ನು ಇಷ್ಟಪಡಲಿಲ್ಲ. ತನ್ನದೇ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯನ್ನು ಹೊಂದಿರುವ ಅಮೆರಿಕಾ ಸಂಯುಕ್ತ ಸಂಸ್ಥಾನ ಹಲವು ಸರ್ವಾಧಿಕಾರಶಾಹಿ ಆಡಳಿತಗಳಿಗೆ ಊರುಗೋಲಾಗಿದೆ, ಅವುಗಳ ರಕ್ಷಕನಾಗಿದೆ. ಆಂತರಿಕ ಪ್ರಜಾಪ್ರಭುತ್ವದ ಮೇಲೆ ನಿಂತಿದ್ದ ಗ್ರೀಕ್ ಮತ್ತು ರೋಮನ್ ನಾಗರಿಕತೆಗಳಲ್ಲಿ ಒಂದು ಗುಲಾಮರನ್ನು ತನ್ನೊಡೆತನದಲ್ಲಿ ಇಟ್ಟುಕೊಂಡ ಸಮಾಜವಿತ್ತು. ಈ ಪ್ರತಿಯೊಂದು ಸಂದರ್ಭದಲ್ಲಿ ಜನಗಳಿಗೆ ಪ್ರಜಾಪ್ರಭುತ್ವ ಇರಬಾರದು ಎಂಬುದು ಆಳುವ ವರ್ಗಗಳ ಇಚ್ಛೆಯಾಗಿತ್ತು. ಜನಗಳಿಗೆ ಜವಾಬ್ದಾರಿಯಾಗದಿರುವ ಸರ್ವಾಧಿಕಾರೀ ಆಳ್ವಿಕೆಗಳು ತಮ್ಮ ಮುನ್ನಡೆಗೆ ಅನುಕೂಲಕರ ಎಂದವರು ಭಾವಿಸಿದರು.

ಪ್ರಜಾಪ್ರಭುತ್ವ ವಿಫಲವಾದಾಗ..

ಒಂದು ಜೀವಂತ ಉದಾಹರಣೆಯನ್ನು ನೋಡೋಣ. ಇಲ್ಲಿ ಕರ್ನಾಟಕದಲ್ಲಿ ಜನಗಳ ಮತ್ತು ಅದರಲ್ಲೂ ಅಲ್ಪಸಂಖ್ಯಾತರ ಹಕ್ಕುಗಳ ರಕ್ಷಣೆ ಪ್ರಭುತ್ವ



ಬಾಬಾಬುಡನ್ ಜಾಥಾ ಉದ್ಘಾಟನಾ ಸಮಾರಂಭ

ಯಂತ್ರದಿಂದ ಸಾಧ್ಯವಿಲ್ಲ ಎಂಬ ತೀರ್ಮಾನಕ್ಕೆ ಅಲ್ಪಸಂಖ್ಯಾತರು ಮತ್ತು ಸದುದ್ದೇಶಪೂರಿತ ಜನಗಳೂ ಬಂದಿದ್ದಾರೆ. ಅವರಿಗೆ ಆಳುವ ಪಕ್ಷ ಪ್ರಜಾಪ್ರಭುತ್ವ ಆಚರಣೆಗಳ ಕತ್ತು ಹಿಸುಕಲು ಮತ್ತು ಜನಗಳ ಸಮಸ್ಯೆಗಳಿಗೆ ಸಂವಿಧಾನಿಕ ಪರಿಹಾರಗಳು ಅಸಾಧ್ಯವೆನ್ನುವಂತೆ ಮಾಡಲು ತಮಗೆ ಬದ್ಧವಾದ ಅಧಿಕಾರಿಗಳನ್ನು ಬಳಸಿಕೊಳ್ಳುತ್ತಿದ್ದಾರೆ ಎಂದೂ ಗೊತ್ತಿದೆ. ಇದು ಪ್ರಭುತ್ವದ ವಿಫಲತೆಯ ಸಂಕೇತಗಳು, ಕನಿಷ್ಟ ಪ್ರಜಾಪ್ರಭುತ್ವ ಆವರಣದ ವಿಫಲತೆ ಅದು. ಒಂದು ಪ್ರಜಾಪ್ರಭುತ್ವ ವಿಫಲವಾದಾಗ ಸರ್ವಾಧಿಕಾರಶಾಹಿ ಆಳ್ವಿಕೆ ಸ್ಥಾಪನೆಗೊಳ್ಳುತ್ತದೆ ಅಥವಾ ಪ್ರಾಬಲ್ಯ ಗಳಿಸಿಕೊಳ್ಳುತ್ತದೆ. ಒಂದು ಪ್ರಜಾಪ್ರಭುತ್ವ ವ್ಯವಸ್ಥೆ ವಿಫಲವಾದಾಗ ಉಳಿಯುವ ಏಕೈಕ ಪರ್ಯಾಯವೆಂದರೆ ಹಿಂಸೆ. ಅದರ ಪರಿಣಾಮವಾಗಿ ಜನಗಳ ಹೆಸರಿನಲ್ಲಿ ದಂಗೆಗಳು ಅವುಗಳನ್ನು ಅಡಗಿಸಲು ಪ್ರಭುತ್ವ ಹಿಂಸಾಚಾರ ಅಥವಾ ಪ್ರತಿ-ದಂಗೆಗಳು ನಡೆಯುತ್ತವೆ. ಇವೆಲ್ಲಾ ಜನಗಳನ್ನು ಒಡೆಯುತ್ತವೆ, ಜನಗಳ ಗುರಿಗಳನ್ನು ವಿಫಲಗೊಳಿಸುತ್ತವೆ.

ಈ ಹಿಂದೆ ಜರ್ಮನಿ, ಇಟಲಿ ಮತ್ತು ಜಪಾನಿನಲ್ಲಿ ಫ್ಯಾಸಿಸ್ಟ್ ಆಳ್ವಿಕೆಗಳು ಎದ್ದು ಬಂದದ್ದು ರಾಜಕಾರಣಿಗಳು ವಿಫಲರಾಗಿದ್ದಾರೆ ಎಂಬ ಇಂತಹ ಸತತ ಪ್ರಚಾರಗಳಿಂದಾಗಿಯೇ. ಇಲ್ಲಿಯೂ ಈ ಹಿಂದೆ ತುರ್ತು ಪರಿಸ್ಥಿತಿಯ ವಿರುದ್ಧ ಹೋರಾಡಿದ ಶಕ್ತಿಗಳೇ ರಾಜಕಾರಣಿಗಳು/ಸಂಸತ್ತು ವಿಫಲವಾಗಿದೆ ಎಂಬ ಹೆಸರಿನಲ್ಲಿ ಒಂದು ಸರ್ವಾಧಿಕಾರಶಾಹೀ ಆಳ್ವಿಕೆಯನ್ನು ಬಯಸುವ ಪರಿಸ್ಥಿತಿಯನ್ನು

ಪುಟ 13 ಕ್ಕೆ

ರಾಜ್ಯವ್ಯಾಪಿ ಜಾಥಾಗಳು ಸೌಹಾರ್ದದ ಕಲರವ

ಸಿಪಿಐ(ಎಂ)ನ ಕರ್ನಾಟಕ ರಾಜ್ಯ ಸಮಿತಿ ಕೋಮುವಾದ ಮತ್ತು ಭಯೋತ್ಪಾದನೆಯ ವಿರುದ್ಧ ಒಂದು ಪ್ರಚಾರಾಂದೋಲನ ಆರಂಭಿಸಿದೆ. ಈ ನಿಟ್ಟಿನಲ್ಲಿ ನಾಲ್ಕು ಜೀಪ್ ಜಾಥಾಗಳು ರಾಜ್ಯದ ಉದ್ದಗಲಗಳಲ್ಲೂ ಸಂಚರಿಸುತ್ತಿವೆ. ಡಿಸೆಂಬರ್ 9ರಂದು ಬಸವಕಲ್ಯಾಣದಿಂದ ಹೊರಟ ಜಾಥಾ ಈಗಾಗಲೇ ಬೀದರ ಮತ್ತು ಗುಲ್ಬರ್ಗಾದಲ್ಲಿ ಸಂಚರಿಸಿ, ರಾಯಚೂರು ತಲುಪುತ್ತಿದೆ. ಅದು ಮುಂದೆ ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರಿನಲ್ಲಿ ಸಂಚರಿಸಲಿದೆ. ಬಾಬಾ ಬುಡನ್ ಗಿರಿಯಿಂದ ಡಿಸೆಂಬರ್ 8ರಂದು ಹೊರಟ ಜಾಥಾ ಶಿವಮೊಗ್ಗ ಭದ್ರಾವತಿಯನ್ನು ಹಾದು ಹೋಗುತ್ತಿದೆ. ಮುಂದೆ ಅದು ಹಾಸನ, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರದ ಮೂಲಕ ಬೆಂಗಳೂರು ತಲುಪುತ್ತದೆ. ಮೂರನೇ ಜಾಥಾ 13ರಂದು ಕಾರವಾರದಿಂದ ಹೊರಟು ಕರಾವಳಿ ಪ್ರದೇಶವನ್ನು ಹಾದು ಉಡುಪಿ, ದಕ್ಷಿಣ ಕನ್ನಡ, ಕೊಡಗು, ಮೈಸೂರು, ಮಂಡ್ಯ ಜಿಲ್ಲೆಗಳಲ್ಲಿ ಸಂಚರಿಸಿ ಬೆಂಗಳೂರು ತಲುಪುತ್ತದೆ. ನಾಲ್ಕನೇ ಜಾಥಾ 15ರಂದು ಕೂಡಲ ಸಂಗಮದಿಂದ ಆರಂಭಗೊಂಡು ಬಾಗಲಕೋಟೆ, ಬೆಳಗಾವಿ, ಧಾರವಾಡ ಮತ್ತು ಗದಗ ಜಿಲ್ಲೆಗಳಲ್ಲಿ ಸಂಚರಿಸಿ ಡಿಸೆಂಬರ್ 21ರಂದು ಹಾವೇರಿಯಲ್ಲಿ ಸಮಾರೋಪಗೊಳ್ಳುತ್ತದೆ. ಡಿಸೆಂಬರ್ 22ರಂದು ಬೆಂಗಳೂರು ನಗರದಲ್ಲಿ ಒಟ್ಟು ಸೇರುವ ಮೂರು ಜಾಥಾಗಳನ್ನು 23ರಂದು ಒಂದು ರ್‍ಯಾಲಿ ಎದುರುಗೊಳ್ಳಲಿದೆ. ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಪ್ರಕಾಶ ಕಾರಟ್ ಅದನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಈ ಜಾಥಾಗಳಿಗೆ ಪೂರ್ವಭಾವಿಯಾಗಿ ನವಂಬರ್ ತಿಂಗಳಲ್ಲಿ ಒಂದು ತಿಂಗಳು ಸೌಹಾರ್ದ ಕರ್ನಾಟಕ ಪ್ರಚಾರಾಂದೋಲನ ನಡೆದಿದೆ. ಇದರ ಉದ್ಘಾಟನೆ ನವಂಬರ್ 8ರಂದು ಮೈಸೂರಿನಲ್ಲಿ ಒಂದು ಸಮಾರಂಭದಲ್ಲಿ ಕಾಂ. ಪ್ರಕಾಶ ಕಾರಟ್‌ರವರಿಂದ ನಡೆಯಿತು. ನವಂಬರ್ 10ರಂದು ಮಂಗಳೂರಿನಲ್ಲಿ ಸೀತಾರಾಂ ಯೆಚೂರಿಯವರು ಮಾತನಾಡಿದ ಸಭೆಯಲ್ಲಿ ದೊಡ್ಡ ಸಂಖ್ಯೆಯಲ್ಲಿ ಜನರು ಭಾಗವಹಿಸಿದ್ದರು. ಅದೇ ದಿನ ಗಂಗಾವತಿಯಲ್ಲಿ ಒಂದು ದೊಡ್ಡ ರ್‍ಯಾಲಿಯನ್ನು ಉದ್ದೇಶಿಸಿ ಸಂಸತ್ ಸದಸ್ಯ ಬಸುದೇವ ಆಚಾರ್ಯ ಮಾತನಾಡಿದರು. ಈ ನವಂಬರ್ ತಿಂಗಳಲ್ಲಿ ಸುಮಾರು ಐವತ್ತು ಸಭೆಗಳು/ ಸಮಾವೇಶಗಳು ನಡೆದವು.



ಕೇಂದ್ರ ರಾಜ್ಯ ಸರ್ಕಾರಗಳ ಧೋರಣೆಗಳ ಪರಿಣಾಮವಾಗಿ ಈ ವರ್ಷವೂ ಕಬ್ಬು ಬೆಳೆಗಾರರಿಗೆ ನೆಮ್ಮದಿ ಇಲ್ಲ. ಹೆಚ್ಚು ಬೆಳೆದರೂ ಸಮಸ್ಯೆ, ಬೆಳೆ ಕಡಿಮೆ ಮಾಡಿದರೂ ಸಮಸ್ಯೆಗೆ ಪರಿಹಾರವಿಲ್ಲ. ರೈತರ ಕಷ್ಟಗಳಿಗೆ ಕೊನೆಯಿಲ್ಲ.

ಸಿಹಿ ಕಬ್ಬು ಬೆಳೆಗಾರರ ಪಾಲಿಗೆ ಕಹಿ

'ಮೈಯನೆ ಹಿಂಡಿ ನೊಂದರೂ ಕಬ್ಬು ಸಿಹಿಯ ಕೊಡುವುದು' ಅಂತ ಒಂದು ಹಾಡಿದೆ. ಕಬ್ಬು ಸಿಹಿಯಾಗಿರುತ್ತದೆ. ಆದರೆ ಯಾವಾಗಲೂ ಅಲ್ಲ. ಎಲ್ಲರಿಗೂ ಅಲ್ಲ. ಕಬ್ಬಿನ ಸಿಹಿ ರುಚಿ ಕಬ್ಬನ್ನು ಬೆಳೆಯುವ ರೈತರು, ಕಬ್ಬು ಅರೆದು ಸಕ್ಕರೆ ತಯಾರಿಸುವ ಸಕ್ಕರೆ ಕಾರ್ಖಾನೆಯ ಕಾರ್ಮಿಕರು ಇವರುಗಳಿಗೆ ಕಬ್ಬು ಬಹಳ ಸಾರಿ ಸಿಹಿಯಾಗಿರುವುದಿಲ್ಲ.

ಕರ್ನಾಟಕ ರಾಜ್ಯದಲ್ಲಿ ಸಕ್ಕರೆ ಉದ್ದಿಮೆಯ ಪರಿಸ್ಥಿತಿ ಕಳೆದ ವರ್ಷ ಇದ್ದಂತೆ ಇಲ್ಲ. ಹಲವು ವ್ಯತ್ಯಾಸಗಳಿವೆ. ಆದರೆ ಸಮಸ್ಯೆಗಳ ಸ್ವರೂಪದಲ್ಲಿ ಬದಲಾವಣೆಯಾಗಿದೆಯೇ ಹೊರತು ಸಮಸ್ಯೆಗಳ ನಿವಾರಣೆಯಾಗಲಿಲ್ಲ.

ಕಳೆದ ವರ್ಷ ಕರ್ನಾಟಕ ರಾಜ್ಯದಲ್ಲಿ 270 ಲಕ್ಷ ಟನ್ ಕಬ್ಬನ್ನು ರಾಜ್ಯ ಕಾರ್ಖಾನೆಗಳಲ್ಲಿ ಅರೆಯಲಾಯಿತು. ಈ ಕಳೆದ ವರ್ಷಗಳಲ್ಲಿ ಕಾರ್ಖಾನೆಗಳಲ್ಲಿ ರೈತರ ಕಬ್ಬನ್ನು ಅರೆಯದೇ, ಅರೆಯಲು ಆಗದೇ ದೊಡ್ಡ ಬಿಕ್ಕಟ್ಟು ಸೃಷ್ಟಿಯಾಗಿತ್ತು. ಬೆಳೆದು ನಿಂತ ಕಬ್ಬು ಗದ್ದೆಯಲ್ಲೇ ಒಣಗಿ ರೈತರು ಬಾರಿ ಲುಕ್ಸಾನನ್ನು ಅನುಭವಿಸಿದ್ದರು.

ಈ ವರ್ಷ ಪರಿಸ್ಥಿತಿ ಭಿನ್ನವಾಗಿದೆ. ರೈತರು ಬೆಳೆದ ಕಬ್ಬನ್ನು ಕಾರ್ಖಾನೆಗಳು ಅರೆಯಲಿಲ್ಲ ಎನ್ನುವ ಪರಿಸ್ಥಿತಿ ಬಹುಶ: ಬರಲಾರದು. ಬದಲಿಗೆ ಕಬ್ಬಿಗೆ ಬೇಡಿಕೆ ಇದೆ. ಕಾರ್ಖಾನೆಗಳ ಸಾಮರ್ಥ್ಯಕ್ಕೆ ಹೋಲಿಸಿದರೆ ಈ ವರ್ಷ ಶೇ.20 ರಷ್ಟು ಕಬ್ಬು ಕೊರತೆ ಬೀಳಬಹುದು ಎಂದು ಒಂದು ಅಂದಾಜಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಈ ವರ್ಷ ರೈತರು ಕಬ್ಬು ಬೆಳೆಯುತ್ತಿರುವ ಪ್ರದೇಶ ತೀವ್ರವಾಗಿ ಕಡಿಮೆಯಾಗಿದೆ. ರಾಜ್ಯದಲ್ಲಿ 4 ಕೋಟಿ ಟನ್ ಇದ್ದ ಕಬ್ಬಿನ ಉತ್ಪಾದನೆ ಈ ವರ್ಷ ಸುಮಾರು 3 ಕೋಟಿ ಟನ್ ಅಂದರೆ 300 ಲಕ್ಷ ಟನ್‌ಗೆ ಇಳಿಯಬಹುದು ಎಂದು ಅಂದಾಜಿಸಲಾಗಿದೆ. ಆದರೂ ಸಮಸ್ಯೆ ತಪ್ಪಲಿಲ್ಲ

ರಾಜ್ಯ ಸರ್ಕಾರದ ಅನಾಧಾರ

ಕಳೆದ ವರ್ಷ ಕಾರ್ಖಾನೆಗೆ ಕಬ್ಬು ಪೂರೈಸಿದ ರೈತರಿಗೆ ಬಾಕಿ ಹಣ ಪೂರ್ತಿಯಾಗಿ ಇನ್ನೂ ಪಾವತಿಯಾಗಿಲ್ಲ. ಸುಮಾರು 11,000 ಕೋಟಿಯಷ್ಟು ಇನ್ನೂ ರೈತರಿಗೆ ತಲುಪಬೇಕಿದೆ. ಈ ಬಾಕಿ ಹಣಕ್ಕಾಗಿ



ರೈತರು ಕಾದು ಕುಳಿತಿದ್ದಾರೆ. ಬಾಕಿ ಹಣ ಕೈಗೆ ಸಿಕ್ಕರೆ ಅವರ ಎದೆ ಮೇಲಿನ ಭಾರ ಎಷ್ಟೋ ಉಳಿದಂತಾಗುತ್ತದೆ.

ಕಳೆದ ವರ್ಷ ರೈತರು ಪೂರೈಸಿದ ಕಬ್ಬಿಗೆ ನ್ಯಾಯಯುತವಾದ ಬೆಲೆ ಸಿಗಲಿಲ್ಲ. ಹೀಗಾಗಿ ಕೊಡುವ ಬೆಲೆಯಲ್ಲಿ ಒಂದಷ್ಟು ಹೆಚ್ಚಳ ವಾಗಬೇಕೆಂದು ರೈತರು ಒತ್ತಾಯಿಸಿದಾಗ ಒಂದು ತೀರ್ಮಾನವಾಗಿತ್ತು. ರಾಜ್ಯದಲ್ಲಿ ರಾಷ್ಟ್ರಪತಿ ಆಡಳಿತ ಜಾರಿಯಲ್ಲಿದ್ದಾಗ ರಾಜ್ಯಪಾಲ ರಾಮೇಶ್ವರ ಠಾಕೂರರ ಸಮ್ಮುಖದಲ್ಲಿ ಈ ತೀರ್ಮಾನವಾಗಿತ್ತು. ಅದೇನೆಂದರೆ ಕಳೆದ ವರ್ಷ ರೈತರು ಪೂರೈಸಿರುವ ಪ್ರತಿ ಟನ್ ಕಬ್ಬಿಗೆ 160 ರೂಪಾಯಿಗಳನ್ನು ಹೆಚ್ಚುವರಿಯಾಗಿ ಕಾರ್ಖಾನೆಗಳು ಕೊಡುವುದು. ಈ ತೀರ್ಮಾನವನ್ನು ಜಾರಿ ಮಾಡುವ ಬಗೆಗೆ ನಂತರ ಯಡಿಯೂರಪ್ಪ ಸಹ ಭರವಸೆ ನೀಡಿದ್ದರು.

ಆದರೆ ಈ ತೀರ್ಮಾನ ಜಾರಿಗೆ ಬರುತ್ತಿಲ್ಲ. ಕೆಲವು ಕಾರ್ಖಾನೆಗಳು ಟನ್‌ಗೆ ನೂರು ರೂಪಾಯಿ ಕೊಟ್ಟಿವೆಯಂತೆ. ಹಲವು ಕಾರ್ಖಾನೆಗಳು 100 ರೂ.ವನ್ನು ಕೊಡಲಿಲ್ಲ. 160 ರೂ.ವನ್ನು ಕೊಡಲಿಲ್ಲ. ರೈತರು ಕಾಯುವುದು ತಪ್ಪಲಿಲ್ಲ. ರಾಜ್ಯ ಸರ್ಕಾರ ಈ ಕುರಿತು ಸರಿಯಾದ ಮುತುವರ್ಜಿ ವಹಿಸುತ್ತಿಲ್ಲ.

ಬೆಲೆ ತಾರತಮ್ಯ

ಈ ವರ್ಷ ರೈತರಿಗೆ ನೀಡುವ ಬೆಲೆಯಲ್ಲಿ ಒಂದು ಸಾಮಾನ್ಯ ಬೆಲೆ ನಿಗದಿ ಮಾಡಬೇಕೆಂಬ ಪ್ರಯತ್ನ ನಡೆಯಿತು. ಆದರೆ ಅದು ಯಶಸ್ವಿಯಾಗಲಿಲ್ಲ. ಸೆಪ್ಟೆಂಬರ್ 15, 2008 ರಂದು ನಡೆದ ದಕ್ಷಿಣ ಭಾರತ ಸಕ್ಕರೆ ಕಾರ್ಖಾನೆಗಳ ಸಂಘ (ಎಸ್‌ಐಎಸ್‌ಎಂಎ)ದ ಸಭೆಯಲ್ಲಿ ಈ ಕುರಿತು ಒಪ್ಪಂದಕ್ಕೆ ಬರಲಾಗಲಿಲ್ಲ. ಕರ್ನಾಟಕದಲ್ಲೇ ರೈತರಿಗೆ ಈಗ ಎರಡು ರೀತಿಯ ಬೆಲೆ ನಿಗದಿಯಾಗಿದೆ. ಉತ್ತರ ಕರ್ನಾಟಕದಲ್ಲಿ ಟನ್ ಕಬ್ಬಿಗೆ 1250 ರೂ. ನಿಗದಿಯಾಗಿದ್ದರೆ, ದಕ್ಷಿಣ ಕರ್ನಾಟಕದಲ್ಲಿ 1100 ರೂ. ನಿಗದಿಯಾಗಿದೆ. ಈ ಕುರಿತು ರಾಜ್ಯ ಸಲಹಾ ಮಂಡಳಿಯು ತಾರತಮ್ಯ ನಿವಾರಣೆ ಮಾಡಲು ಒತ್ತಡ ತರಬೇಕಿದೆ. ಇತ್ತೀಚೆಗೆ ರಾಜ್ಯ ಸರ್ಕಾರವು ಉತ್ತರ ಕರ್ನಾಟಕದಲ್ಲಿ ಟನ್‌ಗೆ 1100 ರಂದೂ ನಿಗದಿ ಮಾಡಿದೆ.

ಕೇಂದ್ರ ಸರ್ಕಾರದ ದ್ರೋಹ

ವಾಸ್ತವವಾಗಿ ಕಬ್ಬಿಗೆ ಬೆಂಬಲ ಬೆಲೆ ನಿಗದಿ ಮಾಡುವ ಶಾಸನಬದ್ಧ ಅಧಿಕಾರವಿರುವುದು ಕೇಂದ್ರ ಸರ್ಕಾರಕ್ಕೆ. ಆದರೆ ಈ ಕೇಂದ್ರ ಸರ್ಕಾರಕ್ಕೆ ಕಬ್ಬಿನ ರೈತರಿಗೆ ಕಿಂಚಿತ್ತಾದರೂ ನ್ಯಾಯ ನೀಡಬೇಕೆಂಬ ಕಾಳಜಿಯೇ ಇಲ್ಲ. ಅದು ರೈತರಿಗೆ ದೊಡ್ಡ ದ್ರೋಹವನ್ನೇ ಎಸಗಿದೆ.

ಕೇಂದ್ರ ಮಟ್ಟದಲ್ಲಿ ಕೃಷಿ ಉತ್ಪನ್ನಗಳ ಬೆಲೆ ನಿಗದಿಗೆ ಸಂಬಂಧಿಸಿದಂತೆ ಸಲಹೆಯನ್ನು ನೀಡುವ ಸೆಂಟ್ರಲ್ ಅಡ್ವೈಸರಿ ಕಮಿಟಿ ಫಾರ್ ಪ್ರೈಸ್ ಫಿಕ್ಸಿಂಗ್ - (ಸಿಎಸಿಪಿ) ಎನ್ನುವ ಈ ಸಮಿತಿಯು ಪ್ರತಿ ಕಬ್ಬಿಗೆ ರೈತರಿಗೆ 1550-00 ಕೊಡಬೇಕೆಂದು ನಿಗದಿ ಮಾಡಿದೆ. ಇದೇನು ಬೇಕಾಬಿಟ್ಟಿ ಬೆಲೆ ತೀರ್ಮಾನ ಮಾಡುವ ಸಮಿತಿಯಲ್ಲ. ವೈಜ್ಞಾನಿಕವಾಗಿ ಬೆಳೆಗೆ ಬೇಕಾಗುವ ಕೃಷಿ ಲಾಗವಾಡುಗಳು, ಸಾಮಗ್ರಿಗಳು, ಕೃಷಿ ಕಾರ್ಮಿಕರ ಕೂಲಿ, ಇತ್ಯಾದಿ ಎಲ್ಲವನ್ನೂ ಪರಿಶೀಲಿಸಿ ಈ ಸಮಿತಿ ಬೆಲೆಗೆ ಶಿಫಾರಸ್ಸು ನೀಡುತ್ತದೆ.

ಸಾಮಾನ್ಯವಾಗಿ ಕೇಂದ್ರ ಸರ್ಕಾರ ಈ ಸಮಿತಿಯು ನೀಡುವ ಶಿಫಾರಸ್ಸು ಒಪ್ಪಿಕೊಳ್ಳಬೇಕು ಮತ್ತು ಒಪ್ಪಿಕೊಳ್ಳುತ್ತದೆ. ಆದರೆ ಈ ಕಬ್ಬಿನ ವಿಚಾರದಲ್ಲಿ ಮಾತ್ರ ಕೇಂದ್ರ ಸರ್ಕಾರ ಸಾಮಾನ್ಯ ಸಂಪ್ರದಾಯವನ್ನು ಮುರಿದಿದೆ. ಸಮಿತಿಯು ಶಿಫಾರಸ್ಸು 1550-00 ರೂ ಇದ್ದರೂ ಟನ್ ಕಬ್ಬಿಗೆ ಕೇವಲ 811.80 ಮಾತ್ರ ಬೆಂಬಲ ಬೆಲೆ ನಿಗದಿ ಮಾಡಿದೆ. ಎಷ್ಟು ವ್ಯತ್ಯಾಸ, ಅಜಗಜಾಂತರ!!.

ಸಲಹಾ ಸಮಿತಿಯು ಬೆಲೆಗೆ ಶಿಫಾರಸ್ಸ ಮಾಡುವಾಗ ಆ ಪ್ರಮುಖ ಉತ್ಪನ್ನ ಅಲ್ಲದೆ ಅದರ ಉಪ ಉತ್ಪನ್ನಗಳ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಂಡು ಶಿಫಾರಸ್ಸು ಮಾಡುತ್ತದೆ ಮತ್ತು ಅದು ಸರಿಯಾದ ಕ್ರಮವಾಗಿದೆ. ಅಂದರೆ ಕಬ್ಬಿಗೆ ಬೆಲೆ ಶಿಫಾರಸ್ಸು ಮಾಡುವಾಗ ಬರೀ ಕಬ್ಬಿನ ಬೆಲೆ ಮಾತ್ರವಲ್ಲ, ಉಪ ಉತ್ಪನ್ನವಾದ ಕಾಕಂಬಿಯ ಬೆಲೆಯನ್ನು ಪರಿಗಣಿಸಿ ಬೆಲೆ ನಿಗದಿ ಮಾಡಿದೆ. ಏಕೆಂದರೆ ಕಾಕಂಬಿಯನ್ನು ಮಾರಿ ಕಾರ್ಖಾನೆಗಳು ಲಾಭ ಗಳಿಸುತ್ತವಲ್ಲ ಅದಕ್ಕೆ.

ಆದರೆ ಕಬ್ಬಿನ ವಿಚಾರದಲ್ಲಿ ಉಪ ಉತ್ಪನ್ನಗಳ ಬೆಲೆ ಆಧರಿಸಿ ಬೆಂಬಲ ಬೆಲೆ ನಿಗದಿ ಮಾಡಲು ಕೇಂದ್ರ ಸರ್ಕಾರ ಒಪ್ಪಿಲ್ಲ. ಕಬ್ಬಿನ ವಿಚಾರದಲ್ಲಿ ಈ ವಿಧಾನ ಅನುಸರಿಸುವುದು ಅಗತ್ಯವಿಲ್ಲವೆಂದು 1966ರ ಸಕ್ಕರೆ ನಿಯಂತ್ರಣ ಕಾಯ್ದೆಯಲ್ಲಿ ಹೇಳಲಾಗಿದೆಯಂತೆ. ಕಾಯ್ದೆಯನ್ನು ತನ್ನ ಮೂಗಿನ ನೇರಕ್ಕೆ ಇದ್ದರೆ ಸರ್ಕಾರಗಳು ಅದನ್ನು ತಕ್ಷಣ ಜಾರಿ ಮಾಡಿಬಿಡುತ್ತವೆ. ತನ್ನ ಹಿತಾಸಕ್ತಿಗೆ ವಿರುದ್ಧವಾದ ಎಷ್ಟು ಕಾಯ್ದೆಗಳು ಬರೀ ಪುಸ್ತಕದ ಬದನೆಕಾಯಿಯಾಗಿ ದೂಳು ತಿನ್ನುತ್ತಾ ಕೂತಿಲ್ಲ!!

ರೈತನ ಮೈ ಮುತ್ತುವ ಜಿಗಣೆಗಳು

ರೈತನ ರಕ್ತ ಹೀರಿ ಬದುಕುವ ಪರಾವಲಂಬಿ ಜಿಗಣೆಗಳು ನಮ್ಮ ವ್ಯವಸ್ಥೆಯಲ್ಲಿ ವಿಪರೀತವಾಗಿವೆ. ಹೀಗಾಗಿ ರೈತನಿಗೆ ಯಾವ ದಿಕ್ಕಿನಿಂದ ನೋಡಿದರೂ ಮೋಸವೇ! ಕೇಂದ್ರ ಸರ್ಕಾರ ಬೆಂಬಲ ಬೆಲೆ ನಿಗದಿಯಲ್ಲೇ ಮೋಸ ಮಾಡಿದರೆ, ರಾಜ್ಯಮಟ್ಟದಲ್ಲಿ ಆಗುತ್ತಿರುವ ಅನ್ಯಾಯ ನೋಡಿ.

ಸಾಮಾನ್ಯವಾಗಿ ಸರಾಸರಿ ಶೇ.9 ಭಾಗ ಸಕ್ಕರೆಯ ಅಂಶವಿರುವ ಕಬ್ಬಿಗೆ ಬೆಲೆ ನಿಗದಿಯಾಗಿರುತ್ತದೆ. ಕೆಲವೊಮ್ಮೆ ಕಬ್ಬಿನ ಗುಣಮಟ್ಟ ಉತ್ಕೃಷ್ಟವಾಗಿದ್ದ ಶೇ.10, ಅಥವಾ 11 ರಷ್ಟು ಸಕ್ಕರೆ ದೊರೆಯುವುದೂ ಇದೆ. ಅಂತಹ ಸಂದರ್ಭದಲ್ಲಿ ಗುಣಮಟ್ಟದ ಕಬ್ಬು ಬೆಳೆಯಲು ಶ್ರಮಪಟ್ಟ ರೈತನಿಗೆ ಅದರ ಲಾಭ ಸಿಗಬೇಕಲ್ಲವೇ? ಇಲ್ಲ ಎಲ್ಲದಕ್ಕೂ ಒಂದೇ ಬೆಲೆ.

ಬಡ್ಡಿ ಕೊಡುವುದಿಲ್ಲ

ರೈತ ಬೆಳೆ ಬೆಳೆಯಲು ಬಂಡವಾಳ ಬೇಕು. ರಾಷ್ಟ್ರೀಕೃತ, ಸಹಕಾರಿ ಬ್ಯಾಂಕುಗಳಲ್ಲಿ ಎಲ್ಲರಿಗೂ ಸಾಲ ಸಿಗುವುದಿಲ್ಲ. ಸಿಕ್ಕರೂ ಬಡ್ಡಿ ಕೊಡಬೇಕು. ಇನ್ನು ಖಾಸಗಿ ಸಾಲ ತಂದಿದ್ದರಂತೂ ಬಲು ದುಬಾರಿ ಬಡ್ಡಿಯನ್ನೇ ಕೊಡಬೇಕು. ಆದರೆ, ಕಾರ್ಖಾನೆಗಳು ರೈತರಿಗೆ ಕೊಡಬೇಕಾದ ಬಾಕಿ ಹಣವನ್ನು ಕೊಡದೆ ವರ್ಷಗಟ್ಟಲೆ ಬಾಕಿ ಉಳಿಸಿಕೊಳ್ಳುತ್ತವೆ. ಆಗೇನಾದರೂ ರೈತರ ಹಣಕ್ಕೆ ಬಡ್ಡಿ ಕೊಡಬೇಕಲ್ಲವೇ? ಉಹುಂ ಇಲ್ಲ. ಕೊಡುವುದಿಲ್ಲ. ಕೆಲವೊಮ್ಮೆ ರೈತರಿಗೆ ತೂಕದಲ್ಲಿ ಮೋಸ ಮಾಡುವುದೂ ಇದೆ.

ರೈತ ಹೆಚ್ಚು ಬೆಳೆದರೂ ಸಮಸ್ಯೆ. ಕಡಿಮೆ ಬೆಳೆದರೂ ಸಮಸ್ಯೆ. ಹೆಚ್ಚು ಬೆಳೆದಾ

ಪುಟ 10 ಕ್ಕೆ

ಕಬ್ಬಿಗೆ 'ಬೆಲೆ' ಇಲ್ಲ.

"ಉತ್ತರ ಪ್ರದೇಶ ಸರ್ಕಾರವು ಶೇ.9ರಷ್ಟು ಸಕ್ಕರೆ ದೊರೆಯುವ ಪ್ರತಿ ಟನ್ ಕಬ್ಬಿಗೆ ಕಟಾವು ಮತ್ತು ಸಾಗಣೆ ಖರ್ಚು ಒಟ್ಟು 1450 ರೂಪಾಯಿ ನಿಗದಿಪಡಿಸಿ ಆದೇಶ ಹೊರಡಿಸಿದೆ. ಸಕ್ಕರೆ ಇಳುವರಿ ಹೆಚ್ಚಾದರೆ ರೈತರಿಗೆ ಮತ್ತಷ್ಟು ಆದಾಯ ದೊರೆಯಲಿದೆ. ರಾಜ್ಯಸರ್ಕಾರ ಇದೇ ರೀತಿ ಆದೇಶ ಹೊರಡಿಸಬೇಕು.

ರಾಜ್ಯಪಾಲರ ಆಡಳಿತದ ಸಂದರ್ಭದಲ್ಲಿ ಕಾಕಂಬಿ ಟನ್‌ಗೆ ರೂ.800 ಇದ್ದರೆ ಈಗ ರೂ.4500 ಕ್ಕೆ ಏರಿದೆ. ಸಕ್ಕರೆ ಬೆಲೆ 1,100 ರಿಂದ 1900 ರೂ.ಗೆ ಏರಿದೆ. ಹೀಗಿರುವಾಗ ಕಬ್ಬಿಗೆ ವೈಜ್ಞಾನಿಕ ಬೆಲೆ ನಿಗದಿಪಡಿಸಲು ಸರ್ಕಾರಕ್ಕೆ ಇರುವ ತೊಂದರೆ ಏನು?

ಕಬ್ಬಿಗೆ ಕನಿಷ್ಟ ಬೆಂಬಲ ಬೆಲೆ ನಿಗದಿಪಡಿಸುವ ವಿಚಾರ ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ ಎಂದು ಮುಖ್ಯಮಂತ್ರಿ ಯಡಿಯೂರಪ್ಪ ಹೇಳಿದರು. ತಮ್ಮ ಭೇಟಿಗೆ ಸಮಯ ನೀಡಿದ್ದರೂ ಭೇಟಿಗೆ ಅವಕಾಶ ನೀಡಲಿಲ್ಲ."

ಕಬ್ಬು ಬೆಳೆದ ರೈತರ ಅಳಲು

ವಿಧಾನಸಭಾ ಚುನಾವಣೆಗಳು :

ಮತಾಂಧರ ಪ್ರಚಾರಕ್ಕೆ ಸೊಪ್ಪು ಹಾಕದ ಮತದಾರರು

ಈ ಫಲಿತಾಂಶಗಳಲ್ಲಿ ಒಂದು ಸ್ಪಷ್ಟ ರಾಜಕೀಯ ಸಂದೇಶ ಕಾಣ ಬರುತ್ತಿದೆ. ಜನಗಳಿಗೆ ತಮ್ಮ ಬದುಕಿನ ಪ್ರಶ್ನೆಗಳನ್ನು ಎದುರಿಸುವಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್‌ನ ನೀತಿಗಳಲ್ಲಿ ವ್ಯತ್ಯಾಸಗಳೇನೂ ಕಾಣುತ್ತಿಲ್ಲ. ಆದ್ದರಿಂದ ಉತ್ತಮವಾದ ಪರ್ಯಾಯ ನೀತಿಗಳ ಆಧಾರದಲ್ಲಿ ಒಂದು ರಾಜಕೀಯ ಪರ್ಯಾಯವನ್ನು ಬೆಸೆದರೆ, ಆಗ ಮತಗಟ್ಟೆಗಳಲ್ಲಿ ಜನಗಳ ಸ್ವೀಕೃತಿ ಗಳಿಸಲು ಸಾಧ್ಯವಿದೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ಫಲಿತಾಂಶಗಳು ಹೊರಬಂದಿವೆ. ಎಷ್ಟೋ ಜನ ಚುನಾವಣಾ ಪಂಡಿತರ ಲೆಕ್ಕಚಾರಗಳು ತಲೆಕೆಳಗಾಗಿವೆ. ಹಲವು ಮಾಧ್ಯಮಗಳ ವರದಿಗಳು ಅಂದಾಜುಗಳು ಬುಡ ಮೇಲಾಗಿವೆ.

ಜನತೆ ತಮ್ಮ ಪ್ರಭುದ್ಧ ತೀರ್ಪು ನೀಡಿದ್ದಾರೆ. ಇತ್ತೀಚಿನ ಮುಂಬೈ ಮೇಲಿನ ಭಯೋತ್ಪಾದಕ ದಾಳಿಗಳನ್ನು ತಮ್ಮ ಹಸಿ ಹಸಿ ಕೋಮುವಾದಿ ಪ್ರಚಾರಗಳಿಗೆ ಆಹಾರವನ್ನಾಗಿಸಿಕೊಂಡು ಭಾರತದ ನಿರಪರಾಧಿ ಮುಸ್ಲಿಂ ಸಮುದಾಯದ ಕುರಿತು ದ್ವೇಷ ಕಾರುವ ಮತ್ತು ಆ ಮೂಲಕ ಚುನಾವಣಾ ಲಾಭವನ್ನು ಗಿಟ್ಟಿಸುವ ಬಿಜೆಪಿಯ ಕೀಳು ತಂತ್ರವನ್ನು ಜನತೆ ಸ್ಪಷ್ಟವಾಗಿ ನಿರಾಕರಿಸಿದ್ದಾರೆ. ಅಷ್ಟು ಮಾತ್ರವಲ್ಲ, ಮಾಲೆಂಗಾವ್ ಬಾಂಬ್ ಸ್ಫೋಟದ ಪ್ರಕರಣ ಇರಲಿ ಸಂಜೋತಾ ರೈಲು ಸ್ಫೋಟ ಪ್ರಕರಣ ಇರಲಿ, ಆರೆಸ್ಸೆಸ್ ಪರಿವಾರ ವಹಿಸಿದ ಪಾತ್ರ ಏನೆಲ್ಲಾ ಇದೆ ಎಂಬುದನ್ನು ಜನತೆ ಗಮನಿಸುತ್ತಿದ್ದಾರೆ ಎಂಬುದನ್ನು ಚುನಾವಣಾ ಫಲಿತಾಂಶಗಳು ಸ್ಪಷ್ಟವಾಗಿ ತೋರಿಸಿಕೊಟ್ಟಿವೆ.

ಬಿಜೆಪಿ ಮತ್ತು ಸಂಘ ಪರಿವಾರದ ಜನರು ತಮಟೆ, ಓಲಗ, ತುತ್ತೂರಿ, ಸಿದ್ಧಮಾಡಿಕೊಂಡು ಫಲಿತಾಂಶಕ್ಕೆ ಕಾಯುತ್ತಿದ್ದರು. ಅವರ ನಿರೀಕ್ಷೆ ಅಗಾಧವಾಗಿತ್ತು. 5 ರಾಜ್ಯಗಳ ಚುನಾವಣೆಯಲ್ಲಿ ದೊಡ್ಡ ಗೆಲುವು ಸಾಧಿಸಿ ಮುಂದಿನ ಲೋಕಸಭಾ ಚುನಾವಣೆಯ ಫಲಿತಾಂಶದ ದಿಕ್ಸೂಚಿ ಇದು ಎಂದು ಬೊಬ್ಬೆ ಹಾಕಿ ಕುಣಿದಾಡುವುದು, ಅಲ್ಪ ಸಂಖ್ಯಾತರ ಓಟಿಗಾಗಿ ಕೇಂದ್ರ ಹಾಗೂ ರಾಜ್ಯಗಳ ಕಾಂಗ್ರೆಸ್



ಸರ್ಕಾರಗಳು ಭಯೋತ್ಪಾದನೆ ವಿರುದ್ಧ ಮೃದುವಾಗಿವೆ ಎಂದು ಪ್ರಚಾರ ಮಾಡುತ್ತಾ ಮುಸ್ಲಿಂ ಅಲ್ಪಸಂಖ್ಯಾತರೇ ಈ ದಾಳಿಯ ಹೊಣೆ ಎಂದು ಇನ್ನಷ್ಟು ಜೋರಾಗಿ ಕಿರುಚುವುದು ಅವರ ಉದ್ದೇಶವಾಗಿತ್ತು. ಅಲ್ಲಿಗೆ ಮುಂದಿನ ಲೋಕಸಭಾ ಚುನಾವಣೆಯ ರಂಗ ತಾಲೀಮನ್ನು ಬಿಜೆಪಿ ಮತ್ತು ಸಂಘ ಪರಿವಾರ ಶುರುವಿಟ್ಟುಕೊಂಡಂತಾಗುತ್ತಿತ್ತು. ಚುನಾವಣೆಯಲ್ಲಿ ಬಿಜೆಪಿ ಅದನ್ನೂ ವ್ಯಾಪಕವಾಗಿ ಮಾಡಿತು. ತನ್ನ ಸಂಕುಚಿತ ಧೋರಣೆಗೆ ತಕ್ಕದಾದ ದೊಡ್ಡ ದೊಡ್ಡ ಜಾಹಿರಾತುಗಳನ್ನು ನೀಡಿತು. ವಿಷ ಪ್ರಚಾರವನ್ನು ನಡೆಸಿತು.

ಆದರೆ ಈ ನಡುವೆಯೂ ಜನ ತಮ್ಮ ಪ್ರಬುದ್ಧತೆ ಮೆರೆದಿದ್ದಾರೆ. ಅವರು ಸಂಘ ಪರಿವಾರದ ತಂತ್ರಗಳಿಗೆ ಬಲಿ ಬೀಳಲಿಲ್ಲ. ಗೌರವಾನ್ವಿತವಾದ ಮುಸ್ಲಿಂ ಸಂಘಟನೆ ದೇವ್‌ಬಂದ್ ಭಯೋತ್ಪಾದನೆಗೂ ಇಸ್ಲಾಂಗೂ ಯಾವ ಸಂಬಂಧವೂ ಇಲ್ಲ. ಭಯೋತ್ಪಾದನೆಯು ಇಸ್ಲಾಂ ವಿರೋಧಿ ಎಂಬ ಫತ್ವಾ ಹೊರಡಿಸಿರುವುದು. ಜಮಾತೆ-ಉಲೇಮಾ ಸಂಘಟನೆಯು ಬೃಹತ್ ಮುಸ್ಲಿಂ ಸಮಾವೇಶ ನಡೆಸಿ ಭಯೋತ್ಪಾದನೆಯನ್ನು ಖಂಡಿಸಿ, ಭಯೋತ್ಪಾದನೆ ಇಸ್ಲಾಂ ವಿರೋಧಿ ಎಂದು ಘೋಷಿಸಿದ್ದು, ಮುಂಬೈ ಮೇಲಿನ ದಾಳಿ ನಡೆದ ನಂತರ ದೆಹಲಿ, ಭುವನೇಶ್ವರ, ಕರ್ನಾಟಕದ ವಿವಿಧ ಭಾಗಗಳಲ್ಲಿಯೂ ದೇಶಾದ್ಯಂತ ವಿವಿಧ ಭಾಗಗಳಲ್ಲಿ ಮುಸ್ಲಿಂ ಧಾರ್ಮಿಕ ಮುಖಂಡರು, ಸಾಮಾನ್ಯ ಜನರು ದೊಡ್ಡ ರೀತಿಯಲ್ಲಿ ಬೀದಿಗಿಳಿದು ಪ್ರತಿಭಟನೆ ನಡೆಸಿರುವುದು, ಈ ಎಲ್ಲವೂ ನಡೆಯುತ್ತಿದ್ದಾಗಲೂ ಬಿಜೆಪಿ ತನ್ನ ವಿಷ ಪ್ರಚಾರವನ್ನು ಕೈ ಬಿಟ್ಟಿರಲಿಲ್ಲ. ಈಗ ಬಿಜೆಪಿಯ ಸ್ಥಿತಿ ಇಂಗು ತಿಂದ ಮಂಗನಂತಾಗಿದೆ. ಭಯೋತ್ಪಾದನೆ ಒಂದು ದೇಶ ವಿರೋಧಿ ಕೃತ್ಯ. ಅದನ್ನು ಇಡೀ ದೇಶದ ಜನತೆ ಅದನ್ನು ಒಂದಾಗಿ ಎದುರಿಸಬೇಕು ಎಂಬ ಸಂದೇಶವನ್ನು ದೇಶದ ಜನ ಈ ಚುನಾವಣೆಯ ಮೂಲಕ ನೀಡಿ ಸಂಘ ಪರಿವಾರದ ಕಿವಿ ಹಿಂಡಿದ್ದಾರೆ.

ಈ ಹಂತದಲ್ಲಿ ಒಟ್ಟು 5 ರಾಜ್ಯಗಳಲ್ಲಿ ರಾಜ್ಯ

ಪುಟ 10ಕ್ಕೆ

ರಾಜಸ್ತಾನದಲ್ಲಿ ಸಿಪಿಐ(ಎಂ) ಮುನ್ನಡೆ

ರಾಜಸ್ತಾನ ರಾಜ್ಯದಲ್ಲಿ ಕಳೆದ ಕೆಲವು ವರ್ಷಗಳಲ್ಲಿ ನೀರಾವರಿ ಪ್ರಶ್ನೆ, ಕೃಷಿ ಉತ್ಪನ್ನಗಳಿಗೆ ಬೆಂಬಲ ಬೆಲೆಗಳಿಗಾಗಿ, ವಿದ್ಯುತ್ ದರಗಳ ತೀವ್ರ ಏರಿಕೆಯ ವಿರುದ್ಧ ಹೀಗೆ ವಿವಿಧ ಪ್ರಶ್ನೆಗಳ ಆಧಾರದಲ್ಲಿ ಬಾರಿ ಬೃಹತ್ ಹೋರಾಟಗಳನ್ನು ಸಂಘಟಿಸಿ ವಸುಂಧರೆ ರಾಜೇ ಸಿಂಧ್ಯಾ ಸರ್ಕಾರದ ಪೋಲೀಸರ ಲಾಠೀ ಪ್ರಹಾರ, ಗೋಲಿಬಾರ್, ಜಲಫಿರಂಗಿ, ಲಾಠಿ ಬೂಟುಗಳನ್ನು ಎದುರಿಸಿದ್ದ ಸಿಪಿಐ(ಎಂ) ನೇತೃತ್ವದ ಚಳುವಳಿ ರಾಷ್ಟ್ರವ್ಯಾಪಿ ಗಮನ ಸೆಳೆದಿತ್ತು. ಸಿಪಿಐ(ಎಂ)ನ ಹತ್ತಾರು ಜನ ಮುಖಂಡರು ಜೈಲು ವಾಸ ಅನುಭವಿಸಿದ್ದರು. ಸರ್ಕಾರದ ದಮನ ಎದುರಿಸಿದ್ದರು. ತೀವ್ರ ದಮನ ಯತ್ನಗಳನ್ನು ಮೀರಿ ಬೆಳೆದ ಚಳುವಳಿಯು ರೈತರ ಜಮೀನಿಗೆ ನೀರು ಬಿಡುಗಡೆ, ವಿದ್ಯುತ್ ದರ ಏರಿಕೆ ವಾಪಸ್, ಬೆಂಬಲ ಬೆಲೆ ಹೆಚ್ಚಳ ಹೀಗೆ ಹಲವು ದೊಡ್ಡ ಪರಿಹಾರಗಳನ್ನು ಒದಗಿಸುವಲ್ಲಿ ಯಶಸ್ವಿಯಾಗಿತ್ತು.

ರಾಜಸ್ತಾನದಲ್ಲಿ ಈ ಚಳುವಳಿ ಈಗ ಇನ್ನೂ ಒಂದು ಹೆಜ್ಜೆ ಮುಂದಡಿ ಇಟ್ಟಂತಾಗಿದೆ. ಇದೇ ಜನ ಚಳುವಳಿಯ ಆಧಾರದಲ್ಲಿ ಪ್ರಸ್ತುತ ವಿಧಾನಸಭಾ ಚುನಾವಣೆಗಳಲ್ಲಿ ಒಟ್ಟಾರೆ ಸಿಪಿಐ(ಎಂ) 34 ಸ್ಥಾನಗಳಲ್ಲಿ ಸ್ಪರ್ಧಿಸಿತ್ತು. ಉಳಿದ ಕ್ಷೇತ್ರಗಳಲ್ಲಿ ಸಿಪಿಐ ಸ್ಪರ್ಧಿಸಿರುವ ಕಡೆ ಸಿಪಿಐಗೂ, ಉಳಿದಂತೆ ಬಹುಜನ ಸಮಾಜ ಪಕ್ಷ(ಬಿಎಸ್‌ಪಿ)ಗೂ ಬೆಂಬಲ ನೀಡಿತ್ತು. ಈ ಚುನಾವಣೆಯಲ್ಲಿ ಸಿಪಿಐ(ಎಂ) ಗಣನೀಯ ಸಾಧನೆ ಮಾಡಿದೆ. ಸ್ಪರ್ಧಿಸಿದ 34 ಕ್ಷೇತ್ರಗಳ ಪೈಕಿ ಸಿಪಿಐ(ಎಂ) 3 ಕ್ಷೇತ್ರಗಳಲ್ಲಿ ವಿಜಯ ಸಾಧಿಸಿದೆ(ವಿವರಗಳಿಗೆ ಪಟ್ಟಿಯನ್ನು ನೋಡಿ - ಪುಟ 10)

ಅನೂಪ್‌ಗರ್ (ಎಸ್.ಸಿ ಮೀಸಲು) ಕ್ಷೇತ್ರದ ಅಭ್ಯರ್ಥಿ ಪವನ್‌ಕುಮಾರ್ 48,467 ಮತಗಳನ್ನು ಒಟ್ಟಾರೆ ಶೇ.37.33 ಮತಗಳನ್ನು ಗಳಿಸಿ ಗೆದ್ದಿದ್ದಾರೆ. ಧೋಡ್(ಎಸ್.ಸಿ. ಮೀಸಲು) ಕ್ಷೇತ್ರದ ಅಭ್ಯರ್ಥಿ ಪ್ರೇಮ್‌ರಾಮ್ 47,840 ಮತಗಳನ್ನು ಅಂದರೆ ಶೇ.36.26 ರಷ್ಟು ಮತಗಳಿಸಿ ಗೆದ್ದಿದ್ದಾರೆ. ಇವರು ಕಿಸಾನ್ ಸಭಾದ ಜನಪ್ರಿಯ ಮುಖಂಡರು. ದಲಿತ ವರನಿಗೆ ಮದುವೆ ಸಂದರ್ಭದಲ್ಲಿ ಕುದುರೆ ಸವಾರಿ ಮಾಡಲು ಅಡ್ಡಿಮಾಡಿದ ಪ್ರಕರಣದಲ್ಲಿ ದಲಿತರ ಕುರಿತ ಮೇಲ್ಜಾತಿಗಳ ತಾರತಮ್ಯ ಧೋರಣೆ ಖಂಡಿಸಿ ನಡೆಸಿದ ಹೋರಾಟದ ಮೂಲಕವೂ ಅವರು ಖ್ಯಾತರಾಗಿದ್ದಾರೆ. ದಂತಾ ರಾಮಗರ್ ಕ್ಷೇತ್ರದಲ್ಲಿ, ಸತತವಾಗಿ ಕಳೆದ 3 ಅವಧಿಗೆ ಶಾಸಕರಾಗಿ ಆಯ್ಕೆಗೊಂಡಿರುವ, ಸಿಪಿಐ(ಎಂ) ಪಕ್ಷದ ಕೇಂದ್ರಸಮಿತಿ ಸದಸ್ಯರು, ರಾಜ್ಯದಲ್ಲಿ ರೈತರು ಮತ್ತು ಶೋಷಿತರ ಪರ ಹೋರಾಟಗಾರರೆಂದೇ ಖ್ಯಾತರಾದ ಅಮ್ರರಾಮ್ 45,909 ಅಂದರೆ ಒಟ್ಟಾರೆ 34.83 ಶೇಕಡಾ ಮತ ಗಳಿಸಿ ಗೆದ್ದಿದ್ದಾರೆ.

ಒಟ್ಟಾರೆಯಾಗಿ 34 ಕ್ಷೇತ್ರಗಳಲ್ಲಿನ ಸಿಪಿಐ(ಎಂ) ಅಭ್ಯರ್ಥಿಗಳು 3,91,597 ಮತಗಳನ್ನು ಗಳಿಸಿದ್ದಾರೆ. ಗೆಲುವು ಸಾಧಿಸಿದ ಕ್ಷೇತ್ರಗಳನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಒಟ್ಟು 9 ಕ್ಷೇತ್ರಗಳಲ್ಲಿ 15 ಸಾವಿರಕ್ಕೂ ಅಧಿಕ ಮತಗಳನ್ನು ಗಳಿಸಲಾಗಿದೆ.

ರಾಜಸ್ತಾನದ ಪ್ರಸಕ್ತ ಸನ್ನಿವೇಶದಲ್ಲಿ ಇದು ನಿಜಕ್ಕೂ ಒಂದು ಮುನ್ನಡೆಯಾಗಿದೆ. ರೈತರು ಹಾಗೂ ಜನರ ಪರವಾದ ಚಳುವಳಿಯನ್ನು ಮುಂದೆ ಕೊಂಡೊಯ್ಯಲು ಈ ಚುನಾವಣಾ ಗೆಲುವು ಖಂಡಿತಾ ಸಹಕಾರಿಯಾಗಲಿದೆ.

ಗೆದ್ದ 3 ಕ್ಷೇತ್ರದಲ್ಲಿ 2 ಕ್ಷೇತ್ರಗಳು ಎಸ್.ಸಿ. ಮೀಸಲು ಎಂಬುದನ್ನು ವಿಶೇಷವಾಗಿ ಇಲ್ಲಿ ಗಮನಿಸಬಹುದಾಗಿದೆ.

ಮೂರನೇ ಶಕ್ತಿಯ ಭರವಸೆಯ ಎಳೆ

ಐದು ರಾಜ್ಯಗಳ ವಿಧಾನ ಸಭಾ ಚುನಾವಣೆಗಳ ಫಲಿತಾಂಶವನ್ನು ಪರಿಶೀಲಿಸಿದರೆ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೇನೆಂದರೆ ಮಿಜೋರಾಂ ಹೊರತುಪಡಿಸಿ 4 ರಾಜ್ಯಗಳಲ್ಲಿ ಸ್ಪರ್ಧೆ ಇದ್ದದ್ದು ಪ್ರಮುಖವಾಗಿ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆ. ಆದರೆ ಈ ಎರಡು ಪಕ್ಷಗಳ ಧೋರಣೆ. ಆಡಳಿತದ ಬಗೆಗೆ ಜನರಲ್ಲಿ ಅತೃಪ್ತಿ ಇದೆ ಎಂಬುದನ್ನು ಫಲಿತಾಂಶದಲ್ಲಿ ಗುರುತಿಸಬಹುದು. ಈ ಹಿಂದಿನ ಕೆಲವು ಚುನಾವಣೆಗಳಿಗಿಂತ ಭಿನ್ನವಾಗಿ ಈ ಚುನಾವಣೆಯಲ್ಲಿ ಕಾಂಗ್ರೆಸ್ಸೇತರ, ಬಿಜೆಪಿಯೇತರ ಪಕ್ಷಗಳು ಗಣನೀಯ ಪ್ರಮಾಣದ ಮತಗಳನ್ನೂ ಹಾಗೂ ಹಲವು ಸ್ಥಾನಗಳನ್ನೂ ಗಳಿಸಿರುವುದು ಈಗಿನ ಫಲಿತಾಂಶದ ವಿಶೇಷ. ಕಾಂಗ್ರೆಸ್, ಬಿಜೆಪಿಗಳಿಗೆ ಬದಲಿಯಾಗಿ ಮೂರನೇ ಶಕ್ತಿಯೊಂದನ್ನು ರೂಪಿಸುವ ಪ್ರಯತ್ನಗಳಿಗೆ ಈ ಬೆಳವಣಿಗೆ ಹೊಸ ಆಧಾರವಾಗುವ ಸಾಧ್ಯತೆಗಳಿವೆ.

ಮಧ್ಯ ಪ್ರದೇಶದಲ್ಲಿ ಅಧಿಕಾರಕ್ಕೆ ಬಂದಿರುವ ಬಿಜೆಪಿಯು ಶೇ.37.8 ರಷ್ಟು ಮತಗಳನ್ನು ಪಡೆದುಕೊಂಡಿದ್ದರೆ, ಬಿಜೆಪಿಯೇತರ ಮತ್ತು ಕಾಂಗ್ರೆಸ್ಸೇತರ ಪಕ್ಷಗಳಿಗೆ 29 ಶೇ. ಸಿಕ್ಕಿದೆ. ಅದೇ ರೀತಿ ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷ 40.5 ಶೇ ಮತ ಪಡೆದಿದ್ದರೆ ಬಿಜೆಪಿ ಹೊರತುಪಡಿಸಿದ ಇತರರು ಶೇ.23 ರಷ್ಟು ಮತಗಳಿಸಿಕೊಂಡಿದ್ದಾರೆ. ಛತ್ತೀಸ್‌ಗಢದಲ್ಲಿ ಬಿಜೆಪಿಯು ಶೇ.40.6 ಮತಪಡೆದಿದ್ದರೆ ಇತರರು ಶೇ.20.6 ಮತಗಳಿಸಿದ್ದಾರೆ. ಮಿಜೋರಾಂನಲ್ಲಿ ಇತರ ಶಕ್ತಿಗಳ ಮತ ಗಳಿಕೆ ಪ್ರಮಾಣ ಶೇ.30.1 ರಷ್ಟಿದೆ.

ಇದರ ಅರ್ಥ ಸ್ಪಷ್ಟವಾಗಿದೆ. ಕಾಂಗ್ರೆಸ್, ಬಿಜೆಪಿ ಪಕ್ಷಗಳ ನೀತಿಗಳಿಗಿಂತ ಜನ ಭಿನ್ನವಾದುದನ್ನು ಜನತೆ ಬಯಸುತ್ತಿದ್ದಾರೆ. ಸ್ಪಷ್ಟವಾದ ಜನಪರ ಕಾರ್ಯಕ್ರಮದ ಆಧಾರದಲ್ಲಿ ಕಾಂಗ್ರೆಸ್ಸೇತರ ಬಿಜೆಪಿಯೇತರ ಶಕ್ತಿಗಳು ಶ್ರಮಿಸಿದಲ್ಲಿ ಜನತೆ ಅದನ್ನು ಬೆಂಬಲಿಸಲಿದ್ದಾರೆ. ಆದರೆ ಇದನ್ನು ರಾಜಕೀಯ ಪಕ್ಷಗಳನ್ನು ಆ ಕೂಟದಿಂದ ತೆಗೆದು ಇಲ್ಲಿಗೆ, ಇಲ್ಲಿಂದ ತೆಗೆದು ಅಲ್ಲಿಗೆ ಅಂಟಿಸುವ 'ಕಟ್ ಅಂಡ್ ಪೇಸ್ಟ್' ಕ್ರಮದಿಂದ ಸಾಧಿಸಲು ಸಾಧ್ಯವಿಲ್ಲ. ಜನರ ಬದುಕಿನ ಪ್ರಶ್ನೆಗಳನ್ನು ಆಧರಿಸಿದ ಸಾಮೂಹಿಕ ಆಂದೋಲನಗಳ ಮೂಲಕ ಮಾತ್ರ ಅದನ್ನು ಗಳಿಸುವುದು ಸಾಧ್ಯವಿದೆ. ಸಿಪಿಐ(ಎಂ) ಮತ್ತು ಎಡಪಕ್ಷಗಳು ಇಂತಹ ಗುರಿಯತ್ತ ಸಾಗಲು ಯತ್ನಿಸುತ್ತಿವೆ. ಈ ಪ್ರಕ್ರಿಯೆಯನ್ನು ಬಲಗೊಳಿಸಬೇಕಿದೆ.

ಸೊಪ್ಪು ಹಾಕದ ಮತದಾರರು

ಪುಟ 9 ರಿಂದ

ಸರ್ಕಾರಗಳ ರಚನೆಗಾಗಿ ಚುನಾವಣೆಗಳು ನಡೆದವು. ರಾಷ್ಟ್ರದ ರಾಜಧಾನಿ ದೆಹಲಿ, ಪಶ್ಚಿಮದಲ್ಲಿ ರಾಜಸ್ತಾನ, ಮಧ್ಯಪ್ರದೇಶ, ಛತ್ತೀಸ್‌ಗಢ ಈಶಾನ್ಯ ಭಾಗದಲ್ಲಿ ಮಿಜೋರಾಂ ಈ ರಾಜ್ಯಗಳು.

ಇದರಲ್ಲಿ ರಾಜಸ್ತಾನ, ಮಧ್ಯ ಪ್ರದೇಶದ, ಛತ್ತೀಸಗಢಗಳಲ್ಲಿ ಬಿಜೆಪಿ ಆಳ್ವಿಕೆ ಇತ್ತು. ದೆಹಲಿಯಲ್ಲಿ ಕಾಂಗ್ರೆಸ್ ಆಳ್ವಿಕೆ, ಮಿಜೋರಾಂನಲ್ಲಿ ಮಿಜೋರಾಂ ನ್ಯಾಷನಲ್ ಫ್ರಂಟ್ ಆಳ್ವಿಕೆ ಇತ್ತು.

ಜನತೆ ಕೋಮುವಾದಿ ಪ್ರಚಾರ ಭಾವೋದ್ರೇಕಗಳಿಗೆ ಒಳಗಾಗದೆ ಮುಖ್ಯವಾಗಿ ಆಯಾ ರಾಜ್ಯಗಳ ಪ್ರಶ್ನೆಗಳ ಆಧಾರದಲ್ಲಿ ಮತ ನೀಡಿರುವುದು ಕಂಡು ಬಂದಿದೆ. ಒಟ್ಟು ಫಲಿತಾಂಶ ಅವಲೋಕಿಸಿದರೆ ಕಾಂಗ್ರೆಸ್ ಸಹ ಬಾರಿ ಕುಣಿದಾಡುವಂತೇನಿಲ್ಲ. ಅದಕ್ಕೂ ಹಲವು ಪಾಠಗಳಿವೆ ಜನರ ತೀರ್ಪಿನಲ್ಲಿ.

ದೆಹಲಿಯಲ್ಲಿ ಎರಡು ಅವಧಿಗೆ ಕಾಂಗ್ರೆಸ್‌ನ ಶೀಲಾದೀಕ್ಷಿತ್‌ರ ಸರಕಾರವಿತ್ತು. ಅದು ಸ್ಪಷ್ಟ ಬಹುಮತಗಳಿಸಿ ವಿಜಯ ಸಾಧಿಸಿದೆ. ವಿರೋಧ ಪಕ್ಷವಾಗಿ ರಚನಾತ್ಮಕವಾಗಿ ಕೆಲಸ ಮಾಡದಿದ್ದರೂ ಬಿಜೆಪಿಯು ಕೋಮುವಾದಿ ಪ್ರಚಾರದ ಆಧಾರದಲ್ಲಿ ದೆಹಲಿ ಮೇಲೆ ಬಾರಿ ಆಸೆ ಇಟ್ಟಿತ್ತು. ದೆಹಲಿ ಬಿಜೆಪಿ ಕೈಗೆಟುಕಲಿಲ್ಲ. ನೂರಕ್ಕೂ ಹೆಚ್ಚು ಜನಗಳನ್ನು ಗೋಲಿಬಾರ್‌ನಲ್ಲಿ ಕೊಂದ ರಾಜಸ್ತಾನದ ವಸುಂಧರೆ ರಾಜೇ ಸಿಂಧೆ ಇನ್ನು 5 ವರ್ಷ ಜನರ ಸಮಸ್ಯೆ ಮರೆತು ಸೀರೆ ಪ್ರದರ್ಶನಗಳ 'ರ್‍ಯಾಂಪ್' ಮೇಲೆ ಕ್ಯಾಟ್‌ವಾಕ್(ಬೆಕ್ಕಿನ ನಡಿಗೆ) ಮಾಡುತ್ತಾ ಓಡಾಡಿಕೊಂಡಿರಬಹುದು. ಅವರು ಮುಖ್ಯಮಂತ್ರಿಯಾಗಿದ್ದಾಗಲೂ ಈ ಕೆಲಸ ಮಾಡಿದ್ದರು. ಇಲ್ಲಿ ಕಾಂಗ್ರೆಸ್ ಬಹುತೇಕ ಬಹುಮತದ ಸಮೀಪ ಬಂದಿದೆ. ಇನ್ನು ಮಧ್ಯ ಪ್ರದೇಶ, ಛತ್ತೀಸ್‌ಗಢಗಳಲ್ಲಿ ಬಿಜೆಪಿ ಮರಳಿ ಅಧಿಕಾರ ಗಳಿಸಿದೆಯಾದರೂ ಗಳಿಸಿದ ಮತಗಳ ಪ್ರಮಾಣ ಹಾಗೂ ಸ್ಥಾನಗಳು ಪ್ರಮಾಣ ಎರಡು ರಾಜ್ಯಗಳಲ್ಲಿ ಹಿಂದಿನ ಚುನಾವಣೆಗಿಂತ ಕಡಿಮೆಯಾಗಿದೆ. ಕೆಲವರು ಬಾರಿ ನಿರೀಕ್ಷೆ ಇಟ್ಟುಕೊಂಡಿದ್ದ, 'ಬೆಂಕಿ ಚೆಂಡು' ಉಮಾಭಾರತಿಯವರ ಭಾರತೀಯ ಜನಸಂಘ(ಬಿಜೆಎಸ್) ಪಕ್ಷವು ದೊಡ್ಡ ಸಾಧನೆ ಮಾಡುವಲ್ಲಿ ವಿಫಲವಾಗಿದೆ. ಜನಪರ ಕಾರ್ಯಕ್ರಮದ ಆಧಾರವಿಲ್ಲದೆ ಬರೇ ಉಗ್ರ ಹಿಂದುತ್ವ ಕೂಗು ಕೂಗುವ ಇವರನ್ನು ಜನರು ನಿರ್ಲಕ್ಷಿಸಿರುವುದು ಸಹಜವಾಗಿಯೇ ಇದೆ.

ಮತದಾರರು ಬಿಜೆಪಿಗೆ ಇಲ್ಲಿ ಶಿಕ್ಷೆ ನೀಡಲು ಸಿದ್ದರಿದ್ದರು ಎಂಬುದು ಕಂಡು ಬಂದಿದೆ. ಆದರೆ ಜನರ ಅತೃಪ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳಲು ಕಾಂಗ್ರೆಸ್ ವಿಫಲವಾಗಿದೆ. ಇಲ್ಲಿ ಎರಡೂ ಪಕ್ಷಗಳಿಗೂ ಪಾಠವಿದೆ. ಛತ್ತೀಸ್‌ಗಢದಲ್ಲಿ ರಮಣಸಿಂಗ್ ಸರ್ಕಾರವು ಘೋಷಿಸಿದ 1 ರೂಪಾಯಿಗೆ ಅಕ್ಕಿ ಎಂಬ ಯೋಜನೆಗೆ ಜನ ಆಕರ್ಷಿತರಾಗಿದ್ದಾರೆ ಎಂದ ವರದಿಗಳಿವೆ. ಆಹಾರ ಧಾನ್ಯಗಳ ಬೆಲೆ ದುಬಾರಿಯಾಗಿ, ಬದುಕು ದುಸ್ತರವಾಗಿರುವ, ಜಾಗತೀಕರಣದ ನೀತಿಗಳು ಜನರ ಬದುಕನ್ನು ಹಿಂಡುತ್ತಿರುವ 1 ಕೆ.ಜಿ. ಅಕ್ಕಿಗೆ ಬೆಲೆ 1 ರೂ. ದೊರೆಯುತ್ತದೆ ಎಂದರೆ ಜನರಲ್ಲಿ ಆಕರ್ಷಣೆ ಸಹಜವೇ. ಆಹಾರ, ಉದ್ಯೋಗ, ನೀರು, ರಸ್ತೆ, ಶಾಲೆ ಇವೇ ಜನಪರ ಬದುಕಿನ ದೊಡ್ಡ ಪ್ರಶ್ನೆಗಳು. ಅದನ್ನು ಆಳುವವರು ಸರಿಯಾಗಿ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. ಇನ್ನು ಮಿಜೋರಾಂನಲ್ಲಿ ಹತ್ತು ವರ್ಷಗಳ ನಂತರ ಕಾಂಗ್ರೆಸ್‌ಗೆ ಅಲ್ಲಿ ಸ್ಪಷ್ಟ ಬಹುಮತ ಬಂದಿದೆ. ಜನ ಎಂಎನ್‌ಎಫ್ ಅನ್ನು ಸ್ಪಷ್ಟವಾಗಿ ತಿರಸ್ಕರಿಸಿ ಬದಲಾವಣೆ ಬಯಸಿದ್ದಾರೆ. ●

ವಿಧಾನಸಭಾ ಚುನಾವಣಾ ಫಲಿತಾಂಶ

ರಾಜಸ್ತಾನ : ಒಟ್ಟು ಸ್ಥಾನಗಳು 200

ಪಕ್ಷಗಳು	ಗೆದ್ದ ಸ್ಥಾನ	
	2008	2003
ಕಾಂಗ್ರೆಸ್	96	56
ಬಿಜೆಪಿ	78	120
ಬಿಎಸ್‌ಪಿ	6	2
ಸಿಪಿಐ(ಎಂ)	3	1

ದೆಹಲಿ ಒಟ್ಟು ಸ್ಥಾನಗಳು : 70

ಪಕ್ಷ	ಗೆದ್ದ ಸ್ಥಾನಗಳು	
	2008	2003
ಕಾಂಗ್ರೆಸ್	42	47
ಬಿಜೆಪಿ	20	23
ಬಿಎಸ್‌ಪಿ	2	0

ಮಧ್ಯಪ್ರದೇಶ : ಒಟ್ಟು ಸ್ಥಾನಗಳು : 230

ಪಕ್ಷಗಳು	ಗೆದ್ದ ಸ್ಥಾನಗಳು	
	2008	2003
ಕಾಂಗ್ರೆಸ್	71	38
ಬಿಜೆಪಿ	142	173
ಬಿಎಸ್‌ಪಿ	7	2
ಇತರೆ	17	9

ಛತ್ತೀಸ್‌ಗಢ : ಒಟ್ಟು ಸ್ಥಾನಗಳು 90

ಪಕ್ಷಗಳು	ಗೆದ್ದ ಸ್ಥಾನಗಳು	
	2008	2003
ಕಾಂಗ್ರೆಸ್	38	37
ಬಿಜೆಪಿ	50	50
ಬಿಎಸ್‌ಪಿ	2	2
ಎನ್‌ಸಿಪಿ	1	0

ಮಿಜೋರಾಂ : ಒಟ್ಟು ಸ್ಥಾನಗಳು 40

ಪಕ್ಷಗಳು	ಗೆದ್ದ ಸ್ಥಾನಗಳು	
	2008	2003
ಕಾಂಗ್ರೆಸ್	32	12
ಎಂಎನ್‌ಎಫ್	3	21
ಇತರೆ	5	7

ಹ್ಯಾಟ್ರಿಕ್..... ಆದರೂ ಶೇ. 50 ಮತ ಇಲ್ಲ.

ಜನಗಳಲ್ಲಿ ಅಧಿಕಾರಸ್ಥ ಪಕ್ಷದ ವಿರುದ್ಧ ಮತನೀಡುವ ಪ್ರವೃತ್ತಿ ಕಾಣುತ್ತದೆ ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಮಧ್ಯಪ್ರದೇಶದಲ್ಲಿ ಮತ್ತು ಛತ್ತೀಸ್‌ಗಡದಲ್ಲಿ ಬಿಜೆಪಿ ಹಾಗೂ ದಿಲ್ಲಿಯಲ್ಲಿ ಕಾಂಗ್ರೆಸ್ ಈ ಬಾರಿ ಈ ಅಧಿಕಾರಸ್ಥ-ವಿರೋಧಿ ಅಂಶವನ್ನು ತಪ್ಪಿಸಿಕೊಂಡಿವೆ. ಆದರೂ ಪಶ್ಚಿಮ ಬಂಗಾಲದಲ್ಲಿ ಮತ್ತು ಕೇರಳದಲ್ಲಿ ಕಂಡಿರುವಂತೆ ಈ ಐದು ರಾಜ್ಯಗಳಲ್ಲಿ ಎಲ್ಲಿಯೂ ಗೆದ್ದವರ ಮತಗಳಿಕೆ 50 ಶೇಕಡಾದ ಹತ್ತಿರವೂ ಬಂದಿಲ್ಲ ಎಂಬುದನ್ನು ಗಮನಿಸಬೇಕು. ಎಲ್ಲ ಕಡೆಗಳಲ್ಲೂ ಕಾಂಗ್ರೆಸ್ಸೇತರ, ಬಿಜೆಪಿಯೇತರ ಪಕ್ಷಗಳು ಗಮನಾರ್ಹ ಪ್ರಮಾಣದಲ್ಲಿ ಮತಗಳಿಸಿವೆ.

ಸತತ ಮೂರು ಬಾರಿ ಗೆದ್ದು ಹ್ಯಾಟ್ರಿಕ್ ಸಾಧಿಸಿರುವ ಶೀಲಾ ದೀಕ್ಷಿತ್ ಕೂಡ ಶೇ. 50 ಮತಗಳನ್ನು ಪಡೆಯುವಲ್ಲಿ ಏನೂ ಯಶಸ್ವಿಯಾಗಿಲ್ಲ.

ಬಿಎಸ್‌ಪಿ ಬೆಂಬಲ ವೃದ್ಧಿ

ಕಾಂಗ್ರೆಸ್ ಪಕ್ಷದ ಏಕಾಧಿಪತ್ಯಕ್ಕೆ ಎದುರಾಗಿ 80ರ ದಶಕದ ಕೊನೆಯ ಹೊತ್ತಿಗೆ ಜನತಾದಳ ಹಲವಾರು ರಾಜ್ಯಗಳಲ್ಲಿ ಪರ್ಯಾಯ ಶಕ್ತಿಯಾಗಿ ಬೆಳೆದುಬಂದಿತು. ಅದರಲ್ಲಿ ಗುಜರಾತ್, ರಾಜಸ್ತಾನ, ಮಧ್ಯಪ್ರದೇಶ, ಉತ್ತರ ಪ್ರದೇಶ ಮುಂತಾದ ಹಲವು ರಾಜ್ಯಗಳಿದ್ದವು. ಜನತಾದಳ ಒಡೆದು ದುರ್ಬಲವಾದಂತೆ ಹಸಿ ಹಸಿ ಕೋಮುವಾದವನ್ನೇ ಬಳಸಿಕೊಂಡು ಬಿಜೆಪಿಯು ಈ ಹೆಚ್ಚಿನ ಕಡೆ ಕಾಂಗ್ರೆಸ್ ವಿರೋಧಿ ಸ್ಥಾನವನ್ನು ಆಕ್ರಮಿಸಿಕೊಂಡಿತು. ಆ ನಂತರ ಹಲವು ವರ್ಷಗಳ ಕಾಲ ರಾಜಸ್ತಾನ, ಮಧ್ಯಪ್ರದೇಶ, ಮುಂತಾದ ರಾಜ್ಯಗಳಲ್ಲಿ ಬಿಜೆಪಿ ಬಿಟ್ಟರೆ ಕಾಂಗ್ರೆಸ್, ಕಾಂಗ್ರೆಸ್ ಬಿಟ್ಟರೆ ಬಿಜೆಪಿ ಎಂಬಂತೆ ಈ ಎರಡು ಪಕ್ಷಗಳ ನಡುವೆ ರಾಜಕೀಯವು ಹೆಚ್ಚಾಗಿ ಧ್ರುವೀಕರಣಗೊಂಡಿತು.

ಈಗಿನ ಚುನಾವಣೆಯಲ್ಲಿ ರಾಜಸ್ತಾನದಲ್ಲಿ ಸಿಪಿಐ(ಎಂ) ಮತ್ತು ಬಿಎಸ್‌ಪಿ ಪಕ್ಷಗಳು ಗಳಿಸಿರುವ ಜನಬೆಂಬಲ, ಅದೇ ರೀತಿ ಮಧ್ಯಪ್ರದೇಶ, ಛತ್ತೀಸ್‌ಗಡ, ದೆಹಲಿ ಮುಂತಾದ ಕಡೆ ಬಿಎಸ್‌ಪಿ ಪಕ್ಷವು ತನ್ನ ಮತಗಳಿಗೆ ಮತ್ತು ಸ್ಥಾನಗಳಿಕೆ ಎರಡನ್ನು ಗಮನಾರ್ಹವಾಗಿ ಹೆಚ್ಚಿಸಿಕೊಂಡಿರುವುದು ಒಟ್ಟಾರೆ ಬಿಜೆಪಿಯೇತರ, ಕಾಂಗ್ರೆಸ್ಸೇತರ ಪಕ್ಷಗಳು ಗಣನೀಯ ಬೆಂಬಲ ಗಳಿಸಿಕೊಂಡಿರುವುದು ವಿಶೇಷವಾಗಿದೆ.

ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಕಳೆದ ಚುನಾವಣೆಯಲ್ಲಿ ಶೇ.7.5 ಮತ ಗಳಿಸಿದ್ದ ಬಿಎಸ್‌ಪಿ ಈ ಬಾರಿ ಶೇ.14 ಮತಗಳನ್ನು ಗಳಿಸಿದೆ. ಎರಡು ಸ್ಥಾನಗಳನ್ನು ಗಳಿಸಿದೆ. ಕಳೆದ ಬಾರಿ ಬಿಎಸ್‌ಪಿಗೆ ಸ್ಥಾನ ಸಿಕ್ಕಿರಲಿಲ್ಲ.

ಬಿಎಸ್‌ಪಿಗೆ ರಾಜಸ್ತಾನದಲ್ಲಿ ಕಳೆದ ಬಾರಿ 2 ಸ್ಥಾನ ಇತ್ತು. ಅದು ಶೇ.3.9 ಮತ ಪಡೆದಿತ್ತು. ಈ ಬಾರಿ ಸ್ಥಾನ 6ರಕ್ಕೇರಿದೆ. ಮತಗಳಿಕೆ ಶೇ.8ಕ್ಕೇರಿದೆ. ಮಧ್ಯಪ್ರದೇಶದಲ್ಲಿ 2 ಇದ್ದ ಸ್ಥಾನ ಈಗ 7ಕ್ಕೇರಿದೆ. ಮತಗಳಿಕೆ ಶೇ. 6.35ರಿಂದ ಶೇ.8.35ಕ್ಕೇರಿದೆ. ಛತ್ತೀಸ್‌ಗಡದಲ್ಲಿ ಸ್ಥಾನಗಳು ಹೆಚ್ಚಾಗದಿದ್ದರೂ ಮತಗಳಿಕೆ ಶೇ.2.5 ರಿಂದ ಶೇಕಡಾ 6ಕ್ಕೇರಿದೆ.

ಅಂದರೆ ಕಾಂಗ್ರೆಸ್ ಬಿಜೆಪಿಗಳ ನಡುವಿನಲ್ಲಿ ಮತ್ತೊಂದು ಮೂರನೇ ರಾಜಕೀಯ ಶಕ್ತಿಯ ಬೆಳವಣಿಗೆಯು ಆಯಾಯ ರಾಜ್ಯಗಳಲ್ಲೂ ಮತ್ತು ರಾಷ್ಟ್ರಮಟ್ಟದ ಹೊಸ ಸಮೀಕರಣವನ್ನೇ ಸೃಷ್ಟಿಸಬಹುದಾದ ಸಂಭವ ಇದೆ.

ಜನ ಚಳುವಳಿಗಳ ಮುನ್ನಡೆ ದೃಷ್ಟಿಯಿಂದ ಹಾಗೂ ಜನರ ಬದುಕಿನ ನೈಜ ಪ್ರಶ್ನೆಗಳನ್ನು ರಾಷ್ಟ್ರ ರಾಜಕಾರಣದ ಮುಂಚೂಣಿಗೆ ತರಲು ಶ್ರಮಿಸುತ್ತಿರುವ ಹಾಗೂ ರಾಷ್ಟ್ರದಲ್ಲಿ ಮೂರನೇ ರಾಜಕೀಯ ಶಕ್ತಿಗಳ ಬಲವರ್ಧನೆಗಾಗಿ ದುಡಿಯುತ್ತಿರುವ ಸಿಪಿಐ(ಎಂ) ಮತ್ತು ಎಡಪಕ್ಷಗಳ ದೃಷ್ಟಿಯಿಂದ ಈ ಬೆಳವಣಿಗೆ ಆಸಕ್ತಿದಾಯಕವಾಗಿದೆ. ಮೂರನೇ ರಾಜಕೀಯ ಶಕ್ತಿಯೊಂದಿಗೆ ಬಿಎಸ್‌ಪಿ ತೋರುವ ಸಹಕಾರ ಮತ್ತು ಧೋರಣೆಯನ್ನು ರಾಷ್ಟ್ರಾದ್ಯಂತ ಕುತೂಹಲದಿಂದ ನಿರೀಕ್ಷಿಸಲಾಗುತ್ತಿದೆ. ●

ಸಿಹಿ ಕಬ್ಬು ಬೆಳೆಗಾರರ ಪಾಲಿಗೆ ಕಹಿ

ಪುಟ 8 ರಿಂದ

ಆರೆಯಲಾಗಲಿಲ್ಲ ಅಂತ ಒಣಗಿದ ಕಬ್ಬಿನ ಗ... ಬೆಂಕಿ ಇಟ್ಟ. ಹೋಗಲಿ ಉತ್ಪ... ಕಡಿಮೆಯಾದಾಗಲಾದರೂ ರೈತನಿಗೆ, ರೈತನ ಬೆ... ಬೆಲೆ ಬರುವುದೇ ಎಂದರೆ ಆಗ ಮತ್ತೊಂದು ಬಗೆ... ಸಮಸ್ಯೆ.

ಕರ್ನಾಟಕ ಪ್ರಾಂತ ರೈತ ಸಂಘ (ಕೆಪಿಆರ್‌ಎಸ್...) ಕಬ್ಬಿನ ರೈತರ ಸಮಸ್ಯೆಗಳ ಆಧಾರದ... ಬೆಂಗಳೂರಿನಲ್ಲಿ ಅಕ್ಟೋಬರ್ 18, 2008 ರಂ... ರಾಜ್ಯಮಟ್ಟದ ಕಬ್ಬು ಬೆಳೆಗಾರರ ಸಮಾವೇಶವ... ಸಂಘಟಿಸಿತ್ತು. ಈ ಸಮಾವೇಶದಲ್ಲಿ ಅಖಿಲ ಭಾ... ಕಿಸಾನ್ ಸಭಾ (ಎಐಕೆಎಸ್)ನ ರಾಷ್ಟ್ರಾಧ್ಯಕ್ಷರಾ... ರಾಮಚಂದ್ರ ಪಿಳ್ಳೈ ಅವರು ಪಾಲ್ಗೊಂಡಿದ್ದರು. ಕ... ರೈತರ ಸಮಸ್ಯೆಗಳಿಗೆ ಸಂಬಂಧಿಸಿದ ಹಲ... ಸಮಸ್ಯೆಗಳ ಮೇಲೆ ಅವರು ಬೆಳಕು ಚೆಲ್ಲಿದ... ವಿಶೇಷವಾಗಿ ರಾಜ್ಯದ ರೈತರ ಸಮಸ್ಯೆಗಳ ಕು... ರೈತಸಂಘದ ರಾಜ್ಯಾಧ್ಯಕ್ಷರಾದ ಮಾರುತಿ ಮಾನ್ಪ... ರಾಜ್ಯ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆ... ಬೆಳಕು ಚೆಲ್ಲಿದರು. ಹಲವು ಜಿಲ್ಲೆಗಳ ಕ... ಬೆಳೆಗಾರರು, ರೈತ ಮುಖಂಡರೂ ಪಾಲ್ಗೊಂಡಿದ್ದ...

ಕಬ್ಬಿನ ರೈತರ ವಿವಿಧ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯಿಸಿ, ವೈಜ್ಞಾನಿಕ ಬೆಂಬಲ ಬೆಲೆ, 1966 ಸಕ್ಕರೆ ಕಾಯ್ದೆಗೆ ತಿದ್ದುಪಡಿ ತಂದು ಬೆಂಬಲ ಬೆ... ನಿಗದಿಪಡಿಸುವ ಅಧಿಕಾರವನ್ನು ರಾಜ್ಯ ಸರ್ಕಾರ... ಕೊಡುವುದು, ರೈತರ ಬಾಕಿ ಪಾವತಿ, ಬ... ಇರಿಸಿಕೊಂಡ ಅವಧಿಗೆ ಬಡ್ಡಿ ಇತ್ಯಾದಿ ಹ... ಬೇಡಿಕೆಗಳಿಗಾಗಿ ಒತ್ತಾಯಿಸಿ ಧರಣಿ, ಪ್ರತಿಭಟ... ಪಿಕೆಟಿಂಗ್, ಘೇರಾವೊ ಇತ್ಯಾದಿ ವಿವಿಧ ಹಂತ... ಹೋರಾಟ ನಡೆಸಲು ಸಮಾವೇಶ ತೀರ್ಮಾನಿ...

ಸೌಹಾರ್ದ ಜಾಥಾ ಹೊರಟಿತೋ

ಶಾಂತಿ ಸಂದೇಶವನ್ನು ಸಾರಲೆಂದು, ಕಾಯಕ ಜೀವಿಗಳ ನಾಡಿನಿಂದ ಅರಿವಿನ ಬೆಳಕು ಮೂಡಿಸಲು, ಜನತೆಯ ಹಸಿವಿನ ಬಗ್ಗೆ ಮಾತನಾಡಲು ಬಯಸದ ಧರ್ಮಾಂಧತೆಯನ್ನು ವಿರೋಧಿಸಲು, ಸೌಹಾರ್ದ ಬದುಕು ಕಟ್ಟಲು ನಾವು ಹೊರಟಿದ್ದೇವೆ. ನೀವು...

ಹೋರಾಟದ ಅಂಗಳದೀ ಶಾಂತಿದೂತರು

ಹರಹರಿ-ಹಜರತ್, ಏಸು-ನಾನಕ, ಬುದ್ಧ-ಬಸವ, ಅಂಬೇಡ್ಕರ್-ಗಾಂಧಿ ಲೋಹಿಯಾ-ಪೆರಿಯಾರ್, ಮಹಾತ್ಮಫುಲೆ ಮುಂತಾದ ದರ್ಶನಿಕ ಮತ್ತು ಸಾಮಾಜಿಕ ಚಿಂತಕರ ಶಾಂತಿ ಸಂದೇಶವನ್ನು ಸಾರಲೆಂದು 9.12.08 ರಂದು ಕಾಯಕ ಚಳುವಳಿಯ ನೇತಾರರ ನಾಡಾದ ಬಸವಕಲ್ಯಾಣದಲ್ಲಿ ಸೌಹಾರ್ದ ಪರಂಪರೆಯ ಜಾಥಾ ಉದ್ಘಾಟನೆಗೊಂಡಿತು. ಜಾತ್ಯಾತೀತ ನಂಬಿಕೆಗಳ, ಧರ್ಮ ಸಮನ್ವಯತೆ, ಪರಧರ್ಮ ಸಹಿಷ್ಣುತೆ ಮತ್ತು ಜೀವನ್ಮುಖಿ ದಾರ್ಶನಿಕತೆಯ ನಾಡೇ ಕರ್ನಾಟಕ. ಒಂದಾನೊಂದು ಕಾಲದಲ್ಲಿ ಬೌದ್ಧರ ನೆಲೆವೀಡಾಗಿದ್ದ ಸನ್ನತಿ, ನಾಗಾವಿ, ಮಸ್ಕಿಗಳು ಇದ್ದದ್ದು ಕರ್ನಾಟಕದಲ್ಲಿಯೇ. ತೀರ ಲಿಪಿರೂಪದ ಅಶೋಕನ ಕಾಲದ ಶಾಸನಗಳು, ಜೈನ



ಬಸದಿಗಳು, ಅಹಿಂಸಾ ಮಾರ್ಗದ ಉಪಾಸಕರ ಕಾಶಿ ಎಂದು ಕರೆಸಿಕೊಂಡಿರುವ ಮೂಡಬಿದ್ರೆ, ಶ್ರವಣ ಬೆಳಗೊಳ, ಧರ್ಮಸ್ಥಳ ಇವೆಲ್ಲಾ ಕನ್ನಡ ನಾಡವರ ಪ್ರಬುದ್ಧತೆಯ ಸಂಕೇತಗಳು. ಸಕಲಜೀವಾತ್ಮರ್ರಿಗೆ ಲೇಸನು ಬಯುಸುವುದೇ ಧರ್ಮ, ದಯುವೇ ಧರ್ಮದ ಮೂಲವಯ್ಯ, ಸಮತೆಯೆಂಬುದೇ ಯೋಗ ನೋಡಾ ಎಂದು ಹೇಳಿದ ಬಸವಣ್ಣ, ಸಿದ್ಧರಾಮ, ಅಲ್ಲಮಪ್ರಭು, ಮಹಾದೇವಿಯಕ್ಕರ ಕ್ರಾಂತಿನೆಲವೇ ಕರ್ನಾಟಕ. ಮಾನವ ಕುಲಂ ತಾನೊಂದೇ ವಲಂ, ಕಸಪರವೆಂಬುದೇಂ ನೆರೆ ಸೈರಿಸಲಾರ್ಪೊಡೆ ಪರಧರ್ಮಮುಮಂ, ಪರವಿಚಾರಮುಮಂ ಎಂದು ಹೇಳಿದ ಪಂಪ, ಶ್ರೀವಿಜಯ ಬಾಳಿದ್ದು ಇಲ್ಲಿಯೇ. "ಐರತ್-ಗೈರತ್ ಚಕ್ಕೀ ಕೀ ದೋ ಪಾಟಾ। ಮುಕ್ಕಾಂ ಫೇಕ್ ಮಾರೀ ಸಾಯಿ ಕೀ ಕಮಾಯಿರೇ" ಎಂದು ಹಾಡಿದ ಸೂಫಿ ಸಂತರ ಗೇಸುದರಾಜ್ ಖ್ವಾಜಾ ಬಂದಾನವಾಜ್, ಸೂಫಿ ಬೀಜಗಳನ್ನು ಮೊದಲ ಬಾರಿಗೆ ಈ ನೆಲಕ್ಕೆ ತಂದ ಬಾಬಾಬುಡನ್‌ಗಿರಿಯ ಸೂಫಿ ಪಕೀರ ಅವರೆಲ್ಲರ ಕರ್ಮಭೂಮಿಯು ಇದೇ ಕರ್ನಾಟಕ. ಸಮಗ್ರ ಸಾಹಿತ್ಯ ಸಂಸತಿ, ಶಿಲ್ಪಕಲೆ, ಇತ್ಯಾದಿ ಗತ ಇತಿಹಾಸವನ್ನು ಪುನರುಜ್ಜೀವನಗೊಳಿಸಿದ ಇ.ಪಿ.ರೈಸ್, ರೆವರೆಂಡ್ ಎಫ್ ಕಿಟ್ಟೆಲ್, ಮ್ಯಾಕ್ಸ್ ಮುಲ್ಲರ್ ಮುಂತಾದ ಕ್ರೈಸ್ತ ಸಾಧಕರು ನೆಲೆಸಿದ್ದು ಇಲ್ಲಿಯೇ. ನಮ್ಮನೆಲದ ಗಾಳಿ ನೀರು ಕುಡಿದಿದ್ದರ ಋಣ ಪ್ರಜ್ಞೆಯಿಂದಾಗಿ ಶಿಕ್ಷಣದ ಸಾರ್ವತ್ರೀಕರಣ, ಮಹಿಳಾ ಶಿಕ್ಷಣ, ಮಹಿಳಾ ಪರ ಕಾನೂನುಗಳು, ದಲಿತ ಸಂವೇದನೆ ಮುಂತಾದವುಗಳ ಪರವಾದ ಕಾನೂನುಗಳನ್ನು ತರಲು ಕಾರಣವಾದ ಕ್ರೈಸ್ತರು ನಮ್ಮ ಗೌರವಕ್ಕೆ ಪಾತ್ರರಾಗಿದ್ದಾರೆ. ಸಮನ್ವತೆಯ ನೆಲೆಯಲ್ಲಿ ಜನ್ಮ ತಾಳಿದ ಸಿಖ್‌ರ ಪವಿತ್ರ ಗುರುನಾನಕ್‌ರ ಝರ್‌ನಾ ಬೀದರಿನಲ್ಲಿದೆ. ಕರ್ನಾಟಕದ ಹಣೆಮಣಿ ಎನಿಸಿಕೊಂಡಿದೆ. ಹೀಗೆ ಶಿವ, ವಿಷ್ಣು, ಬುದ್ಧ, ಮಹಾವೀರ, ಬಸವಣ್ಣ ನಾನಕ ಏಸು, ಸೂಫಿಸಂತರ ನೆನಪುಗಳಿಂದ ಆ ಎಲ್ಲ ಧರ್ಮಾನುಯಾಯಿಗಳ ಪರಸ್ಪರ ಮೈತ್ರಿಯಿಂದಾಗಿಯೇ ಈ ನಾಡು ಇವತ್ತಿಗೂ ಬಹುಮುಖಿ ಸಂಸತಿಯು ಸುಮಧುರ ಸಂಗಮವಾಗಿದೆ. ಇಂಥ ಸಿದ್ಧಬುದ್ಧಜ್ಞಾನವೃದ್ಧ ಪ್ರಬುದ್ಧರ ನಾಡಿನಲ್ಲಿ ಧರ್ಮಗಳ ಜಗಳ ಸಲ್ಲದು. ಜಾತಿ ತಾರತಮ್ಯ ಕೂಡದು. ಹೆಣ್ಣು ಗಂಡು ಭೇದ ಒಪ್ಪದು. ಬಡ-ಬಲ್ಲವ ಶೋಷಣೆ ನಡೆಯದು. ಅಭಿವೃದ್ಧಿಯೇ ನಮ್ಮ ಮಂತ್ರ. ಅಖಂಡ ಭಾರತದ ರಕ್ಷಣೆಯೇ ನಮ್ಮ ಧರ್ಮ. ದೇಶವೇ ನಮ್ಮ ಆತ್ಮ. ಸರ್ವರನ್ನು ಸಮದೃಷ್ಟಿಸುವುದೇ ನಮ್ಮ ದರ್ಶನ ಎಂಬುದನ್ನು ಸಾರಲೆಂದು ಮಾರ್ಕ್ಸ್‌ವಾದಿ ಭಾರತ ಕಮ್ಯೂನಿಸ್ಟ್ ಪಕ್ಷವು ಕರ್ನಾಟಕ ರಾಜ್ಯದಾದ್ಯಂತ ಸೌಹಾರ್ದ ಪರಂಪರೆಯ ಜನಜಾಗೃತಿ ಹಮ್ಮಿಕೊಂಡಿದೆ. ಬಸವಕಲ್ಯಾಣದಿಂದ ಹೊರಡಬೇಕಾದ ಜಾಥಾವು 9.12.08 ರಂದು ಮದ್ಯಾಹ್ನ 1 ಗಂಟೆಗೆ ಉದ್ಘಾಟನೆಗೊಂಡಿತು.



ಆಕಾಶಕ್ಕೆ ಪಾರಿವಾಳ

ಬೀದರ ಸಮುದಾಯ ತಂಡದ ಸಂಗಾತಿಗಳ 'ಶಾಂತಿರಕ್ಷಕರು ನಾವು ನಾವೆಲ್ಲ ಒಂದೇ ನಾವೆಲ್ಲರೂ ಒಂದೆ' ಎಂಬ ಶಾಂತಿಗೀತೆಯೊಂದಿಗೆ ಕಾರ್ಯಕ್ರಮ ಚಾಲನೆಗೊಂಡಿತು. ವಚನಪ್ರಿಯ, ಬಸವ ಜೀವಾಳ ಎನಿಸಿಕೊಂಡಿರುವ ಕಲ್ಯಾಣ ಅನುಭವ ಮಂಟಪದ ಮುಖಂಡರಾದ ವ್ಹಿ.ಸಿದ್ಧರಾಮಣ್ಣನವರು ಪಾರಿವಾಳ ಪಕ್ಷಿಯನ್ನು ಆಕಾಶದೆತ್ತರಕ್ಕೆ ಹಾರಿಸುವ ಮೂಲಕ ಸಮಾನತೆ ವಚನಗಳ ಉದ್ಘೋಷಣೆಯೊಂದಿಗೆ ಜಾಥಾವನ್ನು ಉದ್ಘಾಟಿಸಿದರು. ಅತಿಥಿಗಳಾಗಿದ್ದ ಸಂಗಾತಿ ನಿತ್ಯಾನಂದಸ್ವಾಮಿಗಳು ಕೋಮುವಾದ ಮತೀಯ ಭಯೋತ್ಪಾದನೆಯನ್ನು ವಿರೋಧಿಸಿ ಶುದ್ಧ ಮಾನವಾಂತಃಕರಣೆಯನ್ನು ಜಾಗೃತಿಗೊಳಿಸಲೆಂದು ಹಮ್ಮಿಕೊಂಡಿರುವ ಸದರಿ ಜಾಥಾದ ಅವಶ್ಯಕತೆ, ಸ್ವರೂಪ, ಪರಿಣಾಮಗಳನ್ನು ಕುರಿತು ಹೇಳಿದರು. ದಿನಬಳಕೆಯ ವಸ್ತುಗಳ ಬೆಲೆ ಏರಿಕೆ, ಜಾಗತಿಕ ಮಾರುಕಟ್ಟೆಯ ಕುಸಿತ. ಇವುಗಳನ್ನು ಮರೆ ಮಾಚಲೆಂದು ಹಬ್ಬಿಸಲಾಗುತ್ತಿರುವ ಧಾರ್ಮಿಕ ದೊಂಬಿ, ಗಲಭೆಗಳು, ಚರ್ಚಿನ ಮೇಲಿನ ಧಾಳಿ, ಮುಂಬೈ ಮೇಲಿನ ಭಯೋತ್ಪಾದಕರ ದಾಳಿ ಪರಿಣಾಮವಾಗಿ ಜನತೆಯಲ್ಲಿ ಮನೆ ಮಾಡಿಕೊಳ್ಳುತ್ತಿರುವ ಆತಂಕ, ಅರಾಜಕತೆ, ರಾಜಕಾರಣದ ಬಗೆಗಿನ ಅಭಾಸ. ಈ ಎಲ್ಲವುಗಳು ಹೇಗೆ ಪರಸ್ಪರ ಅಂತರ್ ಸಂಬಂಧ ಹೊಂದಿವೆ ಎಂಬ ತಥ್ಯವನ್ನು ಅವರು ಬಿಚ್ಚಿಟ್ಟರು.

ಶಾಂತಿಯೊಂದೇ ಬೇಕಾದ ವಸ್ತು ವಿಚಾರವಾದವೇ ಶಾಂತಿಯ ತೊಟ್ಟಿಲು


ಇನ್ನೋರ್ವ ಅತಿಥಿಯಾಗಿದ್ದ ಫಾದರ್ ಸಂತೋಷ ಡಾಯಸ್ ಅವರು ಜಗತ್ತಿಗೆ ಶಾಂತಿಯೊಂದೇ ಬೇಕಾದ ವಸ್ತು. ಪರಸ್ಪರ ಸುಖದುಃಖ ಹಂಚಿಕೊಳ್ಳುವ ಮಾನವೀಯತೆಯೇ ಎಲ್ಲ ಧರ್ಮಗಳ ಸಾರವಾಗಿದೆ. ಧರ್ಮಾಂಧತೆ ಸಲ್ಲದು ಎಂದು ವಿವರಿಸಿದರು. ಮಗದೋರ್ವ ಅತಿಥಿಯಾಗಿದ್ದ ಗೌರವಾನ್ವಿತ ಧಮ್ಮಾನಂದ ಭಂತೇಜಿಯವರು ಪ್ರಜ್ಞೆಯಿಂದ ಮಾತ್ರ ಎಲ್ಲ ಸಮಸ್ಯೆಗಳಿಗೆ ಪರಿಹಾರ. ಪ್ರಜ್ಞೆಯಿಲ್ಲದ ಭಾವನಾತ್ಮಕತೆಯು ಮತಾಂಧರನ್ನು ಸೃಷ್ಟಿ ಮಾಡುತ್ತದೆ. ಆದ್ದರಿಂದ ವಿಚಾರವಾದವೇ ಶಾಂತಿಯ ತೊಟ್ಟಿಲಾಗಿದೆ ಎಂದು ಹೇಳಿದರು. ನಂತರ ಬೀದರಿನಿಂದ ಬಂದಿರುವ ಅತಿಥಿಗಳಾದ ಜನಾಬ್ ಅಬ್ದುಲ್ ಖತೀಬ ಸಾಹೇಬರು ಭಾರತವು ಹಲವು ಬಣ್ಣಗಳ ಹೂವಿನಿಂದ ಕೂಡಿದ ಸುಂದರ ಉದ್ಯಾನವನದಂತಿದೆ. ಎಲ್ಲ ಜಾತಿ ಮತ ಧರ್ಮದವರು ಪರಸ್ಪರರ ನಂಬಿಕೆ ಆಚರಣೆಗಳನ್ನು ಸೌಹಾರ್ದ ನೆಲೆಯಲ್ಲಿ ಪೂರೈಸಿಕೊಳ್ಳುತ್ತ ಬಂದಿದ್ದೇವೆ. ಎಲ್ಲರೂ ಸೇರಿ ಎಲ್ಲರ ಹಬ್ಬ, ಸಂತೋಷ, ದುಃಖದ ಸಮಾರಂಭಗಳನ್ನು ನಡೆಸಿಕೊಂಡು ಬಂದಿದ್ದೇವೆ. ಎಲ್ಲ ಜಾತಿ ಧರ್ಮಗಳಿಗಿಂತ ದೇಶ ದೊಡ್ಡದು ಎಂದು ಸಾರಿದರು. ಸಾಹಿತಿ ಅತಿಥಿಗಳಾಗಿ ಆಗಮಿಸಿದ ಡಾ|| ಕಾಶಿನಾಥ ಅಂಬಲಗೆಯವರು ಕಲ್ಯಾಣ ಕ್ರಾಂತಿಯ ಸಮಾನತೆಯ ಫಲಕುಗಳನ್ನು ಮೆಲುಕು ಹಾಕುತ್ತ ಬಹುಸಂಸ್ಕತಿಯು ಈ ನಾಡಿನಲ್ಲಿ ಕೋಮುವಾದಕ್ಕೆ ಅವಕಾಶವಿಲ್ಲ. ತಾತ್ವಿಕವಾಗಿ ತುಂಬ ಎತ್ತರದ ಮಟ್ಟದಲ್ಲಿರುವ ಜನಸಾಮಾನ್ಯರು ಕಟ್ಟಿದ ಈ ನಾಡಿನಲ್ಲಿ ಜಾತಿ ಜಗಳಗಳು ಪಲ್ಲವಿಸಲಾರವು ಎಂದರು.

ಕಲ್ಯಾಣದ ಬೆಳಕು

ಅಧ್ಯಕ್ಷತೆ ವಹಿಸಿದ್ದ ಸಂಗಾತಿ ನೀಲಾ.ಕೆ ಅವರು ಮಾತನಾಡುತ್ತ, ಜಗತ್ತಿಗೆ ಸಮಾನತೆಯ ಪಾಠ ಕಲಿಸಿರುವ ಕಾಯಕ ಜೀವಿಗಳ ನಾಡಾದ ಬಸವಕಲ್ಯಾಣದಿಂದ ಬಂದಿರುವ ತಾವು ಮಗದೊಮ್ಮೆ ಕ್ರಾಂತಿ ಕಲ್ಯಾಣದ ಬೆಳಕನ್ನು ಅರಿವಿನ ಪ್ರಕಾಶ ಮೂಡಿಸಲೆಂದು ನಾಡಿನ ಮೂಲೆ ಮೂಲೆಗೂ ಒಯ್ಯುತ್ತಿರುವೆ ಎಂದರು. ಜನತೆಯ ಹಸಿವಿನ ಕುರಿತು ಮಾತಾಡಲು ಬಯಸದ ಜನರು ಧರ್ಮಾಂಧತೆಯನ್ನು ಬಂಡವಾಳ ಮಾಡಿಕೊಳ್ಳುತ್ತಿದ್ದಾರೆ. ಮುಗ್ಧ ಅಮಾಯಕ ಜನತೆ ಇವರ ಬಣ್ಣದ ಮಾತಿಗೆ ಮರುಳಾಗುತ್ತಾರೆ. ಈ ನಿಟ್ಟಿನಲ್ಲಿ ಪ್ರಜ್ಞಾವಂತರು ಸಾಮಾನ್ಯ ಜನತೆಯ


ಪುಟ 15 ಕ್ಕೆ

ಬಸವಕಲ್ಯಾಣದಲ್ಲಿ ಜಾಥಾದಲ್ಲಿ ಭಾಗವಹಿಸಿದ ಜನತೆ



ಗೋಕರ್ಣ ಸೌಹಾರ್ದ ಜಾಥಾ ಉದ್ಘಾಟನಾ ಸಮಾರಂಭದ ಚಿತ್ರ





ವೈದ್ಯ ವೃತ್ತಿಗೆ ತಗಲಿರುವ ಶಾಪಗಳು

ವೈದ್ಯವೃತ್ತಿ ನೂರಾರು ವರ್ಷಗಳಿಂದ ಜನರ ಆರೋಗ್ಯ ಸೇವೆ ಮಾಡುತ್ತಾ ಬಂದಿದೆ. ವೈದ್ಯ ವೃತ್ತಿಯಲ್ಲಿರುವವರು ಖಾಸಗಿ ವೈದ್ಯರೇ ಹೆಚ್ಚು ಸಂಖ್ಯೆಯಲ್ಲಿ. ವೈದ್ಯರೆಂದರೆ ದೇವರಿಗೆ ಸಮಾನ ಎನ್ನುವ ಮನೋಭಾವನೆ ಜನರಲ್ಲಿದೆ. ಆದರೆ ಇತ್ತೀಚಿಗಿನ ದಶಕಗಳಲ್ಲಿ ವೈದ್ಯವೃತ್ತಿ ವ್ಯಾಪಾರೀಕರಣಗೊಳ್ಳುತ್ತಿದೆ. ಜನರು ಈಗೀಗ ಅರ್ಥಮಾಡಿಕೊಳ್ಳುತ್ತಿದ್ದಾರೆ. ಈ ವ್ಯಾಪಾರೀಕರಣ ದಿಂದಾಗಿ ವೈದ್ಯವೃತ್ತಿಯಲ್ಲಿ ಬದಲಾವಣೆಯಾಗುತ್ತಿದೆ. ಜನಸಾಮಾನ್ಯರಿಗೆ ದಿನನಿತ್ಯದ ಆರೋಗ್ಯ ಸಮಸ್ಯೆಗಳಿಗೆ ಸುಲಭವಾದ ಪರಿಹಾರ ಪಡೆಯಲು ಮೊದಲಿನಷ್ಟು ಸುಲಭವಾಗಿಲ್ಲ ಹಾಗೂ ದುಬಾರಿಯಾಗುತ್ತಿದೆ. ಈ ಬದಲಾವಣೆಯಿಂದ ವೈದ್ಯವೃತ್ತಿ ಏಳು ಶಾಪಗಳಿಗೆ ಗುರಿಯಾಗಿದೆ!

ಶಾಪ - 7

ಇತರೇ ಪದ್ಧತಿಯ ಔಷಧಿ ಉಪಯೋಗ

ಯಾವುದೇ ವೈದ್ಯಕೀಯ ಪದ್ಧತಿಯಲ್ಲಿಯೂ ಎಲ್ಲ ಸಮಸ್ಯೆಗಳಿಗೂ ಪರಿಹಾರ ದೊರೆಯುವುದಿಲ್ಲ. ಆಧುನಿಕ ವೈದ್ಯಪದ್ಧತಿಯಲ್ಲಿ ಸಹ ಎಲ್ಲ ಸಮಸ್ಯೆಗೂ ಪರಿಹಾರ ದೊರಕದು. ಇಂತಹ ಸಮಯದಲ್ಲಿ ಆತ್ಮಸಮಾಲೋಚನೆ, ವಾಸ್ತವವನ್ನು ರೋಗಿಗೆ ವಿವರಿಸಿ ರೋಗಿಯನ್ನು ಒಪ್ಪಿಸಲು ಪ್ರಯೋಜಕವಾಗುತ್ತದೆ. ಕೆಲವು ಬಾರಿ ರೋಗಿ ಅರ್ಥ ಮಾಡಿಕೊಳ್ಳುವ ಸ್ಥಿತಿಯಲ್ಲಿರುವುದಿಲ್ಲ ಹಾಗೂ ವೈದ್ಯನಿಗೆ ವಿವರಿಸುವಷ್ಟು ತಾಳ್ಮೆ ಇರುವುದಿಲ್ಲ. ಆಗ ವೈದ್ಯ ರೋಗಿಯನ್ನು ಸಮಾಧಾನ ಪಡಿಸಲು ಕೆಲವು ಚಿಕಿತ್ಸೆ ನೀಡಬೇಕಾಗುತ್ತದೆ. ಇದಕ್ಕೆ placeboಗಳೆನ್ನುತ್ತಾರೆ. ಇದನ್ನು ರೋಗಿಯು ಒಪ್ಪಬಹುದು ಅಥವಾ ಒಪ್ಪದೇ ಇರಬಹುದು.

ಕೆಲವು ಬಾರಿ ವೈದ್ಯರು placebo ಚಿಕಿತ್ಸೆಗಾಗಿ ಇತರೇ ಪದ್ಧತಿಯ ಔಷಧಿಗಳ ಕಂಪನಿಗಳ ಜಾಹೀರಾತಿನಿಂದ ಪ್ರಭಾವಿತರಾಗಿ, ಆ ಔಷಧಿಗಳನ್ನು ಬರೆದುಕೊಡುತ್ತಾರೆ. ಆ ಔಷಧಿ ಬಗ್ಗೆ, ವೈದ್ಯಪದ್ಧತಿ ಬಗ್ಗೆ ತಿಳುವಳಿಕೆ ಇರದಿದ್ದರೂ ಈ ವಿಧಾನ ಮುಂದುವರೆದಿದೆ. ಇದರಿಂದ ಅಪಾಯಗಳಿಲ್ಲದೇ ಇಲ್ಲ. ಇದಕ್ಕೆ ಕಾರಣ ಅಬ್ಬರದ ಪ್ರಚಾರ, ಗಿಡಮೂಲಿಕೆಗಳ ಹಾಗೂ ಆ ಔಷಧಿಗಳಿಗೆ ಅಡ್ಡ ಪರಿಣಾಮವಿಲ್ಲವೆಂಬ ತಪ್ಪು ನಂಬಿಕೆ. ಈ ಪರಿಪಾಠವನ್ನು ಸುಪ್ರಿಂ ಕೋರ್ಟ್ ಬಲವಾಗಿ ಖಂಡಿಸಿದೆ. ಆದರೂ ಇದು ಮುಂದುವರೆದಿದೆ.

ಇದೇ ರೀತಿ ಆಧುನಿಕ ಪದ್ಧತಿಯ ಔಷಧಿಗಳನ್ನು ಇತರೇ ಪದ್ಧತಿಯ ವೈದ್ಯರು ಪ್ರತಿನಿತ್ಯ ಎಲ್ಲ ರೋಗಿಗಳಿಗೆ ಬರೆದುಕೊಡುತ್ತಾರೆ. ಆಧುನಿಕ ಪದ್ಧತಿಯ ಔಷಧಿಗಳು ಬೇಗ ಗುಣ ಮಾಡುತ್ತದೆಂಬ ನಂಬಿಕೆ ಇದಕ್ಕೆ ಕಾರಣ.

ಯಾವ ಪದ್ಧತಿಯ ಚಿಕಿತ್ಸೆ ಬೇಕೆಂದು ರೋಗಿ ತೀರ್ಮಾನಿಸಬೇಕು ಹಾಗೂ ಆ ಪದ್ಧತಿಯನ್ನು ಉಪಯೋಗಿಸುವ ಶಿಕ್ಷಣ ಪಡೆದ ತಜ್ಞ ವೈದ್ಯರಲ್ಲಿ ಹೋದಾಗ ಮಾತ್ರ ಚಿಕಿತ್ಸೆ ಸಮಂಜಸವಾಗಲು ಸಾಧ್ಯ.

ವೈದ್ಯಕೀಯ ಚರ್ಚೆ ಇಲ್ಲಿಗೆ ನಿಲ್ಲುವುದಿಲ್ಲ. ವೈದ್ಯವೃತ್ತಿ ಆತ್ಮಾವಲೋಕನ ಮಾಡಿಕೊಳ್ಳಬೇಕು. ಜನರಲ್ಲಿ ಜಾಗೃತಿ ಮೂಡಬೇಕು. ಈ ಸಮಸ್ಯೆಗಳನ್ನು ಸರಿಪಡಿಸಲು ಕಾನೂನು, ನಿಯಂತ್ರಣದ ಮೂಲಕವೂ ಪ್ರಯತ್ನ ನಡೆಸಬೇಕಾಗಿದೆ. ●

ಹಾನಗಲ್ : ಭೂಮಿ, ರೇಷನ್‌ಕಾರ್ಡ್, ಮನೆ, ಮಾಶಾಸನಕ್ಕಾಗಿ ಮತ ಪ್ರದರ್ಶನ





"ರಸಗೊಬ್ರ ಕೇಳಿದ್ರ ಗುಂಡು ಹಾಕ್ತಾರ್ರೀ! ರೇಷನ್ ಕೇಳಿದ್ರ ಇರ ಕಾರ್ಡ್ ಕಸಗೊಳ್ತಾರ! ಕರೆಂಟ್ ಅಂದ್ರ ಫ್ರೀ ಹೆಸರಲ್ಲಿ ಪರಮನೆಂಟ್ ವಿದ್ಯುತ್ ತಗಿತ್ತಾರ! ಬಡವರು ಮನೆ ಕೇಳಿದ್ರ ದಬಾಯಿಸಿ ಇದ್ದವ್ರಗ ಕೊಟ್ಟರಾ! ಅದೇ ರೀ ಚುನಾವಣ್ಯಾಗ ಹೇಳಿದ್ರಲ್ಲ ನಮ್ಮ ಲಿಂಗಾಯತ ಯಡಿಯೂರಪ್ಪ, 'ಬಿಜೆಪಿನ ಎಲ್ಲದ್ದೂ ಪರಿಹಾರ ಅಂತ, ಇದೇ ನೋಡಿ ಅವರ ಪರಿಹಾರ! ಬಿಜೆಪಿ-ಕಾಂಗ್ರೆಸ್,-ಜೆಡಿ(ಎಸ್) ಯಾರು ಅಧಿಕಾರಕ್ಕೆ ಬಂದ್ರೂ ನಾವ ಬಡವ್ರಗೆ 'ಮುಂಜಲ್ಲೆ ಸತ್ರ ಮಣ್ಣ ಕರ್ಚಿಗಿಲ್ಲಾ - ಸಂಜೆ ಸತ್ರ ಎಣ್ಣೆಗಿಲ್ಲ' ಎಂಬ ಸ್ಥಿತಿ ತಪ್ಪಿದ್ದಲ್ಲ! ಇದು ಕೂಲಿಕಾರ ಪರಸಪ್ಪ ಪ್ರಚಾರಕ್ಕೆ ಹೋದಾಗ ಆಡಿದ ಮಾತುಗಳು. ಇದು ಕೇವಲ ಪರಸಪ್ಪನ ಮಾತು ಮಾತ್ರವಲ್ಲ, ಬಿಜೆಪಿ ಅಧಿಕಾರಕ್ಕೆ ಬಂದ ನಂತರದ ರಾಜ್ಯದ ಶೋಷಿತ ಜನತೆಯ ಎದೆಯಾಳದ ನೋವಿನ ಮಾತಾಗಿದೆ. ಇದರ ಪರಿಹಾರಕ್ಕಾಗಿ ಶ್ರಮಿಸುತ್ತಿರುವ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ, ದೇವದಾಸಿ ವಿಮೋಚನಾ ಸಂಘಗಳ ನೇತೃತ್ವದಲ್ಲಿ ಭೂ ಹೀನ ಕೃಷಿ ಕೂಲಿಕಾರರಿಗೆ, ಭೂಮಿ, ಮನೆ, ರೇಷನ್ ಕಾರ್ಡ್,ಸಾಲ ನೀಡಲು ಆಗ್ರಹಿಸಿ, ದೇವದಾಸಿ(ಜೋಗಮ್ಮ) ಮಹಿಳೆಯರಿಗೆ ಮಾಶಾಸನ ಮುಂತಾದ ಸೌಲಭ್ಯಕ್ಕಾಗಿ, ಜಿಲ್ಲೆಯ ರೈತ ಕೂಲಿಕಾರ-ಹಮಾಲರ ಮೇಲೆ ಹಾಕಲಾದ ಸುಳ್ಳು ಕೇಸ್‌ಗಳ ವಾಪಸ್ಸಾತಿಗಾಗಿ ಒತ್ತಾಯಿಸಿ ಹಾನಗಲ್ ನಗರದಲ್ಲಿ 22.11.08ರಂದು ಬೃಹತ್ ಪ್ರತಿಭಟನಾ ಮೆರವಣಿಗೆ ಮತ್ತು ಮತ ಪ್ರದರ್ಶನವನ್ನು ತಾಲ್ಲೂಕು ಕಛೇರಿ ಮುಂದೆ ಏರ್ಪಡಿಸಲಾಗಿತ್ತು.

ತಾಲ್ಲೂಕಿನ 40ಕ್ಕೂ ಹೆಚ್ಚು ಹಳ್ಳಿಗಳಿಂದ ಸಾವಿರಕ್ಕೂ ಹೆಚ್ಚು ಕೃಷಿ ಕೂಲಿಕಾರರು, ದೇವದಾಸಿ (ಜೋಗಮ್ಮ) ಮಹಿಳೆಯರು, ವಿದ್ಯಾರ್ಥಿ - ಯುವಜನರು ಭಾಗವಹಿಸಿದ್ದರು. ರ್‍ಯಾಲಿಗೆ ಬೆಳಿಗ್ಗೆ 9 ಗಂಟೆಯಿಂದಲೇ ಜನ ಬರಲಾರಂಭಿಸಿದ್ದನ್ನು, ಅವರ ಶಿಸ್ತನ್ನು ಕಂಡು ಜನ ಕುತೂಹಲಗೊಂಡರು. ನಗರದ ಶ್ರೀಕೊಟ್ಟೂರೇಶ್ವರ ಮಠದಿಂದ ಆರಂಭವಾದ ಪ್ರತಿಭಟನೆ ನಗರದ ಬೀದಿಗಳನ್ನು ಹಾಯ್ದು ತಹಶೀಲ್ದಾರರ ಕಛೇರಿ ತಲುಪುತ್ತಿದ್ದಂತೆ ಮತ ಪ್ರದರ್ಶನದ ವೇದಿಕೆಯಾಗಿ ಮಾರ್ಪಟ್ಟಿತು.

ಗುಳೆ ತಪ್ಪಿಸಿ


ವೇದಿಕೆ ಉದ್ದೇಶಿಸಿ ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಬಿ.ಎಸ್.ಸೊಪ್ಪಿನ ಮಾತನಾಡಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ ಅನುಷ್ಠಾನಗೊಳಿಸುವಲ್ಲಿ ಬಿಜೆಪಿ - ಯುಪಿಎ ವಿಫಲವಾಗಿದೆ. ಜಿಲ್ಲೆಯಲ್ಲಿ ಕೃಷಿಕೂಲಿಕಾರರು ಗುಳೆ ಹೋಗುವುದನ್ನು ತಪ್ಪಿಸಬೇಕಾದರೆ, ರೈತ ಸಮುದಾಯಕ್ಕೆ ಕೂಲಿಕಾರರು ದೊರೆಯಬೇಕಾದರೆ ಉದ್ಯೋಗ ಖಾತ್ರಿ ಯೋಜನೆ ಜಾರಿಯಾಗಬೇಕೆಂದರು.

ಹಿರಿಯ ಮುಖಂಡ ಫಕೀರಪ್ಪ ಹೋತನಹಳ್ಳಿ ಮಾತನಾಡಿ ಜಿಲ್ಲೆಯಲ್ಲಿ ಭೂಮಿಗಾಗಿ ಹೋರಾಡಿದ, 53 ನಂಬರ್ ಫಾರಂ ತುಂಬಿದ ಎಲ್ಲ ಕೃಷಿ ಕೂಲಿಕಾರರಿಗೆ ಭೂಮಿ ನೀಡಬೇಕು. ಜಿಲ್ಲೆಯಲ್ಲಿ ಅದಕ್ಕಾಗಿಯೇ 14,990 ಹೆಕ್ಟೇರ್ ಕೃಷಿ ಯೋಗ್ಯ ಭೂಮಿ ಇದ್ದರೂ ನೀಡಿಲ್ಲ ಎಂದರು. ತಾಲ್ಲೂಕಿನ ಶಾಸಕರೂ ಲೋಕೋಪಯೋಗಿ ಸಚಿವರೂ ಆದ ಉದಾಸಿಯವರು ಇಲ್ಲಿವರೆಗೂ ಲ್ಯಾಂಡ್ ಗ್ರಾಂಟ್ ಕಮಿಟಿ ರಚಿಸಿಲ್ಲ ಎಂದು ಟೀಕಿಸಿದ ಅವರು ಮಹಿಳೆ ದೇವದಾಸಿಯಾಗಿ ಬಯಸಿ ಆದದ್ದಲ್ಲಾ. ಅವರು ಮನೆ ಮನೆ ಅಲೆಯುವ ಪದ್ಧತಿ ತಪ್ಪಬೇಕಾದರೆ ಮಾಶಾಸನ ನೀಡಬೇಕೆಂದರು. ರಾಜ್ಯ ಕೂಲಿಕಾರರ ಮುಖಂಡ ಹಕ್ಕಲಗೌಡ ಪಾಟೀಲ ಮಾತನಾಡಿ ಎಲ್ಲರಿಗೂ ರೇಷನ್ ಕಾರ್ಡ್ ನೀಡಿ ಭರವಸೆಯಂತೆ 25 ಕೆ.ಜಿ. ಅಕ್ಕಿ ರೂ.2 ಗೆ 1 ಕೆಜಿ.ಯಂತೆ ನೀಡಿ ಎಂದು ಸವಾಲು ಹಾಕಿದರು.

ಪ್ರಸ್ತಾವಿಕವಾಗಿ ವಿಜಯಕುಮಾರ್‌ದೊಡ್ಡಮನಿ ಮಾತನಾಡಿ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಪವರ್ ಪಾಲಿಟಿಕ್ ಮ್ಯಾನೇಜ್‌ಮೆಂಟ್(ಅಧಿಕಾರ ರಾಜಕೀಯ ನಿರ್ವಹಣೆ)ನಲ್ಲಿ ತೊಡಗಿ ಜನತೆಗೆ ಬೇಕಾದ ಪವರ್ ನೀಡಲು ಸೋತಿದೆ ಎಂದರು, ಕೂಲಿಕಾರರ ಬೇಡಿಕೆಗಳ ಕುರಿತು ಚರ್ಚಿಸಲು ಸಭೆಯನ್ನು ತಹಶೀಲ್ದಾರ್‌ರವರು ಕರೆಯಬೇಕೆಂದು ಆಗ್ರಹಿಸಿದರು. ತಾಲ್ಲೂಕಿನಲ್ಲಿ ಉದ್ಯೋಗ ಖಾತ್ರಿಗಾಗಿ 43.80 ಲಕ್ಷ ರೂ. ಇದ್ದರೂ 40 ಪಂಚಾಯತ್‌ಗಳು ಕೇವಲ 14 ಪಂಚಾಯತ್ ಜಾರಿಗೊಳಿಸಿದರೂ ಕೇವಲ 400 ಜನಕ್ಕೆ ಮಾತ್ರ ಸಂಪೂರ್ಣ ಕೆಲಸ ಕೂಡ ಕೊಡಲು ವಿಫಲವಾಗಿವೆ. ಪರಿಣಾಮ ತಾಲ್ಲೂಕಿನ ಕೂಲಿಕಾರರಲ್ಲಿ ಶೇ.75ರಷ್ಟು ಜನ ಗುಳೆ ಹೋಗುವಂತಾಗಿದೆ ಎಂದರು.

ಮನವಿ ಸ್ವೀಕರಿಸಿದ ತಹಶೀಲ್ದಾರರು ತತ್‌ಕ್ಷಣ ಸಭೆ ಕರೆಯುವ ಭರವಸೆ ನೀಡಿದರು. ಕಾರ್ಯಕ್ರಮಕ್ಕೆ ಒಂದು ತಿಂಗಳ ಕಾಲ 40 ಹಳ್ಳಿಗಳಿಗೆ 3000 ಕರಪತ್ರ ಹಂಚಿ ಪ್ರಚಾರ ಮಾಡಲಾಗಿತ್ತು. ನೇತೃತ್ವವನ್ನು ಸಿ.ಎಂ.ಪಾಟೀಲ್, ತಿರುಕಪ್ಪ ಬಾರ್ಕಿ, ಈಳಿಗೇರ, ತಾರಾಬಾಯಿ ಪಾಟೀಲ್ ಮುಂತಾದವರು ವಹಿಸಿದ್ದರು.

ವರದಿ: ವಿಜಯಕುಮಾರ್ ದೊಡ್ಡಮನಿ



..........ದುಡಿಮೆಗಾರ ಜನಗಳು

ಪುಟ 7 ರಿಂದ

ರ್ಮಿಸುತ್ತಿದ್ದಾರೆ. ಆದ್ದರಿಂದ ಪ್ರಭುತ್ವ ವಿಫಲವಾಗಿದೆ ಅಥವಾ ಇನ್ನೇನು ವಿಫಲವಾಗಲಿದೆ ಎಂಬ ವಾದ ಒಂದು ಹಿಂಸಾತ್ಮಕ ಮಧ್ಯಪ್ರವೇಶವನ್ನು ಸಮರ್ಥಿಸುತ್ತದಷ್ಟೇ. ಸಹಜವಾಗಿಯೇ ಅದು ಒಂದು ಹಿಂಸಾತ್ಮಕ ಆಳ್ವಿಕೆಯನ್ನು ತರುತ್ತದೆ. ಭಯೋತ್ಪಾದನೆ, ಅದು ಮತೀಯವಾಗಿರಲಿ ಅಥವಾ ರಾಜಕೀಯಾತ್ಮಕವಾಗಿರಲಿ, ಇಂತಹುದೇ ಪ್ರತಿಕ್ರಿಯೆಗೆ ಆಸ್ಪದ ನೀಡುತ್ತದೆ. ಇದು ಜನಗಳ ಹಿತದೃಷ್ಟಿ ಹೊಂದಿರುವುದಿಲ್ಲ. ಆದ್ದರಿಂದಲೇ ಮುಂಬೈ ಭಯೋತ್ಪಾದಕ ದಾಳಿಗಳು ಒಂದು ರಾಜಕೀಯ-ವಿರೋಧಿ ಮತ್ತು ಸಂಸದೀಯ-ವಿರೋಧಿ ಬೊಬ್ಬೆಯನ್ನು ಎಬ್ಬಿಸಿದೆ. ವಾಸ್ತವವಾಗಿ ಇದು ಯಾವುದೇ ಸಂದರ್ಭವನ್ನು ಎದುರಿಸಲು ಹಿಂಸಾಚಾರದ ಸಂಸ್ಥೆಗಳನ್ನು ನಿರ್ಮಿಸಬೇಕು ಎಂಬ ಒಂದು ಸ್ಪಂದನವೇ ಆಗಿದೆ.

ಜಾಡ್ಯಗಳನ್ನು ಗುರುತಿಸಬೇಕು.

ಸಂಸತ್ತಿನಲ್ಲಿನ ಚರ್ಚೆಗಳು ಮತ್ತು ಮಾಧ್ಯಮಗಳಲ್ಲಿನ ಹಲವು ವಿಶ್ಲೇಷಣೆಗಳು ವಾಸ್ತವವಾಗಿ ಮಿಲಿಟರಿ ಮತ್ತು ಕಮಾಂಡೋಗಳ ವಿಫಲತೆಗಳನ್ನೂ ತೋರಿಸಿವೆ. ಒಂದು ಭಯೋತ್ಪಾದಕರಿದ್ದ ಹಡಗು ಹೋಗುತ್ತಿದೆ ಎಂಬ ಮಾಹಿತಿಯನ್ನು ನೌಕಾಪಡೆಗೆ ನೀಡಲಾಗಿತ್ತು, ಆದರೆ ಆ ಹಡಗು ಪಾಕಿಸ್ತಾನೀ ಜಲಪ್ರದೇಶದಲ್ಲಿ ಇದೆ ಎಂಬ ತರ್ಕ ಹೂಡಿ ಅದನ್ನು ತಡೆಯಲಿಲ್ಲ ಎಂದು ವಿದೇಶಾಂಗ ಮಂತ್ರಿಗಳು ಸಂಸತ್ತಿಗೆ ಹೇಳಿದ್ದಾರೆ. ಅದೇ ರೀತಿ ದಿ ಹಿಂದೂ' ಪತ್ರಿಕೆಯಲ್ಲಿ ಡಿಸೆಂಬರ್ 12ರಂದು ಪ್ರಕಟವಾಗಿರುವ ಪ್ರವೀಣ್ ಸ್ವಾಮಿಯವರ ಲೇಖನ ಮುಂಬೈಯಲ್ಲಿ ನವೆಂಬರ್ 26-28ರಲ್ಲಿ ಎದುರಿಸಬೇಕಾಗಿ ಬಂದ ಪರಿಸ್ಥಿತಿಯನ್ನು ಎದುರಿಸುವ ತರಬೇತಿ ಅಥವಾ ಸನ್ನದ್ಧತೆ ಎನ್‌ಎಸ್‌ಜಿ (ರಾಷ್ಟ್ರೀಯ ಭದ್ರತಾ ಪಡೆ)ಗೆ ಇರಲಿಲ್ಲ ಎಂದು ವಿಶ್ಲೇಷಿಸಿದೆ. ಇದು ಕೇವಲ ಗಣ್ಯವ್ಯಕ್ತಿಗಳನ್ನು ಕಾಯಲು ನಿರ್ಮಿಸಿದ ಪಡೆಯಷ್ಟೇ. ಕಮಾಂಡೋಗಳಿಗೆ ಸರಿಯಾದ ಗುಂಡು-ನಿರೋಧಕ ಶಿರಸ್ತ್ರಾಣಗಳು ಎದೆ ಕವಚಗಳು ಇರಲಿಲ್ಲ, ಸರಿಯಾದ ತರಬೇತಿಯೂ ಇರಲಿಲ್ಲ ಎಂದು ಅವರು ಹೇಳುತ್ತಾರೆ. ಇವೆಲ್ಲ ವಾಸ್ತವವಾಗಿ ನಾವು ಯಾವ ತಂತ್ರವನ್ನು ಅವಲಂಬಿಸಬೇಕಾಗಿತ್ತೋ ಅದರ ದೌರ್ಬಲ್ಯಗಳನ್ನು ಬಹಿರಂಗ ಪಡಿಸುತ್ತದೆ. ಇನ್ನು ಹಲವು ವರದಿಗಳ ಪ್ರಕಾರ ಪೋಲೀಸರು ವಿಫಲರಾಗಿದ್ದಾರೆ. ಅವರಿಗೆ ಹೋಲಿಸಿದರೆ ಮಿಲಿಟರಿ ಯಶಸ್ವಿಯಾಗಿದೆ. ಇದು ರಾಜಕಾರಣಿಗಳ ಆದೇಶದಂತೆ ನಡೆಯಬೇಕಾದ ಪೋಲೀಸ್ ಪಡೆ ಹೇಗೆ ಭ್ರಷ್ಟ ಮತ್ತು ಅದಕ್ಷವಾಗಿದೆ, ಸಾಮಾನ್ಯವಾಗಿ ತಮ್ಮ ಸೇನಾ ಶಿಬಿರಗಳಿಗೇ ಸೀಮಿತವಾಗಿರುವ ಮಿಲಿಟರಿ ಹೋಲಿಕೆಯಲ್ಲಿ ಹೆಚ್ಚು ದಕ್ಷವಾಗಿದೆ ಎಂಬುದನ್ನೂ ತೋರಿಸುತ್ತದೆ. ಇದು ಈಗಿನ ಸನ್ನಿವೇಶ. ಆದರೆ ಒಂದು ಸರ್ವಾಧಿಕಾರಶಾಹಿ/ ಮಿಲಿಟರಿ ಆಳ್ವಿಕೆಯಲ್ಲಿ ಮಿಲಿಟರಿಯು ಆಳುವ ವರ್ಗಗಳ ಪ್ರಭಾವಕ್ಕೆ ಒಳಗಾಗಿ ಈಗಿನ ಸಾಮಾನ್ಯ ಪೋಲೀಸ್ ಪಡೆಗಿಂತಲೂ ಹೆಚ್ಚು ಭ್ರಷ್ಟವಾಗುತ್ತದೆ, ಏಕೆಂದರೆ ಅದು ಆಗ ಯಾರಿಗೂ ಉತ್ತರ ಹೇಳಬೇಕಾಗಿಲ್ಲ. ಇದೇ ಈ ಸನ್ನಿವೇಶದಲ್ಲಿನ ಅನಪೇಕ್ಷಣೀಯ ಅಂಶ.

ದೂಷಣೆ ಸಲ್ಲ

ರಾಜಕಾರಣಿಗಳನ್ನು ಅಥವಾ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ದೂಷಿಸುವ ಬದಲು ನಾವು



ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ಬಲಪಡಿಸುವ ಬಗ್ಗೆ ಗಮನ ನೀಡಬೇಕು, ಅವನ್ನು ದುರ್ಬಲಗೊಳಿಸುವ ಬಗ್ಗೆ ಅಲ್ಲ. ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಅದನ್ನು ಬಾಧಿಸುತ್ತಿರುವ ಜಾಡ್ಯಗಳನ್ನು ಪತ್ತೆ ಹಚ್ಚಿ ಅವನ್ನು ನಿವಾರಿಸದೆ ಬಲಪಡಿಸಲು ಸಾಧ್ಯವಿಲ್ಲ. ಮೊದಲನೆಯದಾಗಿ, ಚುನಾವಣಾ ವ್ಯವಸ್ಥೆ ಜನಗಳ ನಿಜವಾದ ಹಿತಾಸಕ್ತಿಗಳಿಗೆ ಎಷ್ಟೊಂದು ವಿರುದ್ಧವಾಗಿದೆ. ಅದು ಜಾತಿ, ಕೋಮು ಮತ್ತು ರಾಜಕೀಯ ಪ್ರಭಾವದ ಹೆಸರಿನಲ್ಲಿ ಕೆಲಸ ಮಾಡುವ ಪಟ್ಟಭದ್ರ ಹಿತಾಸಕ್ತಿಗಳ ಪ್ರಾಬಲ್ಯದಲ್ಲಿ ಇದೆ ಎಂಬುದು ಸ್ಪಷ್ಟ. ಸುಳ್ಳು ಭರವಸೆಗಳನ್ನು ಕೊಡಲಾಗುತ್ತದೆ, ಇಂತಹ ಸುಳ್ಳು ಭರವಸೆಗಳಿಗೆ ಯಾರೂ ಜವಾಬುದಾರರಾಗುವುದಿಲ್ಲ. ಹಣ ಪ್ರವಾಹದಂತೆ ಹರಿಯುತ್ತದೆ, ಪ್ರತಿಯೊಬ್ಬರೂ ಅದರಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಬಾಚಿಕೊಳ್ಳಲು ಪ್ರಯತ್ನಿಸುತ್ತಾರೆ. ವಾಸ್ತವವಾಗಿ ಮೊದಲು ರೇಖೆ ದಾಟಿದವ ಗೆದ್ದ ಎಂಬಂತಹ ವ್ಯವಸ್ಥೆಯಲ್ಲಿ ಸಮಸ್ತ ಜನಗಳೂ ಭ್ರಷ್ಟರಾಗುತ್ತಾರೆ. ಕೆಲವೊಮ್ಮೆ ಭಾರೀ ಬಹುಮತವನ್ನು ಗೆದ್ದುಕೊಂಡ ಪಕ್ಷಕ್ಕೆ ಸಿಕ್ಕಿರುವ ಮತಗಳ ಪ್ರಮಾಣ ಬಹಳ ಕಡಿಮೆಯಿರುತ್ತದೆ. ಅನುಪಾತಿಕ ಪ್ರಾತಿನಿಧ್ಯ ವ್ಯವಸ್ಥೆಯನ್ನು ಅಂಗೀಕರಿಸಿದರೆ ಸಂಸತ್ತು/ವಿಧಾನ ಸಭೆಗಳಲ್ಲಿ ಪಕ್ಷಗಳು ತಾವು ಎಷ್ಟು ಮತಗಳನ್ನು ಪಡೆದಿವೆಯೋ ಅದೇ ಪ್ರಮಾಣದಲ್ಲಿ ಸ್ಥಾನಗಳನ್ನು ಪಡೆಯುತ್ತವೆ. ಪ್ರತಿಯೊಂದು ರಾಜಕೀಯ ಪಕ್ಷವೂ ತನ್ನ ಧೋರಣೆಗಳು ಮತ್ತು ಕಾರ್ಯಕ್ರಮದ ಆಧಾರದಲ್ಲಿ ದೇಶಾದ್ಯಂತ ಮತದಾರರ ಬಳಿಗೆ ಹೋಗಬಹುದು. ಅವುಗಳು ಪಡೆಯುವ ಮತಗಳ ಪ್ರಮಾಣದಲ್ಲಿ ಅವು ಸಂಸತ್ತಿನಲ್ಲಿ ಸೀಟುಗಳನ್ನು ಪಡೆಯುತ್ತವೆ. ಈ ಪದ್ಧತಿ ಹಣದ ಶಕ್ತಿಯನ್ನು ತಗ್ಗಿಸ ಬಲ್ಲುದು ಮತ್ತು ಜಾತಿ/ ಕೋಮು ಆಟಗಳನ್ನೂ ಸ್ವಲ್ಪ ಮಟ್ಟಿಗೆ ತಗ್ಗಿಸಬಹುದು.

ಪ್ರಜಾಪ್ರಭುತ್ವ ಹೋರಾಟದ ಜೀವಾಳ

ನಾವು ಕಾನೂನಿನ ಆಳ್ವಿಕೆಯನ್ನು ಸ್ಥಾಪಿಸಬೇಕು, ಈಗ ಕಾಣುತ್ತಿರುವಂತೆ ವ್ಯಕ್ತಿಗಳ ಆಳ್ವಿಕೆಯನ್ನಲ್ಲ. ಜನಗಳು ರಾಜಕಾರಣಿಗಳನ್ನು ದ್ವೇಷಿಸುವುದು ಇದಕ್ಕಾಗಿಯೇ. ಕಾನೂನಿನ ಬದಲು ರಾಜಕಾರಣಿಗಳು ಆಳುತ್ತಾರೆ. ಕಾನೂನು ರಚಿಸುವವರು ಎಂದು ಹೇಳಿಕೊಳ್ಳುವವರೇ ಕಾನೂನು ಮುರುಕರಾಗಿರುವುದು ಜನರ ಅನುಭವ. ಸಂಸತ್ತಿನಲ್ಲಿ/ ವಿಧಾನಸಭೆಗಳಲ್ಲಿ ಸೀಮಿತ ಚರ್ಚೆಗಳು ಮತ್ತು ಮಧ್ಯಪ್ರವೇಶ ಗಳನ್ನು ಬಿಟ್ಟರೆ ಜನಗಳಿಗೆ ಜವಾಬುದಾರರಾಗಬೇಕಾದ ಒಂದು ವ್ಯವಸ್ಥೆ ಇಲ್ಲ. ನಮ್ಮ ವ್ಯವಸ್ಥೆಯಲ್ಲಿನ ಈ ನ್ಯೂನ್ಯತೆಗಳನ್ನು ಹೋಗಲಾಡಿಸ ಬೇಕಾಗಿದೆ. ಸಂಸದೀಯ ಪ್ರಜಾ ಪ್ರಭುತ್ವ ಅದನ್ನು ಆಳುವ ವರ್ಗಗಳು ದುರುಪಯೋಗಪಡಿಸಿಕೊಳ್ಳುವುದರಿಂದ ವಿಫಲ ವಾಗುತ್ತದೆ. ಪ್ರತಿ ಬಾರಿ ಚುನಾವಣೆ ನಡೆದಾಗಲೂ ಅದೇ ರಾಜಕಾರಣಿಗಳು ವಿವಿಧ ಪಕ್ಷಗಳ ಮುಂದೆ ಟಿಕೇಟಿಗೆ ಸಾಲುಗಟ್ಟುತ್ತಾರೆ , ನಂತರ ಯಾವ ಪಕ್ಷ ಅವರಿಗೆ ಸೀಟು ಕೊಡುತ್ತದೋ ಅದರ ಹೆಸರಿನಲ್ಲಿ ಕಣಕ್ಕಿಳಿಯುತ್ತಾರೆ. ಆ ಮೇಲೆ ಸ್ಪಷ್ಟ ಬಹುಮತ ಗಳಿಸಲಾರದ ಪಕ್ಷವನ್ನು ಬಿಡುತ್ತಾರೆ , ಯಶಸ್ವಿಯಾದ, ಅಧಿಕಾರ ಪಡೆದ ಪಕ್ಷಕ್ಕೆ ಹಾರುತ್ತಾರೆ. ಅಧಿಕಾರದ ಬಳಿಯಿದ್ದರೆ ಮಾತ್ರವೇ ಅವರ ವರ್ಗ ಹಿತಾಸಕ್ತಿಗಳು ಈಡೇರಲು ಸಾಧ್ಯ. ಜನಗಳು ಅಂತಹ ರಾಜಕಾರಣಿಗಳನ್ನು ಬೆಂಬಲಿಸಿ ಅವರೊಂದಿಗೆ ಪಕ್ಷಾಂತರ ಹೊಂದಿದರೂ, ಈ ರಾಜಕಾರಣಿಗಳು ಆ ಜನಗಳ ಕಣ್ಣಲ್ಲಿ ಯಾವುದೇ ನೀತಿಗಳಿಲ್ಲದ ವ್ಯಕ್ತಿಗಳೆಂದು ಬಯಲಾಗುತ್ತಾರೆ. ಈ ವ್ಯವಸ್ಥೆಯನ್ನು ಬದಲಿಸದೆ ಸಂಸದೀಯ ಪ್ರಜಾಪ್ರಭುತ್ವ ಬದುಕುಳಿಯದು.

ದುಡಿಯುವ ವರ್ಗಕ್ಕೆ ಪ್ರಜಾಪ್ರಭುತ್ವ ಬೇಕು

ಆಳುವ ವರ್ಗಗಳ ಹಿತಾಸಕ್ತಿಗಳಿಗೆ ವಿರುದ್ಧವಾಗಿ ಶೋಷಿತ ವರ್ಗಗಳಿಗೆ, ಬಹುಪಾಲು ಜನರಿಗೆ ಪ್ರಜಾಪ್ರಭುತ್ವ ಬೇಕು. ಸಂಘಗಳನ್ನು ರಚಿಸಿಕೊಳ್ಳಲು, ಅವನ್ನು ಸೇರಿಕೊಳ್ಳಲು, ಮೆರವಣಿಗೆ ನಡೆಸಲು, ಪ್ರತಿಭಟನಾ ಪ್ರದರ್ಶನಗಳನ್ನು ನಡೆಸಲು, ಕರಪತ್ರಗಳನ್ನು ಹಂಚಲು, ಸಭೆಗಳನ್ನು ನಡೆಸಲು ಅವರಿಗೆ ಪ್ರಜಾಪ್ರಭುತ್ವ ಬೇಕು. ಶೋಷಿತ ವರ್ಗಗಳಿಗೆ ಈ ಹಕ್ಕುಗಳನ್ನು ನಿರಾಕರಿಸಬೇಕು ಎಂಬುದು ಆಳುವ ವರ್ಗಗಳ ಬಯಕೆ. ಕಾನೂನಿನ ಆಳ್ವಿಕೆಗೆ ತಲೆಬಾಗಲು ಆಳುವ ವರ್ಗಗಳು ಸಿದ್ಧವಿಲ್ಲ. ಆದ್ದರಿಂದ ಅವು ಕಾನೂನೇತರ ಅಧಿಕಾರಗಳನ್ನು ವಹಿಸಿಕೊಳ್ಳುತ್ತವೆ, ಈ ಮೂಲಕ ಸರ್ವಾಧಿಕಾರಶಾಹೀ ಆಳ್ವಿಕೆಯನ್ನು/ ನಿಯಮಾವಳಿಗಳನ್ನು ರಚಿಸುತ್ತವೆ, ಜಾರಿಗೆ ತರುತ್ತವೆ.

ಪ್ರಜಾಪ್ರಭುತ್ವಕ್ಕಾಗಿ ಶೋಷಿತ ವರ್ಗಗಳ ಹೋರಾಟವನ್ನು ಇತಿಹಾಸದಾದ್ಯಂತ ಕಾಣುತ್ತೇವೆ. ಸದ್ಯಕ್ಕೆ ದುಡಿಯುವ ಜನಗಳು ತಮ್ಮ ಹಕ್ಕುಗಳನ್ನು, ಉದ್ಯೋಗದ ಹಕ್ಕುಗಳನ್ನು, ಅವುಗಳ ರಕ್ಷಣೆಯ ಹಕ್ಕುಗಳನ್ನು ಉಳಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಈ ಹಿಂದೆ ಈ ಸ್ಥಿತಿ ಇರಲಿಲ್ಲ. ಭಾರತದಲ್ಲಿ ತೋಟ ಕಾರ್ಮಿಕರು ಹತ್ತೊಂಭತ್ತನೇ ಶತಮಾನದಲ್ಲಿ, ಇಪ್ಪತ್ತನೇ ಶತಮಾನದ ಆರಂಭದಲ್ಲಿ ತಮ್ಮನ್ನು ಜೀತಕ್ಕೆ ನೂಕುವುದರಿಂದ ತಪ್ಪಿಸಿಕೊಳ್ಳುವ, ಓಡಿಹೋಗುವ ಸ್ವಾತಂತ್ರ ?ಕ್ಕಾಗಿ ಹೋರಾಡಿದರು. ದಾಸ್ಯದಿಂದ ತಪ್ಪಿಸಿಕೊಳ್ಳುವುದು ಇತಿಹಾಸದಾದ್ಯಂತ ಶ್ರಮಿಕರ ಆಯುಧವಾಗಿ ಕಾಣುತ್ತದೆ. ಪ್ರಜಾಪ್ರಭುತ್ವವಿಲ್ಲದೆ ತಾವು ಬದುಕುವಂತಿಲ್ಲ ಎಂಬುದನ್ನು ಅವರು ಕಲಿತಿದ್ದಾರೆ. ಕಾರ್ಮಿಕ ವರ್ಗದ ಇತಿಹಾಸವೆಂದರೆ ಕಾರ್ಮಿಕರನ್ನು ಕೆಲಸ ಮಾಡುವಂತೆ ಬಲವಂತ ಮಾಡುವ ಕಾನೂನುಬಾಹಿರ ಪರಿಸ್ಥಿತಿಗಳಿಂದ ಮತ್ತು ಅವರ ಶ್ರಮದ ಫಲಗಳನ್ನು ಅವರಿಂದ ಕಿತ್ತುಕೊಳ್ಳುವ ಪರಿಸ್ಥಿತಿಗಳಿಂದ ಸ್ವಾತಂತ್ರ್ಯ ಪಡೆಯಲು ಮಾಡಿದ ನಿರಂತರ ಪ್ರಯತ್ನಗಳ ಇತಿಹಾಸ. ಗುಲಾಮರು, ಜೀತದಾಳುಗಳು, ಊಳಿಗದವರಾಗಿದ್ದವರು ದುಡಿಯುವ ಜನಗಳಾಗಿ ವಿಕಾಸಗೊಂಡುದೇ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ಒಂದು ನಿರಂತರ ಹೋರಾಟ. ಇದರಿಂದಾಗಿಯೇ ದುಡಿಯುವ ಜನಗಳು ರಾಷ್ಟ್ರೀಯ ಆಂದೋಲನವನ್ನು ಸೇರುವಂತಾದುದು, ತಮ್ಮ ಹಕ್ಕುಗಳನ್ನು ಎತ್ತಿ ಹಿಡಿಯುವಂತಾದದ್ದು. ಇದು ಅವರು ಪ್ರಜಾಪ್ರಭುತ್ವಕ್ಕಾಗಿ ಹೋರಾಡುವಂತೆ ಮಾಡಿದೆ. ಇದು ಅವರು ಕೋಮುವಾದದ ವಿರುದ್ಧ, ಭಯೋತ್ಪಾದನೆಯ ವಿರುದ್ಧ ಮತ್ತು ಜನಗಳ ದಮನದ ಎಲ್ಲ ಸ್ವರೂಪಗಳ ವಿರುದ್ಧ ಹೋರಾಡುವಂತೆ ಮಾಡಿದೆ.

ದುಡಿಯುವ ಜನಗಳಿಗೆ ಸಹಜವಾಗಿಯೇ ತಮ್ಮ ವರ್ಗಗಳ ಐಕ್ಯತೆ ಬೇಕು, ಶೋಷಿತರನ್ನು ಬಿಟ್ಟು ಬೇರೆಲ್ಲಾ ಜನಗಳ ಐಕ್ಯತೆ ಬೇಕು. ದುಡಿಯುವ ಜನಗಳಿಗೆ ಪ್ರಜಾಪ್ರಭುತ್ವ ಬೇಕು. ಅದಿಲ್ಲದೆ ಅವರ ಸಂಘಟನೆಗಳನ್ನು ಉಳಿಸಿಕೊಳ್ಳುವುದು ಸಾಧ್ಯವಿಲ್ಲ. ಆದ್ದರಿಂದ ಅವರು ಸರ್ವಾಧಿಕಾರಶಾಹಿಯ ವಿರುದ್ಧ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಡಲು ತಮ್ಮನ್ನು ಅರ್ಪಿಸಿಕೊಳ್ಳುತ್ತಾರೆ.

ಇಂತಹ ಸಂದರ್ಭಗಳಲ್ಲಿ ಕಾರ್ಮಿಕ ವರ್ಗದ ಪಕ್ಷ ತನ್ನ ಶಕ್ತಿ ಸೀಮಿತವಾಗಿದ್ದರೂ ಭಯೋತ್ಪಾದನೆ ಮತ್ತು ಕೋಮುವಾದದ ವಿರುದ್ಧ ಪ್ರಚಾರಾಂದೋಲನಕ್ಕೆ ಇಳಿದಿದೆ.

ಈ ಮೂಲಕ ಈ ನಾಲ್ಕು ಜಾಥಾಗಳನ್ನು ನಡೆಸಿ ಅದರ ಕೊನೆಯಲ್ಲಿ ಬೆಂಗಳೂರಿನಲ್ಲಿ 23 ಡಿಸೆಂಬರ್ 2008 ರಂದು ಒಂದು ರಾಜ್ಯ ಮಟ್ಟದ ರ್‍ಯಾಲಿಯನ್ನು ನಡೆಸುತ್ತಿದೆ. ಇದರಲ್ಲಿ ಪಕ್ಷ ಕೋಮುವಾದ ಮತ್ತು ಭಯೋತ್ಪಾದನೆಯ ವಿರುದ್ಧ ಹೋರಾಟಕ್ಕೆ ಬದ್ಧರಾದ, ನಿಸ್ಸಂದೇಹವಾಗಿಯೂ ನಮ್ಮ ರಾಜಕೀಯ ವ್ಯವಸ್ಥೆಯಲ್ಲಿ ಜಾತ್ಯಾತೀತತೆ ಮತ್ತು ಪ್ರಜಾಪ್ರಭುತ್ವಕ್ಕೆ ಬದ್ಧರಾದ ಎಲ್ಲಾ ಜನಗಳ ಸಹಕಾರವನ್ನು ಕೋರುತ್ತದೆ. ಹೀಗೆ ರಾಜಕೀಯ ಪ್ರಕ್ರಿಯೆಯನ್ನೇ ದೂರುವ ಬದಲು ಪ್ರಜಾಪ್ರಭುತ್ವವನ್ನು ಬಲಪಡಿಸಲಿಕ್ಕಾಗಿ ಈ ಆಂದೋಲನವನ್ನು ಆರಂಭಿಸಿದ್ದೇವೆ. ●

ಜಗದಗಲ


ಶರತ್‌ಚಂದ್ರ

ದಕ್ಷಿಣ ಆಫ್ರಿಕಾ ಕಮ್ಯೂನಿಸ್ಟ್ ಪಕ್ಷದ 'ಕೆಂಪು ಅಕ್ಟೋಬರ್' ಆಚರಣ

ಈ ಅಕ್ಟೋಬರ್‌ನಲ್ಲಿ ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ 'ಕೆಂಪು ಅಕ್ಟೋಬರ್' ಆಚರಣೆಯನ್ನು ದೇಶದ ತುಂಬಾ ನಡೆಸಿತು. ಪ್ರತೀ ವರ್ಷ ಅಕ್ಟೋಬರ್‌ನಲ್ಲಿ ಕಮ್ಯುನಿಸ್ಟ್ ಪಕ್ಷ 'ಕೆಂಪು ಅಕ್ಟೋಬರ್' ಆಚರಣೆ ನಡೆಸುತ್ತದೆ. ಈ ಆಚರಣೆಯಲ್ಲಿ ಒಂದು ಅಥವಾ ಎರಡು ವಿಷಯಗಳ ಬಗ್ಗೆ ದೇಶದ ತುಂಬಾ ತೀವ್ರ ಪ್ರಚಾರ-ಪ್ರಕ್ಷೋಭೆ ನಡೆಸುತ್ತದೆ. ಈ ವರ್ಷ ಸ್ಥಳೀಯ ಸಮಿತಿಗಳನ್ನು ರಚಿಸುವುದು ಮತ್ತು ಸ್ಥಳೀಯ ಆಡಳಿತದಲ್ಲಿ ಅವು ಸಕ್ರಿಯವಾಗಿ ಹಾಗೂ ಸಮರ್ಥವಾಗಿ ಭಾಗವಹಿಸುವಂತೆ ಮಾಡುವುದರ ಮೇಲೆ ಒತ್ತು ಇತ್ತು. ಇದರ ಮುನ್ನ ಎರಡು ತಿಂಗಳ ಕಾಲ 'ಕೆಂಪು ವೇದಿಕೆ' ಗಳನ್ನು ನಡೆಸಿ ಬೀದಿ, ಗ್ರಾಮ ಮತ್ತು ಬ್ಲಾಕ್ ಮಟ್ಟದ ಸಮಿತಿಗಳನ್ನು ರಚಿಸಲಾಯಿತು. ಇದೇ ಮೇ ನಲ್ಲಿ ತ್ರಿಪಕ್ಷೀಯ ಕೂಟ (ಕಮ್ಯುನಿಸ್ಟ್ ಪಕ್ಷ, ಕೊಸಾಟು ಎಂಬ ಟ್ರೇಡ್ ಯೂನಿಯನ್ ಮತ್ತು ಎ.ಎನ್.ಸಿ.) ದ ಸಭೆಯಲ್ಲಿ ನಿರ್ಧರಿಸಲಾದ ಆದ್ಯತೆಯ ನೀತಿಗಳನ್ನು ಈ ವೇದಿಕೆಗಳಲ್ಲಿ ತಿಳಿಸಲಾಯಿತು.

ಉತ್ತಮ ಉದ್ಯೋಗ ಮತ್ತು ಜೀವನೋಪಾಯಗಳ ರಕ್ಷಣೆಗಾಗಿ, ಹರಡುತ್ತಿರುವ ಅಪರಾಧಗಳ ವಿರುದ್ಧ, ಆರೋಗ್ಯ, ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿಗೆ ಆದ್ಯತೆಗಾಗಿ, ಆಹಾರ ಉತ್ಪಾದನೆ ಮತ್ತು ಭದ್ರತೆಗೆ ಪೂರಕವಾಗುವ ಭೂಮಿ ಮತ್ತು ಕೃಷಿ ಬದಲಾವಣೆಗಳಿಗಾಗಿ - ಹೋರಾಡುವ ಅಗತ್ಯ ವಿವರಿಸಲಾಯಿತು. ಇದಲ್ಲದೆ 2009 ಚುನಾವಣೆಯಲ್ಲಿ ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್‌ನ್ನು ಗೆಲ್ಲಿಸಲು ಮತ್ತು '2008 ಭಿನ್ನಮತೀಯ'ರನ್ನು ಸೋಲಿಸಲೂ ಕರೆ ಕೊಡಲಾಯಿತು. ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ 2009 ರ ಚುನಾವಣೆಯಲ್ಲಿ ಸಂಪೂರ್ಣ ಬದಲಾದ ರೀತಿಯಲ್ಲಿ ಕೆಲಸ ಮಾಡುವ ತ್ರಿಪಕ್ಷೀಯ ಕೂಟದ ಆಧಾರದ ಮೇಲೆ ಎ.ಎನ್.ಸಿ. ಗೆ ಬೆಂಬಲ ನೀಡಿದೆ. ಚುನಾವಣಾ ಘೋಷಣೆ ಮುಂತಾದ ವಿಷಯಗಳ ಬಗ್ಗೆ ತ್ರಿಪಕ್ಷೀಯ ಕೂಟ ಸಂಪೂರ್ಣ ಬದಲಾದ ರೀತಿಯಲ್ಲಿ ಕೆಲಸ ಮಾಡಲಿದೆ.

'2008 ಭಿನ್ನಮತೀಯ'ರು ಯಾರು ಎಂದು ತಿಳಿಯ ಬೇಕಾದರೆ ದಕ್ಷಿಣ ಆಫ್ರಿಕಾದ ಇತ್ತೀಚಿನ ರಾಜಕೀಯ ಬೆಳವಣಿಗೆ ಅರಿಯಬೇಕು. ಆಫ್ರಿಕನ್ ನ್ಯಾಶನಲ್ ಕಾಂಗ್ರೆಸ್ (ಎ.ಎನ್.ಸಿ.) ದಕ್ಷಿಣ ಆಫ್ರಿಕಾದ ವರ್ಣಭೇದ-ವಿರೋಧಿ ಹೋರಾಟದ ಸಾಮಾನ್ಯ ವೇದಿಕೆಯಾಗಿತ್ತು. ದಕ್ಷಿಣ ಆಫ್ರಿಕಾದ ಕಮ್ಯೂನಿಸ್ಟ್ ಪಕ್ಷದ ಸದಸ್ಯರು ಸಹ ಎ.ಎನ್.ಸಿ.ಯಲ್ಲಿ ಕೆಲಸ ಮಾಡುತ್ತಿದ್ದರು. ಅಲ್ಲದೆ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದಲ್ಲಿದ್ದ (ಕೊಸಾಟು - ದಕ್ಷಿಣ ಆಫ್ರಿಕಾದ ಟ್ರೇಡ್ ಯೂನಿಯನ್‌ಗಳ ಕಾನ್ಫೆಡರೇಶನ್) ಸದಸ್ಯರು ಸಹ ಎ.ಎನ್.ಸಿ.ಯ ಕಾರ್ಯಕ್ರಮದಲ್ಲಿ ದೊಡ್ಡ ರೀತಿಯಲ್ಲಿ ಭಾಗವಹಿಸುತ್ತಿದ್ದರು. ಈ ಮೂರು ಸಂಘಟನೆಗಳ ಕೂಟವನ್ನೇ ತ್ರಿಪಕ್ಷೀಯ ಕೂಟ ಎನ್ನುವುದು. ದಕ್ಷಿಣ



ಜುಮಾ ಪರ ಸಿಪಿಎಸಿ ರ್‍ಯಾಲಿ - 2007

ಆಫ್ರಿಕಾದ ವರ್ಣಭೇದ-ವಿರೋಧಿ ಹೋರಾಟದ ವಿಜಯದಲ್ಲಿ ಈ ತ್ರಿಪಕ್ಷೀಯ ಕೂಟ ಮಹತ್ವದ ಪಾತ್ರ ವಹಿಸಿದೆ. ವಿಜಯದ ನಂತರವೂ ಈ ತ್ರಿಪಕ್ಷೀಯ ಕೂಟ ಮುಂದುವರೆಯಬೇಕೆಂದು ನಿರ್ಧರಿಸಲಾಗಿತ್ತು. 1955 ರಲ್ಲಿ ರೂಪಿಸಿದ 'ಸ್ವಾತಂತ್ರ್ಯ ಸನದು' ನೆಲೆಯಲ್ಲಿ ಈ ಸಹಕಾರ ಇತ್ತು.

'1996 ಪ್ರಾಜೆಕ್ಟ್' ಮತ್ತು '2008 ಭಿನ್ನಮತೀಯರು'

1994 ರಲ್ಲಿ ಮೊದಲ ಬಾರಿಗೆ ಎ.ಎನ್.ಸಿ.ಚುನಾಯಿತವಾಗಿ ಸರ್ಕಾರ ರಚನೆ ಮಾಡಿದ ನಂತರ 1996 ರಲ್ಲಿ ರೂಪಿಸಿದ ಸಂವಿಧಾನ 'ಸ್ವಾತಂತ್ರ್ಯ ಸನದಿ' ನ ಹೆಚ್ಚಿನ ಅಂಶಗಳನ್ನು ಅಳವಡಿಸಿತು. ಕೈಗಾರಿಕೆಯ ರಾಷ್ಟ್ರೀಕರಣ ಮತ್ತು ಭೂಮಿಯ ಪುನರ್ ಹಂಚಿಕೆಯ ಸುಧಾರಣೆ ಸನದಿನಲ್ಲಿದ್ದು ಸಂವಿಧಾನದಲ್ಲಿ ಬಿಟ್ಟು ಹೋದ ಎರಡು ಪ್ರಮುಖ ಅಂಶಗಳು. ಸಂವಿಧಾನದಲ್ಲಿ ಅಳವಡಿಸಿದ ಸನದಿನ ಅಂಶಗಳ ಜಾರಿ ಸಹ ಸಮರ್ಪಕವಾಗಿ ಆಗಿಲ್ಲ. 1996 ರಲ್ಲಿ ಅಂಗೀಕರಿಸಿದ ಆರ್ಥಿಕ ನೀತಿಗಳು ಇದಕ್ಕೆ ಅನುಗುಣವಾಗಿ ಇರಲಿಲ್ಲ. ಜಾಗತಿಕರಣದ ನವ-ಉದಾರವಾದಿ ನೀತಿಗಳನ್ನು ಅನುಸರಿಸಲಾಯಿತು. ವಿದೇಶಿ ಬಂಡವಾಳವನ್ನು ಆಕರ್ಷಿಸುವುದು, ಮಾರುಕಟ್ಟೆ ಇಷ್ಟಪಟ್ಟದ್ದು ಮಾಡುವುದು ಎ.ಎನ್.ಸಿ. ಸರ್ಕಾರದ ನಾಯಕತ್ವದ ಘೋಷಣೆಯಾಯಿತು. 'ಸ್ವಾತಂತ್ರ್ಯ ಸನದಿ'ನ ಜನ-ಪರ ಅಭಿವೃದ್ಧಿ, ಸಂಪತ್ತು ಹಂಚಿಕೆಗಳು ಎಜೆಂಡಾದಲ್ಲೂ ಇರಲಿಲ್ಲ. ಇದನ್ನು ಕಮ್ಯೂನಿಸ್ಟ್ ಪಕ್ಷ '1996 ಪ್ರಾಜೆಕ್ಟ್' ಎಂದು ಕರೆದು ವಿರೋಧಿಸಿತು. ಜಾಗತಿಕ ಮತ್ತು ದೇಶೀಯ ಬಂಡವಾಳಶಾಹಿ, ಸರ್ಕಾರ ನಡೆಸುತ್ತಿದ್ದ ವ್ಯಕ್ತಿಗಳ ಗುಂಪು, ಮತ್ತು ಬೆಳೆಯುತ್ತಿರುವ ಕರಿಯ ಬಂಡವಾಳಶಾಹಿ - ಇವರ ನಡುವಿನ ವರ್ಗ ಸಖ್ಯತೆ ಇದಕ್ಕೆ ಕಾರಣ ಎಂದು ಗುರುತಿಸಿತು. ಎ.ಎನ್.ಸಿ. ಸಂಘಟನಾ ನೀತಿ ಮತ್ತು ಮೌಲ್ಯಗಳು, ತ್ರಿಪಕ್ಷೀಯ ಕೂಟದ ಆಶಯಗಳಿಗೆ ವಿರುದ್ಧವಾಗಿ ಇವರು ಎ.ಎನ್.ಸಿ.ಯನ್ನು ಸರ್ಕಾರೀ ಪಕ್ಷವಾಗಿ ಪರಿವರ್ತಿಸಲು ಪ್ರಯತ್ನಿಸಿದರು. '1996 ಪ್ರಾಜೆಕ್ಟ್' ತ್ರಿಪಕ್ಷೀಯ ಕೂಟ ಮಾತ್ರವಲ್ಲ ಎ.ಎನ್.ಸಿ.ಯನ್ನು ಸಹ ಸರ್ಕಾರದ ನೀತಿ ನಿರ್ಧಾರ ಮತ್ತು ಜಾರಿಯಿಂದ ದೂರ ಇಡಲು ಪ್ರಯತ್ನಿಸಿತು. ಇದು ಎ.ಎನ್.ಸಿ. ಮತ್ತು ತ್ರಿಪಕ್ಷೀಯ ಕೂಟದೊಳಗೆ ಅತೃಪ್ತಿ, ಅನೈಕ್ಯತೆ, ಗುಂಪುಗಾರಿಕೆ, ಹಗರಣಗಳಿಗೆ ಅವಕಾಶ ಮಾಡಿಕೊಟ್ಟಿತು. ಇದು ಜನತೆಯಲ್ಲೂ ತೀವ್ರ ಅತೃಪ್ತಿಗೆ ಕಾರಣವಾಗಿದೆ.

ಈ ಪ್ರಯತ್ನಗಳ ವಿರುದ್ಧ ಎ.ಎನ್.ಸಿ. ಮತ್ತು ತ್ರಿಪಕ್ಷೀಯ ಕೂಟದ ನಾಯಕರು ಮತ್ತು ಕಾರ್ಯಕರ್ತರು ದನಿ ಎತ್ತುತ್ತಾ ಬಂದಿದ್ದಾರೆ. ಡಿಸೆಂಬರ್ 2007 ರಲ್ಲಿ ನಡೆದ 52 ನೇ ಎ.ಎನ್.ಸಿ. ಸಮ್ಮೇಳನದಲ್ಲಿ ಇದು ಆಸ್ಫೋಟಗೊಂಡಿತು. '1996 ಪ್ರಾಜೆಕ್ಟ್' ಮತ್ತು ಅದರ ನಾಯಕರ ವಿರುದ್ಧ ಎ.ಎನ್.ಸಿ. ಪ್ರತಿನಿಧಿಗಳು ಬಂಡೆದ್ದರು. ಎ.ಎನ್.ಸಿ. ನಾಯಕತ್ವದ ಚುನಾವಣೆಯಲ್ಲೂ ಇದು ವ್ಯಕ್ತವಾಯಿತು. ಎ.ಎನ್.ಸಿ. ಅಧ್ಯಕ್ಷ ಸ್ಥಾನ ಮತ್ತು ನಾಯಕತ್ವದ ಚುನಾವಣೆಯಲ್ಲಿ ತಾಬೋ ಮಬೇಕಿ ತಂಡ ಸೋತು ಜೇಕೊಬ್ ಝುಮಾ ತಂಡ ಜಯ ಗಳಿಸಿತು. 52 ನೇ ಎ.ಎನ್.ಸಿ. ಸಮ್ಮೇಳನ ಎ.ಎನ್.ಸಿ. ಮತ್ತು ತ್ರಿಪಕ್ಷೀಯ ಕೂಟದ ಆಶಯಗಳನ್ನು ಎತ್ತಿ ಹಿಡಿದು, ಅದರ ಜಾರಿ ಬೀದಿ, ಗ್ರಾಮ ಮತ್ತು ಬ್ಲಾಕ್ ಮಟ್ಟದ ಸಮಿತಿಗಳನ ರಚಿಸಲು ಕರೆ ನೀಡಿತು. ಸಮ್ಮೇಳನ ಅಂಗೀಕರಿಸಿ ಪ್ರಗತಿಪರ ಕಾರ್ಯಕ್ರಮ, ಗಟ್ಟಿಗೊಂಡ ತ್ರಿಪಕ್ಷೀಯ ಕೂಟದ ಐಕ್ಯತೆ '1996 ಪ್ರಾಜೆಕ್ಟ್' ಜನ ಇಷ್ಟವಾಗಲಿಲ್ಲ. ಎ.ಎನ್.ಸಿ. ಸಮ್ಮೇಳನ ನಿರ್ಣಯಗಳ ನಂತರವೂ ತಮ್ಮ ನೀತಿಗಳನ ಮುಂದುವರೆಸಿದರು. ಸರ್ಕಾರ ಮತ್ತು ಪಕ್ಷ ವಿಭಾಗಗಳ ನಡುವೆ ಘರ್ಷಣೆಗೆ ಇದ ಎಡೆಕೊಟ್ಟಿತು. ಇದರಲ್ಲಿ ಸರ್ಕಾರ, ನ್ಯಾಯಾ ಮುಂತಾದವುಗಳ ದುರುಪಯೋಗ ನಡೆಯಿತ ತಾಬೋ ಮಬೇಕಿಯವರನ್ನು ಅಧ್ಯಕ್ಷ ಪದವಿಯಿಂದ ವಾಪಸು ಕರೆಯುವುದು ಬಿ ಯಾವ ಹಾದಿ ಉಳಿಯಲಿಲ್ಲ. ಎ.ಎನ್.ಸಿ. ಮ ಸರ್ಕಾರವನ್ನು ತಮಗೆ ಬೇಕಾದಂ ನಿಯಂತ್ರಿಸುವುದು ಅಸಾಧ್ಯ ಎಂದು ಗೊತ್ತಾದಾ ಅವರು ಪಕ್ಷ ಬಿಡುವ ನಿರ್ಧಾರ ಮಾಡಿದರು. ಗುಂಪೇ '2008 ಭಿನ್ನಮತೀಯರು'. ಇವರ ಕಮ್ಯೂನಿಸ್ಟ್ ಪಕ್ಷ ಪ್ರತಿ-ಕ್ರಾಂತಿಯ ಹೊಸ ಮು ಎಂದು ಕರೆದಿದ್ದು, ಅವರನ್ನು ಸೋಲಿಸಿ ಎ.ಎನ್. ಮತ್ತು ತ್ರಿಪಕ್ಷೀಯ ಕೂಟದ ಐಕ್ಯತೆ ಕಾಪಾಡ ಕರೆ ಕೊಟ್ಟಿದೆ.

ರೂಢಿ

ಸೂರಿಲ್ಲದಿದ್ದರೂ ಬದುಕನ್ನು ದೂಡಿ
ಈ ಎಲ್ಲ ಬಡವರಿಗೆ ಉಂಟಯ್ಯ ರೂಢಿ
ಗುಡಿ-ಮಠವ ಕಟ್ಟಲಿಕೆ ಅದೆಷ್ಟೇ ಭೂಮಿ
ಇದ್ದರೂ ಕಡಿಮೆಯೇ ಅನ್ನುವರು ಸ್ವಾಮಿ
-ವಿಡಂಬಾರಿ

ನಿರಾಶೆ ತಂದ ಒಬಾಮಾ ಸಂಪುಟ

ಅಮೆರಿಕದ ಚುನಾಯಿತ ಅಧ್ಯಕ್ಷ ಒಬಾಮಾ ತಮ್ಮ ಸಂಪುಟವನ್ನು ಹೆಚ್ಚು ಕಡಿಮೆ ಘೋಷಿಸಿದ್ದು, ಅದು ಅವರ ಬೆಂಬಲಿಗರಲ್ಲಿ ನಿರಾಶೆ ತಂದಿದೆ. ಸಂಪುಟದ ಸದಸ್ಯರಲ್ಲಿ ಯಾರೂ ಅವರು ತಮ್ಮ ಚುನಾವಣಾ ಪ್ರಚಾರದಲ್ಲಿ ತರುವೆನೆಂದ 'ನಾವು ನಂಬಬಹುದಾದ ಬದಲಾವಣೆ'ಯನ್ನು ತರುವ ಸಾಮರ್ಥ್ಯ ಹೊಂದಿರುವ ಸೂಚನೆ ಸ್ವಲ್ಪ ಸಹ ಇಲ್ಲ. ಅವರು ಇಂತಹ 'ಬದಲಾವಣೆ'ಗೆ ಬದ್ಧರಾದವರೂ ಅಲ್ಲ. ಸಂಪುಟ ಸದಸ್ಯರಲ್ಲಿ ಹೆಚ್ಚಿನವರು ಬಿಲ್ ಕ್ಲಿಂಟನ್ ಅಥವಾ ಜಿಮ್ಮಿ ಕಾರ್ಟರ್ ಸಂಪುಟದಲ್ಲಿ ಕೆಲಸ ಮಾಡಿದವರು. ಈ ವರೆಗೆ ಯಾವ ಹೊಸ ಮುಖವೂ, ಬದಲಾವಣೆಯ ಮುಖ ಆಗಬಹುದಾದ ಯಾರೂ ಕಂಡಿಲ್ಲ. ಬುಶ್ ರಕ್ಷಣಾ ಕಾರ್ಯದರ್ಶಿಯ ಮುಂದುವರಿಕೆ ಮತ್ತು ಹಿಲೇರಿಯನ್ನು ವಿದೇಶಾಂಗ ಕಾರ್ಯದರ್ಶಿಯಾಗಿಸಿದ್ದು ಅವರ ಇರಾಕ್ ಯುದ್ಧದ ಬಗೆಗಿನ 'ಬದಲಾವಣೆ'ಯ ಭರವಸೆಯನ್ನು ಹುಸಿಯಾಗಿಸುತ್ತದೆ ಎಂಬ ಗುಮಾನಿ ಹರಡಿದೆ.

ಡೆಮೊಕ್ರಾಟಿಕ್ ಪಕ್ಷದ ಐಕ್ಯತೆಯ ಹೆಸರಲ್ಲಿ 'ಬದಲಾವಣೆ'ಯ ಭರವಸೆಯನ್ನು ಗಾಳಿಗೆ ತೂರಲಾಗಿದೆ. ಸಂಪುಟ ಡೆಮೊಕ್ರಾಟಿಕ್ ಪಕ್ಷದ ಬಲಪಂಥೀಯರನ್ನು ಒಳಗೊಂಡಿದ್ದು, ಆ ಪಕ್ಷದ ಪ್ರಾತಿನಿಧಿಕ ತಂಡ ಸಹ ಅಲ್ಲ. ಒಬ್ಬನೇ ಒಬ್ಬ ಡೆಮೊಕ್ರಾಟಿಕ್ ಪಕ್ಷದ ಎಡ ಪಂಥೀಯರ ಆಯ್ಕೆಯ ಯೋಚನೆ ಸಹ ಮಾಡಿಲ್ಲ. ಈ ತಂಡ "ನಾವು ನಂಬಬಹುದಾದ ಬದಲಾವಣೆ'ಯನ್ನು ಹೇಗೆ ತಂದೀತು. ಎಂದು ಪಕ್ಷದ ಬೆಂಬಲಿಗರೇ ದೂರಿದ್ದಾರೆ.

ಇದ್ದದ್ದು ಇದ್ದಾಂಗ

...ಅಭಿವೃದ್ಧಿಗೆ ಹಸಿವಿನ ಭಾಷೆ ...ರ್ಥವಾಗಬೇಕು. "ಶ್ರೀಗಂಧದ, ಕರ್ನಾಟಕ ...ದು ಹೆಮ್ಮೆ ಪಡುವುದರ ಜೊತೆಗೆ ಹೊಂಗೆ, ...ಣಸೆ ಕರ್ನಾಟಕದ ನೋವು ...ರ್ಥವಾಗುವಂತಾಗಬೇಕು. ಅನ್ನ ಇಲ್ಲದ ಕನ್ನಡಿಗರ ...ತು ಯೋಚಿಸಿದರೆ ಕನ್ನಡ ಉಳಿಯುತ್ತದೆ. ...ವೃದ್ಧಿಗೆ ಹಸಿವಿನ ಭಾಷೆ ಅರ್ಥವಾಗಬೇಕು."

ಡಾ|| ಬರಗೂರ ರಾಮಚಂದ್ರಪ್ಪ

...ಮನರಂಜನೆ ಅಲ್ಲ

"ಸಾಹಿತ್ಯ ಮನರಂಜನೆ ನೀಡುವಂತಹದ್ದಲ್ಲ. ...ನದ ವಿಕಾಸವನ್ನು ಬಯಸುವಂತಹವರು ಇದನ್ನು ...ೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಕೇವಲ ...ಷನ್ ಅಗ್ಗದ ಜನಪ್ರಿಯತೆಗಾಗಿ ಸಂಶೋಧನೆ ...ತ್ಯ ಚಟುವಟಿಕೆಗಳಲ್ಲಿ ತೊಡಗಬಾರದು. ...ರ್ಪೂರ್ಣವಾದ ಸಂಶೋಧನೆಯಲ್ಲಿ ...ದಗಿದಾಗ ಮಾತ್ರ ಉತ್ತಮ ಗ್ರಂಥ ಹೊರಬರಲು ..."

ಡಾ|| ಯು.ಆರ್.ಅನಂತಮೂರ್ತಿ

...ದದಿಂದ

"ಯಾವುದೇ ಸಾಕ್ಷ್ಯಾಧಾರಗಳಿಲ್ಲದೇ ...ಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಸಾಧ್ವಿ ...ಜ್ಞಾಸಿಂಗ್‌ರನ್ನು ಬಂಧಿಸಿ, ಚಿತ್ರಹಿಂಸೆ ...ತಲಾಗಿದೆ. ಅವರ ಶಾಪದಿಂದಾಗಿಯೇ ...ಮಂತ್ ಕರ್ಕರೆ ಗುಂಡಿಗೆ ಬಲಿಯಾಗಿದ್ದಾರೆ."

-ಪ್ರಮೋದ್ ಮುತಾಲಿಕ್

...ಸ್ತವದೆಡೆಗೆ

"ಭ್ರಮೆಯಿಂದ ಪ್ರೇಕ್ಷಕರನ್ನು ವಾಸ್ತವದೆಡೆಗೆ ...ರಗೊಳಿಸಿ ಪ್ರಯೋಗಶೀಲ ಚಿಂತನೆಗಳ ...ಲಕ ಅದರ ಸಾಮಾಜಿಕ ಜವಾಬ್ದಾರಿಯನ್ನು ...ಪಿಸಿಕೊಡುವುದೇ ಪರ್ಯಾಯ ಸಿನಿಮಾದ ...ಯಾಗಿದೆ"

-ಗಿರೀಶ್‌ಕಾಸರವಳ್ಳಿ,
ಖ್ಯಾತ ಚಿತ್ರ ನಿರ್ದೇಶಕರು

ಅಮೇರಿಕದ ಸೃಷ್ಟಿ

"...ಇಂದು ಪಾಕಿಸ್ತಾನದಲ್ಲಿ ನೆಲೆ ಊರಿ ಭಾರತದ ಮೇಲೆ ದಾಳಿ ಇಡುತ್ತಿರುವ ಭಯೋತ್ಪಾದಕರೆಲ್ಲಾ ಒಂದು ಕಾಲದಲ್ಲಿ ಅಮೇರಿಕ ಸೃಷ್ಟಿಸಿದ್ದ ಭಸ್ಮಾಸುರರ ಸಂತತಿಗಳು. ಅವರಲ್ಲೊಬ್ಬ ಭಸ್ಮಾಸುರನ ಹೆಸರು ಒಸಾಮ ಬಿನ್ ಲಾಡೆನ್. ಸೌದಿಯ ಶ್ರೀಮಂತ ತಂದೆಯ ಬಂಡುಕೋರ ಮಗ ಒಸಾಮ, ಅಫ್ಘಾನ್‌ಗೆ ಬಂದು ರಷ್ಯಾ ವಿರುದ್ಧದ ಯುದ್ಧದಲ್ಲಿ ಸೇರಿಕೊಂಡ ಸಾವಿರಾರು ಜೆಹಾದಿಗಳಂತೆ ಆತನಿಗೂ ತರಬೇತಿ ನೀಡಿ ಅಣಿಗೊಳಿಸಿದ್ದು ಅಮೇರಿಕಾದ ಸಿಐಎ. ಹತ್ತು ವರ್ಷಗಳ ಯುದ್ಧದ ವೈಫಲ್ಯದ ನಂತರ ಸೋವಿಯತ್ ರಷ್ಯಾದ ಸೇನೆ ಸೋಲೊಪ್ಪಿಕೊಂಡು ಆಫ್ಘಾನಿಸ್ತಾನದಿಂದ ಹಿಂದಕ್ಕೆ ಸರಿಯಿತು. ಸೋವಿಯತ್ ರಷ್ಯಾವನ್ನು ನಾಶಗೊಳಿಸುವ ಉದ್ದೇಶ ಸಾಧಿಸಿದ ನಂತರ ಅಮೇರಿಕಾ ಅಫ್ಘಾನಿಸ್ತಾನದಿಂದ ಜಾಗ ಖಾಲಿ ಮಾಡಿತು. ಬಾಡಿಗೆ ಭಂಟರಾಗಿದ್ದ ಜೆಹಾದಿಗಳು ಒಮ್ಮಿಂದೊಮ್ಮೆಲೇ ನಿರುದ್ಯೋಗಿಗಳಾಗಿ ಹೋದರು. ಕೊಲೆಗಡುಕರನ್ನು ಸೃಷ್ಟಿಸಿ ಅವರಿಗೆ ತರಬೇತಿ ನೀಡಿ, ಕೆಲಸ ಮುಗಿದ ಮೇಲೆ ಅವರು ಸಾಮಾನ್ಯ ಮನುಷ್ಯರಂತೆ ಜೀವನ ಸಾಗಿಸಬೇಕೆಂದು ನಿರೀಕ್ಷಿಸುವುದ ಮೂರ್ಖತನ.

ಈ ನಿರುದ್ಯೋಗಿ ಜೆಹಾದಿಗಳಿಗೆ ಕಾಶ್ಮೀರ ವಿರುದ್ಧದ 'ಸ್ವಾತಂತ್ರ್ಯ ಹೋರಾಟ'ದ ಉದ್ಯೋಗ ಕಲ್ಪಿಸಿಕೊಟ್ಟದ್ದು ಪಾಕಿಸ್ತಾನ. ಇದರ ಪರಿಣಾಮವಾಗಿಯೇ 1989ರ ನಂತರ ಜಮ್ಮು ಮತ್ತು ಕಾಶ್ಮೀರದಲ್ಲಿ ಇದ್ದಕ್ಕಿದ್ದಂತೆ ಭಯೋತ್ಪಾದಕ ಕೃತ್ಯಗಳು ಉಲ್ಬಣಗೊಂಡಿದೆ...."

ದಿನೇಶ್ ಅಮೀನ್ ಮಟ್ಟು, ಪ್ರಜಾವಾಣಿಯಲ್ಲಿ

....ಶಾಂತಿದೂತರು

ಪುಟ 11 ರಿಂದ

ಅರಿವಿನ ಪರಿಧಿಯನ್ನು ಹೆಚ್ಚಿಸಲು ಮುಂದು ಬರಬೇಕು ಎಂದು ಅವರು ಕರೆಕೊಟ್ಟರು. ನಂತರ ವಿಜಯಕುಮಾರ ಸೋನಾರೆಯವರ ನೇತೃತ್ವದಲ್ಲಿ ಕಲಾತಂಡದ ವಿದ್ಯಾರ್ಥಿಗಳು ಶುದ್ಧ ದೇಶಭಕ್ತಿ ಬಿಂಬಿಸುವ ಬೀದಿ ನಾಟಕ ಪ್ರದರ್ಶಿಸಿದರು. ಇದಕ್ಕೂ ಮುಂಚೆ ಉರ್ಕಿ, ಚಿಟ್ಟಾ, ನಾರಾಯಣಪುರ, ಬಸವಕಲ್ಯಾಣ, ಧುಮ್ಮನಸೂರ, ಶೇರ್ದಾ ಮುಂತಾದ ಹಳ್ಳಿಗಳಿಂದ ಬಂದಿದ್ದ ಸಾವಿರಾರು ಜನರು ಪಕ್ಷದ ಧ್ವಜಧಾರಿಗಳಾಗಿ ಕಲ್ಯಾಣದ ಬೀದಿಯುದ್ದಕ್ಕೂ ಪಥಸಂಚಲನ ನಡೆಸಿದರು. ಕುಡಗೋಲು ಸುತ್ತಿಗೆಯ ಕೆಂಪು ಬಾವುಟವು ಅಕ್ಷರಶ: ಎಲ್ಲರ ಕಂಗಳ ಅಂಗಳದಲ್ಲಿ ಸಮಾನತೆಯ ಫಲವಾಗಿ ಹೊಳೆಯುತ್ತಿತ್ತು. ಸಂಗಾತಿಗಳಾದ ಅಂಬುಬಾಯಿ ಮಾಳಗೆ, ಬಸವರಾಜ್, ದಿನೇಶ್, ಅಮರೇಶ್, ದೇವಾನಂದ, ಶಿವರಾಜ್ ಪಾಟೀಲ ಯಶವಂತ, ಅನಿಲ, ಸುನಿಲ, ಇವರೆಲ್ಲರ ಸಮೃದ್ಧ ಜ್ಯೋಶ್ (ಉಮೇದು) ಶಾಂತಿ ಸಂದೇಶಗಳ ಘೋಷಣೆಗಳನ್ನು ಬಾನಂಗಳಕ್ಕೆ ಮುಟ್ಟಿಸುತ್ತಿತ್ತು. ಬಣ್ಣಬಣ್ಣದ ಕಟೌಟ್, ಧ್ವಜ, ಬ್ಯಾನರ್, ಭಿತ್ತಿಪತ್ರಗಳಿಂದ ಸಿಂಗರಿಸಿಕೊಂಡಿದ್ದ ಜಾಥಾದ ವಾಹನವು "ಸರ್ವ ಜನಾಂಗದ ಶಾಂತಿಯ ತೋಟ'' ಎಂಬ ಫಲಕದೊಂದಿಗೆ ಮುಂದಿನೂರಿಗೆ ತೆರಳಿತು.

ಆಹಾರ

ಹಾಲು ತುಪ್ಪವು ಮತ್ತೆ ಗೋಡಂಬಿ ದ್ರಾಕ್ಷಿ
ಇಲ್ಲದಿರೆ ಕೆಲವರಿಗೆ ತುಂಬದೈಕುಕ್ಷಿ
ಉಳಿದಿರುವ ಬಡವರಿಗೆ ಹಳಸಿರುವ ಕೂಳು
ಎಸೆದರೂ ನಡೆದೀತು ಸಾಗುವುದು ಬಾಳು

- ವಿಡಂಬಾರಿ

ಕವನ

ಢೋಂಗಿ ದೇಶ ಭಕ್ತರಿಗೊಂದು ಪ್ರಶ್ನೆ

ಅರಳುವ ಮೊಗ್ಗಿನ
ಕೊರಳಿಗೆ
ಉರುಳು ಬಿಗಿದು
ಬಣ್ಣ, ಪರಿಮಳ
ತುಲನೆ ಮಾಡಬೇಡ

ಕಣಜ ತುಂಬಾ
ಹುಳುಕು ಕಾಳು ತುಂಬಿ
ಸಮೃದ್ಧಿ ಬೆಳೆ
ಸಾಧನೆ, ಕೀರ್ತಿ
ಬೊಗಳೆ ಬಿಡಬೇಡ

ದೇಶ, ಭಾಷೆ
ಒಂದೇ ಆದ್ರೂ
ಒಡಲು, ಉಸಿರು
ಬೇರೆ-ಬೇರೆ ಅಲ್ಲವೇ?

ಅಳು ನೂರು- ನಗು ಮೂರು
ಸಮಾನತೆ, ಸಾಮರಸ್ಯ
ಆಗಲುಂಟೇ?

ಕರುಣೆ, ದಾನ
ಸ್ವಾತಂತ್ರ್ಯ, ಸಹಬಾಳ್ವೆ
ಆಗಲುಂಟೇ?

ಮನಸು, ಮಾತು
ಬುದ್ಧಿ, ಹೃದಯ
ಅಶುದ್ಧವಾದೊಡೆ
ಬಾಳಿಗೊಂದು ಬೆಲೆ ಉಂಟೆ?

-ಲಕ್ಷ್ಮಣ್

....1857 ರ ಘಟ್ಟ

...2 ರಿಂದ

...ರ್ವಜನಿಕವಾಗಿ ಎಳೆದೊಯ್ದು ಕೊಂದು ...ದರು. ಅಯೋಧ್ಯೆಯಲ್ಲಿ ಹಿಂದೂ ಮುಸ್ಲಿಮರು ...ಯ ವೃಕ್ಷವನ್ನು ರಕ್ತ ಚೆಲ್ಲಿ ಬೆಳೆಸಿದ್ದರು.

...ರ್ಯಾಣದ 'ಹಾಂಸಿ'ಯ ಉದಾಹರಣೆಯನ್ನು ...ಡಿ. ಅಲ್ಲಿ ಬೇರೆ ಬೇರೆ ಮತ ಪಂಥದವರು ...ಷರನ್ನು ಎದುರಿಸಿದರು. ಅಲ್ಲಿ ಬ್ರಿಟಿಷರಿಗೆ ...ಸ್ವಪ್ನವಾಗಿದ್ದವರು ಹುಕುಂ ಚಂದ್ ಜೈನ್ ಮತ್ತು ...ೀರ್ ಬೇಗ್ ಅವರ ಜೋಡಿ. ಹುಕುಂ ಚಂದ್ ...ೀ ವಿದ್ವಾಂಸ, ಗಣಿತಜ್ಞ, ಕಾನೂನು ತಜ್ಞ ...ೂ ತನ್ನ ಕ್ಷೇತ್ರದ ದೊಡ್ಡ ಜಮೀಂದಾರ. ಆತ ...ರ ಸಂಗ್ರಾಮದ ಸುದ್ದಿ ತಿಳಿಯುತ್ತಲೇ ತನ್ನ ...ವರ್ತಿ ಮುನೀರ್ ಬೇಗ್ ಜತೆಗೂಡಿ ಸಶಸ್ತ್ರ ... ನಡೆಸಿದ. ನಿರ್ಣಾಯಕ ಹಂತದಲ್ಲಿ ಮೊದಲೇ ...ರ್ಧಾನಿಸಿಕೊಂಡಂತೆ ದಿಲ್ಲಿಯಿಂದ ಸಹಾಯ ...ದೇ ಇದ್ದುದರಿಂದ ಈರ್ವರೂ ಬ್ರಿಟಿಷರಿಗೆ ...ಕ್ಕರು. ಗಲ್ಲು ಶಿಕ್ಷೆಯ ನಂತರ ಹುಕುಂ ಚಂದ್ ... ದೇಹಕ್ಕೆ ದನದ ಕೊಬ್ಬನ್ನು ಹಚ್ಚಿ ದಫನ ...ಲಾಯಿತು!. ಅದೇ ರೀತಿ ಮುನೀರ್ ಬೇಗ್‌ನ ದೇಹಕ್ಕೆ ಹಂದಿಯ ನೆಣ ಹಚ್ಚಿ ಇಸ್ಲಾಂಗೆ ವಿರುದ್ಧವಾಗಿ ಸುಟ್ಟು ಹಾಕಲಾಯಿತು. ಇದು ಧರ್ಮವನ್ನು ಪರಿಹಾಸ್ಯ ಮಾಡುವ ಇಂಗ್ಲೀಷರ ವಿಕೃತ ಪ್ರಕೃತಿ. ಆನಂತರ ಹುಕುಂ ಚಂದ್‌ನ 13 ವರ್ಷ ಪ್ರಾಯದ ಅಮಾಯಕ ಅಳಿಯನನ್ನು ವಿನಾಕಾರಣ ಸಾರ್ವಜನಿಕ ಸ್ಥಳದಲ್ಲಿ ಗಲ್ಲಿಗೇರಿಸಲಾಯಿತು.

ಹಿಂದೂ- ಮುಸ್ಲಿಂ ಸಮಿತಿ

ಮಧ್ಯಪ್ರದೇಶದ ಮಾಲವಾ ಕ್ಷೇತ್ರದಲ್ಲಿ ಬ್ರಿಟಿಷರಿಗೆ ತಲೆನೋವಾಗಿದ್ದವರು ಶ್ರೇಷ್ಠ ನಾಯಕರಾದ ತಾಂತ್ಯಾ ಟೋಪಿ, ರಾವ್ ಸಾಹೇಬ್, ಫಿರೋಜ್ ಶಾಹ್ ಮತ್ತು ಮೌಲವೀ ಫಜಲ್ ಹಕ್. ಮೌಲವೀ ಫಜಲ್ ಹಕ್ ತನ್ನ 480 ಜತೆಗಾರರೊಂದಿಗೆ 17 ದಶಂಬರ್, 1858 ರಂದು ರಾನೌಡ್ ಯುದ್ಧದಲ್ಲಿ ಹುತಾತ್ಮನಾದ. ತಾಂತ್ಯಾ ಟೋಪಿ 1859 ತನಕ ಯುದ್ಧವನ್ನು ಮುಂದುವರಿಸುತ್ತಲೇ ಇದ್ದ. 18 ಏಪ್ರಿಲ್, 1859 ರಂದು ಆತನನ್ನು ಗಲ್ಲಿಗೇರಿಸಲಾಯಿತು.

ರುಹೇಲ್‌ಖಂಡದ ಸ್ವತಂತ್ರ ರಾಜ ಖಾನ್ ಬಹದೂರ್ ಶಾಹ್. ಆತನ ಮುಖ್ಯ ಸಂಗಾತಿ ಖುಷಿರಾಮ್. ರುಹೇಲ್‌ಖಂಡದ ರಾಜಕಾರ್ಯಗಳನ್ನು ನಡೆಸಲು ರಾಜನು 8 ಹಿಂದೂ ಮತ್ತು 8 ಮುಸ್ಲಿಮರ ಒಂದು ಸಮಿತಿಯನ್ನು ರಚಿಸಿದ್ದ. ಇಂಗ್ಲೀಷರು ಎರಡೂ ಸಮುದಾಯಗಳ ನಡುವೆ ಗಲಭೆ ಹಬ್ಬಿಸದಂತೆ ಆತ 'ಗೋವಧೆ'ಯನ್ನು ನಿಷೇಧಿಸುವ ಆಜ್ಞೆ ಹೊರಡಿಸಿದ್ದ. ಖಾನ್ ಬಹದೂರ್ ಶಾಹ್, ಖುಷಿರಾಮ್ ಮತ್ತುವರ 243 ಸಂಗಾತಿಗಳನ್ನು ಬರೇಲಿ ಕಮೀಷನರಿ ಎದುರುಗಡೆ ಸಾಮೂಹಿಕವಾಗಿ ನೇಣಿಗೇರಿಸಲಾಯಿತು. ಅವರ ಅಂತ್ಯಕ್ರಿಯೆಗೂ ಕುಟುಂಬದವರಿಗೆ ಅನುಮತಿ ಕೊಡಲಿಲ್ಲ. ಬಹಳ ದಿನಗಳ ಕಾಲ ಹೆಣಗಳು ಗಲ್ಲುಗಂಭದ ಮೇಲೆ ನೇತಾಡುತ್ತಲೇ ಇದ್ದವು.

ಮಧ್ಯ ಭಾರತದ ರಾಣಿ ಲಕ್ಷ್ಮೀ ಬಾಯಿಯ ಕ್ರಾಂತಿಕಾರಿ ಹೋರಾಟ ಬಹಳ ಪ್ರಖ್ಯಾತವಿದೆ. ಆದರೆ ಬಹಳ ಜನರಿಗೆ ತಿಳಿಯದೇ ಇರುವ ಸಂಗತಿಯೆಂದರೆ - ಆಕೆಯ ಮದ್ದು ಗುಂಡುಗಳ ಭಂಡಾರದ ಮುಖ್ಯಸ್ಥ ಒಬ್ಬ ಪಠಾಣ ಗುಲಾಮ್ ಗೌಸ್‌ಖಾನ್. ಆಕೆಯ ಕುದುರೆ ಸವಾರರ ಸೇನೆಯ ಮುಖ್ಯಸ್ಥ ಖುದಾಬಕ್ಷ್. 4 ಜೂನ್, 1858ರ ಯುದ್ಧದಲ್ಲಿ ರಾಣಿಯೊಂದಿಗೆ ಖುದಾಬಕ್ಷ್ ಕೂಡಾ ಹುತಾತ್ಮನಾದ. ಲಕ್ಷ್ಮೀ ಬಾಯಿಯ ಖಾಸಗಿ ಅಂಗರಕ್ಷಕಿ ಮುಸ್ಲಿಂ ಮಹಿಳೆ 'ಮುನ್‌ದಾರ್'. ಆಕೆ ರಾಣಿಗೆ ನೆರಳಿನಂತೆ ಜತೆಯಾಗಿ ಝಾನ್ಸಿ, ಕೂಂಚ್, ಕಲಪಿ ಮತ್ತು ಗ್ವಾಲಿಯರ್ ಯುದ್ಧಗಳಲ್ಲಿ ಬ್ರಿಟಿಷ್ ಸೇನೆಯನ್ನು ಎದುರಿಸಿದ್ದಳು. ಗ್ವಾಲಿಯರ್ ಯುದ್ಧದಲ್ಲಿ ರಾಣಿಯೊಂದಿಗೆ ಆಕೆಯೂ ಸಾಯಿಸಲ್ಪಟ್ಟಳು.

ಮುಜಫ್ಫರ್ ನಗರ ಜಿಲ್ಲೆಯ ಪರಗಣ ಠಾಣೆಯೆದುರು 11 ಜನ ಕ್ರಾಂತಿಕಾರಿ ಮಹಿಳೆಯರನ್ನು ಒಟ್ಟಿಗೇನೆ ನೇಣುಗಂಬಕ್ಕೇರಿಸಲಾಯಿತು. ಅವರಲ್ಲಿ ಆಶಾದೇವಿ, ಹಬೀಬಾ, ಮಾಮ್‌ಕೌರ್, ಭಗವತೀ ದೇವಿ ಮುಖ್ಯರು. ಅಸಗರಿ ಬೇಗಮ್‌ಳನ್ನು ಬಂಧಿಸಿ ಜೀವಂತವಾಗಿ ಸುಡಲಾಯಿತು.

ಹಿಂದೂ ಮುಸ್ಲಿಮ್ ಏಕತೆಯ ಇಂತಹ ಗೌರವಶಾಲಿ ಪರಂಪರೆ ಈ ದೇಶದಲ್ಲಿತ್ತು. ಇದನ್ನು ನಾಶ ಮಾಡಿದವರು, ಮಾಡುತ್ತಿರುವವರು ಯಾರು? ಯಾವ ಚಾರಿತ್ರಿಕ ಪರಿಸ್ಥಿತಿಗಳು ಇದಕ್ಕೆ ಕಾರಣ? ಇದನ್ನು ತಿಳಿದುಕೊಳ್ಳುವುದು ಕಷ್ಟಸಾಧ್ಯವಲ್ಲ. ಆದರೆ ಆ ತಿಳುವಳಿಕೆಯಿಂದ ಪಾಠ ಕಲಿತು ಆಳುವ ವರ್ಗಗಳ ವಿಭಜಕ ತಂತ್ರಗಳ ವಿರುದ್ಧ ವರ್ಗಹೋರಾಟವನ್ನು ತೀವ್ರ ಗೊಳಿಸಿದರೆ ಮಾತ್ರ ತುಂಡಾದ, ತುಂಡಾಗುತ್ತಿರುವ ಪರಂಪರೆಯನ್ನು ಮತ್ತೆ ಉಜ್ವಲ ಭವಿಷ್ಯದತ್ತ ಕೊಂಡೊಯ್ಯಬಹುದು.



'ಮಸ್ತ್ ಮಜಾ ಮಾಡಿ'-ಸುಸ್ತ್ ಆಗೋದು ನಿಜಾ ನೋಡಿ

ಹೊಸ ನಿರ್ಮಾಪಕ, ಹೊಸ ನಿರ್ದೇಶಕರ ಹೊಸ ಪ್ರಯತ್ನದ, ಹೊಸ ಬಾಟಲಿಯಲ್ಲಿ ಹಳೇ ಮದ್ಯವನ್ನು ತುಂಬಿದ ಚಿತ್ರ ಈ 'ಮಸ್ತ್ ಮಜಾ ಮಾಡಿ.'

ನಿರ್ದೇಶಕ ಅನಂತರಾಜುರವರಿಗೆ ಕಥೆ ಮುಖ್ಯವೇ ಅಲ್ಲ, ಅದು ಬೇಕಾಗಿಯೂ ಇಲ್ಲ ಅವರಿಗೆ. ಒಟ್ಟಿನಲ್ಲಿ ಹೇಗಾದರೂ ಮಾಡಿ ಜನರನ್ನು ನಗಿಸಬೇಕೆಂದು ಹಠಕ್ಕೆ ಬಿದ್ದಿದ್ದಾರೆ. ಜನ ನಗುತ್ತಾರೋ, ಬಿಡುತ್ತಾರೋ ಎಂಬ ಚಿಂತೆಯೂ ಇದ್ದಂತಿಲ್ಲ ಅವರಿಗೆ.

ಕುರಿಗಳು ಸಾರ್..., ಕೋತಿಗಳು.... ಗಳ ಮುಂದುವರಿದ ಭಾಗದಂತಿದೆ 'ಮಸ್ತ್ ಮಜಾ ಮಾಡಿ'. ಶ್ರೀಮಂತನೊಬ್ಬ ಸಾಯುವ ಮುನ್ನ ನಾಲ್ವರು ಉಡಾಳ ಯುವಕರಿಗೆ ಊಟಿಯ ಗಾರ್ಡನ್‌ನಲ್ಲಿ 20 ಕೋಟಿ ರೂಪಾಯಿ ಬಚ್ಚಿಟ್ಟಿದ್ದೇನೆಂದು ಹೇಳಿ ಸಾಯುತ್ತಾನೆ. ಅದನ್ನು ಪಡೆಯಲು ಹೊರಡುತ್ತಾರೆ ಈ ನಾಲ್ವರು, ಅವರೊಂದಿಗೆ ಮತ್ತಷ್ಟು ಜನ ಸೇರಿಕೊಳ್ಳುತ್ತಾರೆ. ಇವರೆಲ್ಲರ ಹುಚ್ಚಾಟ್ಟವೇ ಚಿತ್ರದ ಒಟ್ಟು ಕಥೆ.

ವಿಜಯರಾಘವೇಂದ್ರ, ಕೋಮಲ್, ದಿಗಂತ್ ಮತ್ತು ನಾಗಶೇಖರ್ ಈ ನಾಲ್ವರು ನಾಯಕರು. ಸೋಮಾರಿಗಳಾದ ಇವರು ಬೇರೆಯವರ ದುಡ್ಡಲ್ಲಿ ಮಜಾ ಮಾಡೋ ಹುಡುಗರು. ಬಚ್ಚಿಟ್ಟ 20 ಕೋಟಿ ದುಡ್ಡನ್ನು ಲಪಟಾಯಿಸಲು ಹೊರಡುತ್ತಾರೆ. ಹೋಗುವ ದಾರಿಯಲ್ಲಿನ ಅವರಿಗೆದುರಾಗುವ ಅಡೆತಡೆ, ಜೊತೆಯಾಗುವ ಇತರರ ಸಂಕಟ-ಕಾಟಗಳೇ ಹಾಸ್ಯದ ಹೂರಣ. ಎಲ್ಲೋ ಅಲ್ಲೊಮ್ಮೆ ಇಲ್ಲೊಮ್ಮೆ ನಗು ಬಂದರೂ, ಉಳಿದಂತೆ ಬಲವಂತದ ನಗು ಕಷ್ಟಸಾಧ್ಯ. ವಿಜಯರಾಘವೇಂದ್ರ ಬಹಳ ಗಂಭೀರವಾಗಿ ನಟಿಸಿ ಕನಿಕರ ಮೂಡಿಸಿದರೆ, ದಿಗಂತ್ ನೋಡಿದರೆ ಅಯ್ಯೋ ಪಾಪ ಎನಿಸುತ್ತೆ. ಇನ್ನೂ ಕೋಮಲ್‌ದ್ದು ಹಿಂದಿನ ಚಿತ್ರಗಳ ಪುನರವತಾರವಷ್ಟೇ. ವಿಶೇಷ ಪಾತ್ರದಲ್ಲಿ ಎಸಿಪಿಯಾಗಿ ಸುದೀಪ್ ಅಭಿನಯಿಸಿದ್ದರೂ ಅವರ ಹೆಚ್ಚುಗಾರಿಕೆಯೇನೂ ಚಿತ್ರದಲ್ಲಿ ಇಲ್ಲ. ನಾಯಕಿಯಾಗಿ ಜೆನ್ನಿಫರ್ ಇದ್ದರೂ, ಆಗಾಗ ಮುಖ ತೋರಿಸಿ ಹೋಗುತ್ತಾರಷ್ಟೇ.

ಚಿತ್ರದಲ್ಲಿ ಕಥೆಯೇ ಇಲ್ಲದಿರುವುದರಿಂದ ಒಂದೊಂದೇ ಹಾಸ್ಯ ದೃಶ್ಯಗಳನ್ನು ಜೋಡಿಸಿ ಎರಡೂವರೆ ಗಂಟೆ ಜಗ್ಗಲು ಬಹಳ ಪ್ರಯಾಸ ಪಟ್ಟಿದ್ದಾರೆ ನಿರ್ದೇಶಕರು. ಅದಕ್ಕೆ ಪೂರಕವಾಗಿ ಸಂಗೀತ ನಿರ್ದೇಶಕರ ಅಸಹಕಾರವೂ ಸೇರಿ ಚಿತ್ರ ಪೇಲವವಾಗಿದೆ.




ಅಂತಿಮವಾಗಿ ಐಟಂ ಸಾಂಗ್‌ನಲ್ಲಿ ಅಚ್ಚರಿಯಾಗಿ ಉಪೇಂದ್ರ ಕಾಣಿಸಿಕೊಂಡರೂ ಅವರಿಗಿಂತ ಅವರೊಂದಿಗೆ ಕುಣಿದಿರುವ ಐಟಂ ನಾಯಕಿಯರು ಗಮನ ಸೆಳೆಯುತ್ತಾರೆ. ಒಬ್ಬರಲ್ಲ, ಇಬ್ಬರಲ್ಲ ಸುಮಾರು ಹತ್ತಕ್ಕೂ ಹೆಚ್ಚು ನಾಯಕಿಯರು ಈ ಒಂದೇ ಹಾಡಿನಲ್ಲಿ ಬಂದು ಹೋಗುವುದೇ ಚಿತ್ರದ ಹೈಲೈಟ್. ಶರ್ಮಿಳಾ ಮಾಂಡ್ರೆ, ರೇಖಾ, ಆಂದ್ರಿತಾ ರೇ, ಸುಮನ್ ರಂಗನಾಥ್ ಮತ್ತು ಬುದ್ಧಿವಂತ ಚಿತ್ರದಲ್ಲಿ ನಟಿಸಿರುವ ಇತರ ನಾಯಕಿಯರು, ಇವರೆಲ್ಲಾ ಈ ಹಾಡಿನಲ್ಲಿ ಬಂದು ಕುಣಿದು ಹೋಗುತ್ತಾರೆ.

ಅಂತಿಮವಾಗಿ ಸಿನಿಮಾ ಎಂದ ಮೇಲೆ ಒಂದು ಏನಾದರೂ ಸಂದೇಶ ಇರಲೇಬೇಕಲ್ಲ. 20 ಕೋಟಿ ಸಿಕ್ಕಿದರೂ ಅದನ್ನು ಹಂಚಿಕೊಳ್ಳುವ ಸಲುವಾಗಿ ಎಲ್ಲರೂ ಕಿತ್ತಾಡುತ್ತಾ ಒಂದು ಸ್ಟೇಜ್‌ಮೇಲೆ ಬಂದು ನಿಲ್ಲುತ್ತಾರೆ. ಅದು ಅನಾಥ ಮಕ್ಕಳ ಸಲುವಾಗಿ ದೇಣಿಗೆ ಸಂಗ್ರಹಿಸುವ ಕಾರ್ಯಕ್ರಮ-ಅದೂ ನಾಯಕಿಯ ನೇತೃತ್ವದಲ್ಲಿ. ಅನಿವಾರ್ಯವಾಗಿ ಎಲ್ಲರೂ ತಮ್ಮ ಪಾಲಿನ ದುಡ್ಡನ್ನು ಅನಾಥ ಮಕ್ಕಳಿಗೆ ನೀಡುವ ಪರಿಸ್ಥಿತಿ ಬಂದು, ಅಂತಿಮ ಗಳಿಗೆಯಲ್ಲಿ ಜ್ಞಾನೋದಯವಾಗಿ ಹೃದಯಪೂರ್ವಕವಾಗಿ ಎಲ್ಲಾ ದುಡ್ಡನ್ನು ಅನಾಥ ಮಕ್ಕಳಿಗೆ ನೀಡುವುದರೊಂದಿಗೆ ಚಿತ್ರ ಮುಕ್ತಾಯ. ನಮಗೂ ಸಮಾಧಾನ-ಸದ್ಯ ಮುಕ್ತಿ ಸಿಕ್ಕಿತಲ್ಲ ಅಂತ.

ಭಾರತದಲ್ಲಿ ಫುಟ್ಬಾಲ್ ಮಾಂತ್ರಿಕ ಮರಡೋನಾ ಜ್ಯೋತಿಬಸು ಕುರಿತು ಅಭಿಮಾನ

'ಹ್ಯಾಂಡ್ಸ್ ಆಫ್ ಗಾಡ್' ಎಂದೇ ಖ್ಯಾತಿ ಪಡೆದಿರುವ ಫುಟ್ಬಾಲ್ ತಾರೆ ಡಿಯಾಗೊ ಮರಡೋನ ಮೊನ್ನೆ ಭಾರತಕ್ಕೆ ಬಂದು ಹೋದರು. ಈ ಸಂದರ್ಭದಲ್ಲಿ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಜ್ಯೋತಿಬಸುರವರನ್ನು ಅವರ ನಿವಾಸದಲ್ಲಿ ಭೇಟಿಯಾಗಿ ತಮ್ಮ ಅಭಿಮಾನ ವ್ಯಕ್ತಪಡಿಸಿದರು.



ಪಶ್ಚಿಮ ಬಂಗಾಳದ 'ಜ್ಯೋತಿ ದಾದಾ' ಎಂದೂ ಶುದ್ಧ ಹಸ್ತದ ಜನಪರ ರಾಜಕಾರಣಿ ಎಂದು ಪ್ರಸಿದ್ಧರಾಗಿರುವ, ಸತತ 24 ವರ್ಷಗಳ ಕಾಲ ಬಂಗಾಳದ ಮುಖ್ಯಮಂತ್ರಿಯಾಗಿದ್ದ ಸಿಪಿಐ(ಎಂ)ನ ಹಿರಿಯ ಮುಖಂಡ ಜ್ಯೋತಿ ಬಸುರವರ ನಿವಾಸದಲ್ಲಿ ಭೇಟಿಯಾಗಿದ್ದ ಮರಡೋನಾ ಕ್ಯೂಬಾದ 'ಕ್ರಾಂತಿಕಾರಿ' ನಾಯಕ ಫಿಡೆಲ್ ಕ್ಯಾಸ್ಟ್ರೋರ ಮೇಲೆ ಇರುವಷ್ಟೇ ಅಭಿಮಾನವನ್ನು ಬಸು ಮೇಲೆಯೂ ಹೊಂದಿರುವುದಾಗಿ ಹೇಳಿದರು.

ತಮ್ಮ ಕಾಲ್ಚಳಕದಿಂದ 1986 ಫಿಫಾ ವಿಶ್ವಕಪ್‌ನ್ನು ಅರ್ಜೆಂಟಿನಾ ಮುಡಿಗೇರಿಸಿದ ಡಿಯಾಗೊ ಮರಡೋನಾ ತಮ್ಮ ಕಾಲುಗಳ ಮೇಲೆ ವಿಶ್ವದ ಕ್ರಾಂತಿಕಾರಿ ನಾಯಕ ಯುವಜನರ ಸ್ಫೂರ್ತಿಯ ಸೆಲೆ ಚೆಗುವಾರಾರ ಚಿತ್ರವನ್ನು ಅಚ್ಚೆ ಹಾಕಿಸಿಕೊಂಡಿದ್ದಾರೆ.

ಪಶ್ಚಿಮ ಬಂಗಾಳದ 24 ಪರಗಣ ಜಿಲ್ಲೆಯ ಮಹೇಶ್ವಲದಲ್ಲಿ ಸ್ಥಳೀಯ ಪುರಸಭೆ ನಿರ್ಮಿಸಿರುವ ಫುಟ್ಬಾಲ್ ಕ್ರೀಡಾಂಗಣ ಉದ್ಘಾಟನೆಗಾಗಿ ಆಗಮಿಸಿದ ಮರಡೋನಾ ಇದೇ ಸಂದರ್ಭದಲ್ಲಿ ಮದರ್ ತೆರೇಸಾ ಸಮಾಧಿಗೂ ಭೇಟಿ ನೀಡಿದ್ದಾರೆ. ನನ್ನ ದೇಶದಿಂದ ಭಾರತ ಬಹಳ ದೂರವಿದೆ. ಆದರೆ ಇಲ್ಲಿಯೂ ನನಗೆ ಇಷ್ಟು ಅಭಿಮಾನಿಗಳಿರುವುದು ಅಚ್ಚರಿ ಉಂಟುಮಾಡಿದೆ. ನಾನು ಎಲ್ಲವನ್ನು ಸಾಧಿಸಿಯಾಗಿದೆ. ಏನೂ ಉಳಿದಿಲ್ಲ ಎಂದು ಭಾವಿಸಿದೆ. ಆದರೆ ಇಲ್ಲಿಯ ಅಭಿಮಾನಿಗಳನ್ನು ಕಂಡ ಮೇಲೆ ಸಾಧಿಸುವುದು ಬಹಳಷ್ಟಿದೆ ಎಂದು ಮರಡೋನಾ ಹೇಳಿದರು. ಕೊಲ್ಕೊತ್ತಾ ಸುಭಾಷ್ ಚಂದ್ರಬೋಸ್ ವಿಮಾನ ನಿಲ್ದಾಣಕ್ಕೆ ಮಧ್ಯರಾತ್ರಿ ಬಂದಿಳಿದಾಗಲೂ ಸುಮಾರು 30 ಸಾವಿರ ಅಭಿಮಾನಿಗಳು ಫುಟ್ಬಾಲ್ 'ದಂತಕತೆ' ನೋಡಲು ನೆರೆದಿದ್ದರು.

ತವರಿಗೆ ಮರಳುವ ಮುನ್ನ ಅರ್ಜೆಂಟಿನಾ ಫುಟ್ಬಾಲ್ ತಂಡದ ಕೋಚ್ ಆಗಿ ಕಾರ್ಯ ನಿರ್ವಹಿಸುತ್ತಿದ್ದು ಅದರ ಜೊತೆಗಿನ ಒಪ್ಪಂದ ಮುಗಿದ ಬಳಿಕ ಭಾರತದ ಕ್ರೀಡಾಭಿವೃದ್ಧಿಗಾಗಿ ಭಾರತಕ್ಕೆ ಆಗಮಿಸುವ ಅಭಿಲಾಷೆ ವ್ಯಕ್ತಪಡಿಸಿದ್ದಲ್ಲದೆ 12.36 ಲಕ್ಷ ರೂ.ಗಳ ದೇಣಿಗೆಯನ್ನು ಸಹ ನೀಡಿಹೋಗಿದ್ದಾರೆ ಮರಡೋನಾ.

- ಜಯರಾಮ್

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana,12. 18th Cross, S.R.Nagar, BANGALORE - 560 027 Karnataka (State) and Published at BANGALORE
No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH